ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಜೂನ್ 1 ಶನಿವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 46 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4





ಜೂ. 10ರಂದು ಕೂರ್ಗ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥಾಪನಾ ದಿನಾಚರಣೆ

ಮಡಿಕೇರಿ, ಮೇ 31– ಕೊಡವ ಎಜುಕೇಷನ್ ಸೊಸೈಟಿ ನಡೆಸುತ್ತಿರುವ ಕೂರ್ಗ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥಾಪನಾ ದಿನಾಚರಣೆಯನ್ನು ಜೂ. 10 ರಂದು ಬೆಳಗ್ಗೆ 10 ಗಂಟೆಗೆ ಸಿಐಟಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಮುಖ್ಯ ಅತಿಥಿಗಳಾಗಿ ಪಿವಿಎಸ್‌ಎಂ, ವಿಎಸ್‌ಎಂ, ಎಡಿಸಿ ಲೆಫ್ಟಿನೆಂಟ್ ಜನರಲ್ ಪಟ್ಟಚೆರುವಂಡ ಸಿ. ತಿಮ್ಮಯ್ಯ ಭಾಗವಹಿಸುವರು. ಕೊಡವ ಎಜುಕೇಷನ್ ಸೊಸೈಟಿ ಅಧ್ಯಕ್ಷ ಡಾ. ಎಂ.ಸಿ. ಕಾರಿಯಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ.

ವಿದ್ಯಾ ವಿಕಾಸ ಸಂಸ್ಥೆಯಲ್ಲಿ ಜಿಟಿಡಿ ಮತಯಾಚನೆ...



ಮೈಸೂರು–ಬನ್ನೂರು ರಸ್ತೆಯಲ್ಲಿರುವ ವಿದ್ಯಾ ವಿಕಾಸ್ ಶಿಕ್ಷಣ ಸಂಸ್ಥೆಗೆ ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡರು ಭೇಟಿ ನೀಡಿ, ದಕ್ಷಿಣ ಶಿಕ್ಷಕರ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಕೆ.ವಿವೇಕಾನಂದ ಪರ ಮತಯಾಚಿಸಿದರು. ಈ ವೇಳೆ ಸಂಸ್ಥೆಯ ಮುಖ್ಯಸ್ಥರಾದ ಕವೀಶ್ ಗೌಡರು ಜಿಟಿಡಿಯವರನ್ನು ಆತ್ಮೀಯವಾಗಿ ಅಭಿನಂದಿಸಿದರು. ಈ ವೇಳೆ ಉಪನ್ಯಾಸಕರು, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಮೈಸೂರು ಜಿಲ್ಲೆಯಲ್ಲಿ ಶಾಲೆಗಳು ಆರಂಭ

ಮೊದಲ ದಿನ 90 ಸಾವಿರ ವಿದ್ಯಾರ್ಥಿಗಳ ಹಾಜರಾತಿ

ಮೈಸೂರು, ಮೇ 31(ಬಿಎಲ್‌ಯು)– ಮೈಸೂರು ಜಿಲ್ಲೆಯಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲಾ ತರಗತಿಗಳು ಇಂದಿನಿಂದ ಆರಂಭವಾಗಿದ್ದು, ವಿದ್ಯಾರ್ಥಿಗಳು ಹಾಗೂ ಶಿಕ್ಷಕರ ಸಂಭ್ರಮದ ಸಮಾಗಮವಾಯಿತು.

ಶಾಲೆಯ ಆರಂಭದ ಮೊದಲ ದಿನವಾದ ಇಂದು ವಿದ್ಯಾರ್ಥಿಗಳು ಪಠ್ಯದ ಜೊತೆಗೆ ವಿವಿಧ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗಿಯಾಗಿ ಸಂತಸಪಟ್ಟರು.

ಮೈಸೂರು ಜಿಲ್ಲೆಯಲ್ಲಿ 3112 ಶಾಲೆಗಳಿದ್ದು, 1 ರಿಂದ 10ನೇ ತರಗತಿ ತನಕ ಇಂದು 90 ಸಾವಿರ ವಿದ್ಯಾರ್ಥಿಗಳು ತರಗತಿಗೆ ಹಾಜರಾಗಿದ್ದರು. ಈ ಮೂಲಕ ಇವತ್ತಿನ ಹಾಜರಾತಿ ಪ್ರಮಾಣ ಶೇಕಡ 62ರಷ್ಟಿತ್ತು.

ಶಿಕ್ಷಕರು ವೈಯುಕ್ತಿಕವಾಗಿ ವಿದ್ಯಾರ್ಥಿಗಳಿಗೆ ಸಿಹಿ ಹಂಚಿದರು. ಜೊತೆಗೆ ಮಕ್ಕಳೊಡನೆ ಹಲವು ಪಠ್ಯೇತರ ಚಟುವಟಿಕೆಯಲ್ಲಿ ಭಾಗಿಯಾಗಿದ್ದರು. ಈ ಮೂಲಕ ಶಾಲೆ ಆರಂಭದ ಮೊದಲ ದಿನದ ಸಂಭ್ರಮದಲ್ಲಿ ಮಿಂದೆದ್ದರು.

ಡಿಡಿಪಿಐ ಪಾಂಡು ಇಂದು ಶಿಕ್ಷಣ ಇಲಾಖೆಯ ಅಧಿಕಾರಿಗಳ ಜೊತೆ ಸಿದ್ದಲಿಂಗಪುರ ಸೇರಿದಂತೆ ಮೈಸೂರು ನಗರ ಮತ್ತು ಜಿಲ್ಲೆಯ ಹಲವು ಶಾಲೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ವಿದ್ಯಾರ್ಥಿಗಳಿಗೆ ಈಗಾಗಲೇ ಪಠ್ಯ ಪುಸ್ತಕಗಳನ್ನು ವಿತರಣೆ ಮಾಡಲಾಗಿದೆ. ಸೋಮವಾರ ಅಥವಾ ಮಂಗಳವಾರದ ವೇಳೆ ಸಮವಸ್ತ್ರಗಳನ್ನು ಕೂಡ ವಿತರಣೆ ಮಾಡಲಾಗುವುದು ಎಂದು ಪಾಂಡು ಮಾಹಿತಿ ನೀಡಿದರು.

ಶಾಲೆ ಆರಂಭವಾದ ಎರಡು ವಾರದ ನಂತರ ಶಾಲೆ ಬಿಟ್ಟ ಮಕ್ಕಳ ಬಗ್ಗೆ ಅಂಕಿ ಅಂಶಗಳು ದೊರೆಯಲಿದೆ. ತರುವಾಯ ಆ ಬಗ್ಗೆ ಮಾಹಿತಿ ಕಲೆ ಹಾಕಿ ಅವರನ್ನು ಮತ್ತೆ ಮರಳಿ ಶಾಲೆಗೆ ಕರೆ ತರಲು ಪ್ರಯತ್ನ ಮಾಡಲಾಗುವುದು ಎಂದು ಹೇಳಿದರು.

ಜೂನ್ 2ಕ್ಕೆ ಮರಳಿ ಜೈಲಿಗೆ ಹೋಗುತ್ತೇನೆ!

ನನ್ನನ್ನು ಕುಗ್ಗಿಸುವ ಯತ್ನ ನಡೆಯಲಿದೆ; ಆದರೆ ತಲೆಬಾಗಲ್ಲ: ಸಿಎಂ ಕೇಜ್ರಿವಾಲ್

ನವದೆಹಲಿ: ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರ ಜಾಮೀನು ಅವಧಿ ಶನಿವಾರ ಮುಕ್ತಾಯಗೊಳ್ಳಲಿದ್ದು, ಈ ಹಿನ್ನೆಲೆಯಲ್ಲಿ ತಾವು ಶರಣಾಗುವ ಮುನ್ನ ದೆಹಲಿ ಜನತೆಗೆ ವಿಡಿಯೋ ಸಂದೇಶ ನೀಡಿದ್ದಾರೆ. ನಾನು ಒಳಗಿರಲಿ ಅಥವಾ ಹೊರಗಿರಲಿ. ಎಲ್ಲಿದ್ದರೂ ದೆಹಲಿಯ ಕೆಲಸ ನಿಲ್ಲುವುದಿಲ್ಲ ಎಂದು ಹೇಳಿದ್ದಾರೆ.



ಸುಪ್ರೀಂಕೋರ್ಟ್ ನನಗೆ ಚುನಾವಣಾ ಪ್ರಚಾರ ಮಾಡಲು 21 ದಿನಗಳ ಅನುಮತಿ ನೀಡಿತ್ತು. ನಾಳೆಗೆ ಈ ಅವಧಿ ಪೂರ್ಣಗೊಳ್ಳಲಿದೆ. ಭಾನುವಾರ ನಾನು ಶರಣಾಗಬೇಕು. ಅಂದು ಮಧ್ಯಾಹ್ನ 3 ಗಂಟೆಗೆ ಜೈಲಿಗೆ ಹೋಗುತ್ತೇನೆ. ಅವರು (ಬಿಜೆಪಿ) ಎಷ್ಟು ದಿನ ನನ್ನನ್ನು ಜೈಲಿನಲ್ಲಿ ಇಡುತ್ತಾರೋ ಗೊತ್ತಿಲ್ಲ. ಆದರೆ, ದೇಶವನ್ನು ಸರ್ವಾಧಿಕಾರದಿಂದ ರಕ್ಷಿಸಲು ನಾನು ಜೈಲಿಗೆ ಹೋಗುತ್ತಿದ್ದೇನೆ ಎಂಬ ಮಾತನ್ನು ನೆನಪಿಟ್ಟುಕೊಳ್ಳಿ ಎಂದು ತಿಳಿಸಿದ್ದಾರೆ.

ಮುಂದುವರಿದು, ಅವರು (ಬಿಜೆಪಿ) ಅನೇಕ ಬಾರಿ ನನ್ನನ್ನು ಒಡೆಯಲು ಪ್ರಯತ್ನಿಸಿದರು. ನನ್ನನ್ನು ಬಗ್ಗಿಸಲು ಪ್ರಯತ್ನಿಸಿದರು. ಆದರೆ, ನಾನು ತಲೆ ಬಾಗಲಿಲ್ಲ. ಜೈಲಿನಲ್ಲಿದ್ದಾಗಲೂ ಅನೇಕ ರೀತಿಯಲ್ಲಿ ಹಿಂಸಿಸುತ್ತಿದ್ದರು. ನನ್ನ ಔಷಧಿಗಳನ್ನು ನಿಲ್ಲಿಸಿದರು. ನಾನು 30 ವರ್ಷಗಳಿಂದ ಗಂಭೀರ ಮಧುಮೇಹದ ಸಮಸ್ಯೆಯಿಂದ ಬಳಲುತ್ತಿದ್ದೇನೆ. ನಾನು ದಿನಕ್ಕೆ ನಾಲ್ಕು ಬಾರಿ ಇನ್ಸುಲಿನ್ ಚುಚ್ಚುಮದ್ದನ್ನು ತೆಗೆದುಕೊಳ್ಳುತ್ತೇನೆ. ಆದರೂ ಹಲವಾರು ದಿನಗಳವರೆಗೆ ನನ್ನ ಚುಚ್ಚುಮದ್ದನ್ನು ನಿಲ್ಲಿಸಿದ್ದರು.

ನಾನು 50 ದಿನಗಳ ಕಾಲ ಜೈಲಿನಲ್ಲಿದ್ದೆ. ಈ 50 ದಿನಗಳಲ್ಲಿ ನನ್ನ ತೂಕ 6 ಕೆಜಿ ಕಡಿಮೆಯಾಗಿದೆ. ಜೈಲಿನಿಂದ ಹೊರಬಂದರೂ ನನ್ನ ತೂಕ ಹೆಚ್ಚಾಗುತ್ತಿಲ್ಲ. ದೇಹದಲ್ಲಿ ಏನಾದರೂ ದೊಡ್ಡ ಕಾಯಿಲೆ ಇರಬಹುದು, ಹಲವು ಪರೀಕ್ಷೆಗಳನ್ನು ಮಾಡಿಸಬೇಕು ಎಂದು ವೈದ್ಯರು ಹೇಳುತ್ತಿದ್ದಾರೆ. ನನ್ನ ಮೂತ್ರದಲ್ಲಿ ಕೀಟೋನ್ ಮಟ್ಟವು ತುಂಬಾ ಹೆಚ್ಚಾಗಿದೆ. ನಾನು ಶರಣಾಗಲು ಮಧ್ಯಾಹ್ನ 3 ಗಂಟೆಗೆ ನನ್ನ ಮನೆಯಿಂದ ಹೊರಡುತ್ತೇನೆ. ಬಹುಶಃ ಈ ಬಾರಿ ಅವರು ನನ್ನನ್ನು ಹೆಚ್ಚು ಹಿಂಸಿಸುತ್ತಾರೆ. ಆದರೆ, ನಾನು ತಲೆಬಾಗಲ್ಲ ಎಂದಿದ್ದಾರೆ.

ವಾಪಸಾದ ನಂತರ ಪ್ರತಿ ತಾಯಿ ಮತ್ತು ಸಹೋದರಿಗೆ ತಿಂಗಳಿಗೆ ರೂ.1000 ನೀಡಲು ಪ್ರಾರಂಭಿಸುತ್ತೇನೆ. ನಿಮ್ಮ ಕುಟುಂಬದ ಮಗನಾಗಿ ನಾನು ಯಾವಾಗಲೂ ನನ್ನ ಕರ್ತವ್ಯವನ್ನು ಪೂರೈಸಿದ್ದೇನೆ. ನನ್ನ ತಂದೆ ತಾಯಿ ತುಂಬಾ ವಯಸ್ಸಾದವರು. ನನ್ನ ತಾಯಿ ತುಂಬಾ ಅನಾರೋಗ್ಯದಿಂದ ಬಳಲುತ್ತಿದ್ದಾರೆ. ಜೈಲಿನಲ್ಲಿರುವ ನನಗೆ ಅವರ ಬಗ್ಗೆ ತುಂಬಾ ಚಿಂತೆಯಾಗುತ್ತಿದೆ. ನನ್ನ ಪೋಷಕರನ್ನು ನೋಡಿಕೊಳ್ಳಿ. ಅವರಿಗಾಗಿ ದೇವರಲ್ಲಿ ಪ್ರಾರ್ಥಿಸಿ. ಪ್ರಾರ್ಥನೆಯಲ್ಲಿ ದೊಡ್ಡ ಶಕ್ತಿಯಿದೆ. ನೀವು ಪ್ರತಿದಿನ ನನ್ನ ತಾಯಿಗಾಗಿ ಪ್ರಾರ್ಥಿಸಿದರೆ, ಅವರು ಖಂಡಿತವಾಗಿಯೂ ಆರೋಗ್ಯವಾಗಿರುತ್ತಾರೆಂದು ಹೇಳಿದ್ದಾರೆ.

ಮರಿತಿಬ್ಬೇಗೌಡರ ಪರ ಮತಯಾಚನೆ



ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರ ಪರ ಮೈಸೂರಿನ ಸಿಪಿಸಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಶುಕ್ರವಾರ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಮಾಜಿ ಮೇಯರ್‌ಗಳಾದ ದಕ್ಷಿಣ ಮೂರ್ತಿ, ನರಸಿಂಹ ಐಯ್ಯಂಗಾರ್, ಇತರರು ಮತಯಾಚನೆ ಮಾಡಿದರು

ಆದಿವಾಸಿಗಳ ಅನುದಾನ ಅನ್ಯ ಉದ್ದೇಶಕ್ಕೆ ಬಳಕೆ ಖಂಡಿಸಿ ಪ್ರತಿಭಟನೆ

ಮೈಸೂರು, ಮೇ 31(ಜಿಎ)– ಕರ್ನಾಟಕದ ಮೂಲ ಆದಿವಾಸಿ ಮತ್ತು ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗೆ ಮೀಸಲಿಟ್ಟ ಅನುದಾನವನ್ನು ಅನ್ಯ ಉದ್ದೇಶಕ್ಕೆ ಬಳಕೆ ಮಾಡಲು ಮುಂದಾಗಿರುವುದನ್ನು ಖಂಡಿಸಿ ಕರ್ನಾಟಕ ರಾಜ್ಯ ಕಾಡು, ಕಾಡಂಚಿನ ಅರಣ್ಯಾಧಾರಿತ ಆದಿವಾಸಿ ಬುಡಕಟ್ಟುಗಳ ಒಕ್ಕೂಟದಿಂದ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು. 2021–22ನೇ ಸಾಲಿನಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ರಾಜ್ಯದಲ್ಲಿರುವ ಅರಣ್ಯಾಧಾರಿತ ಮೂಲ ಆದಿವಾಸಿಗಳಾದಿಯಾಗಿ 50 ಬುಡಕಟ್ಟುಗಳನ್ನು ಒಳಗೊಂಡಂತೆ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಮೂಲಕ ಪರಿಶಿಷ್ಟ ಪಂಗಡದ ಬುಡಕಟ್ಟು ಸಮುದಾಯಗಳನ್ನು ಮುಖ್ಯ ವಾಹಿನಿಗೆ ತರಲು ಅನುದಾನ ನೀಡಿತ್ತು. ಅದರಲ್ಲಿ ಸರ್ಕಾರದ ಯೋಜನೆ, ಕಾರ್ಯಕ್ರಮಗಳ ಅರಿವು, ಶಿಕ್ಷಣದ ಮಹತ್ವ ಕುರಿತ ಕಾರ್ಯಾಗಾರ, ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಅರಣ್ಯ ಹಕ್ಕು ಕಾಯ್ದೆಯನ್ನು ಪರಿಣಾಕಾರಿಯಾಗಿ ಅನುಷ್ಠಾನಗೊಳಿಸಲು ಬುಡಕಟ್ಟು ಸಮುದಾಯದ ಜನಪ್ರತಿನಿಧಿಗಳಿಗೆ ಹಾಗೂ ಅರಣ್ಯ, ಕಂದಾಯ ಇಲಾಖೆ ಮತ್ತು ಗ್ರಾಮ ಪಂಚಾಯತ್ ಅಧಿಕಾರಿಗಳಿಗೆ ತರಬೇತಿ ನೀಡುವುದು, ಸೌಲಭ್ಯಗಳ ಮಾಹಿತಿ ನೀಡುವುದು ಇದರ ಉದ್ದೇಶವಾಗಿತ್ತು. ಆದರೆ, ಬುಡಕಟ್ಟು ಸಮುದಾಯಕ್ಕೆ ಮೀಸಲಾದ ಅನುದಾನ ಸಮರ್ಪಕವಾಗಿ ಬಳಕೆಯಾಗುತ್ತಿಲ್ಲ ಎಂದು ಕಿಡಿಕಾರಿದರು.



ರಾಜ್ಯ ಕಾಡು, ಕಾಡಂಚಿನ ಅರಣ್ಯಾಧಾರಿತ ಆದಿವಾಸಿ ಬುಡಕಟ್ಟುಗಳ ಒಕ್ಕೂಟದಿಂದ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

ಕರ್ನಾಟಕದ ಮೂಲ ಆದಿವಾಸಿ ಮತ್ತು ಬುಡಕಟ್ಟು ಸಮುದಾಯಗಳ ನಿಗಮದ ಉಳಿತಾಯ ಖಾತೆಯಲ್ಲಿ ನಿಗದಿಯಾಗಿರುವ 6.90 ಕೋಟಿ ಅನುದಾನವನ್ನು ದುರುದ್ದೇಶದಿಂದ ಕೆಎಂಸಿಅಂಡ್‌ಎಗೆ ನೀಡಲು ಮುಂದಾಗಿರುವುದು ಖಂಡನೀಯ. ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯಿಂದಲೇ ಅರಿವು ಮತ್ತು ಜಾಗೃತಿ ಕಾರ್ಯಕ್ರಮಗಳನ್ನು ರೂಪಿಸಬೇಕು. ಪ್ರಸ್ತುತ ನಿರ್ದೇಶಕರಾಗಿರುವ ಆದಿವಾಸಿಗಳ ವಿರೋಧಿ ಮತ್ತು ಆದಿವಾಸಿಗಳ ಬಗ್ಗೆ ಕಿಂಚಿತ್ತು ಕಾಳಜಿಯಿಲ್ಲದ ಎಲ್.ಶ್ರೀನಿವಾಸ ಅವರನ್ನು ಕೂಡಲೇ ಸಂಸ್ಥೆಯಿಂದ ಕಿತ್ತೊಗೆದು, ಇವರ ಅವಧಿಯಲ್ಲಿ ನಡೆದಿರುವ ಎಲ್ಲಾ ಹಣಕಾಸು ವ್ಯವಹಾರಗಳ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಜೆ.ಎಲ್.ಶಿವರಾಜ್, ಜೆ.ಸಿ.ಶ್ರೀನಿವಾಸ, ಮಹದೇವಯ್ಯ, ಸೋಮು, ಕಿಶೋರ್ ಸೇರಿದಂತೆ ನೂರಾರು ಮಂದಿ ಪಾಲ್ಗೊಂಡಿದರು.

33 ವರ್ಷಗಳ ನಂತರ ಇಂಗ್ಲೆಂಡ್‌ನಿಂದ ಭಾರತಕ್ಕೆ 100 ಟನ್ ಚಿನ್ನ ತಂದ ಆರ್‌ಬಿಐ

ನವದೆಹಲಿ, ಮೇ 31– ಭಾರತೀಯ ರಿಸರ್ವ್ ಬ್ಯಾಂಕ್ ತನ್ನ ಫಾರೆಕ್ಸ್ ರಿಸರ್ವ್ಸ್‌ನಲ್ಲಿರುವ ಒಂದಷ್ಟು ಚಿನ್ನವನ್ನು ಬ್ರಿಟನ್‌ನಿಂದ ಭಾರತಕ್ಕೆ ತಂದಿದೆ. ವರದಿಗಳ ಪ್ರಕಾರ ಬ್ಯಾಂಕ್ ಆಫ್ ಇಂಗ್ಲೆಂಡ್‌ನಲ್ಲಿ ಇಟ್ಟಿರುವ ನೂರು ಟನ್‌ಗೂ ಅಧಿಕ ಚಿನ್ನವನ್ನು ಆರ್‌ಬಿಐ ಇತ್ತೀಚೆಗೆ ಭಾರತಕ್ಕೆ ವಾಪಸ್ ತಂದಿದೆ.

ಇಷ್ಟೊಂದು ಪ್ರಮಾಣದ ಚಿನ್ನವನ್ನು ವಿದೇಶದಿಂದ ಭಾರತಕ್ಕೆ ತಂದಿದ್ದು 1991ರ ಬಳಿಕ ಇದೇ ಮೊದಲು. ಮುಂಬರುವ ದಿನಗಳಲ್ಲಿ ಇನ್ನೂ ಸಾಕಷ್ಟು ಚಿನ್ನಗಳು ಭಾರತಕ್ಕೆ ವಾಪಸ್ ಬಂದು ಸೇರಲಿವೆ. ಇನ್ನು ಈ ಚಿನ್ನವನ್ನು ಕೆಲವೊಂದು ವ್ಯವಸ್ಥಾಪನಾ ಕಾರಣ ಮತ್ತು ವೈವಿಧ್ಯಮಯ ಸಂಗ್ರಹಣೆ ಉದ್ದೇಶದಿಂದ ದೇಶಿಯ ಖಜಾನೆಗಳಿಗೆ ತರಲಾಗುತ್ತಿದೆ.

ಮಾರ್ಚ್ 2023 ರ ಮಾಹಿತಿಯ ಪ್ರಕಾರ, ಆರ್‌ಬಿಐ ಒಟ್ಟು 822.1 ಟನ್ ಚಿನ್ನವನ್ನು ಹೊಂದಿದ್ದು, ಅದರಲ್ಲಿ 413.8 ಟನ್‌ಗಳಷ್ಟು ಚಿನ್ನವನ್ನು ವಿದೇಶದಲ್ಲಿ ಇರಿಸಲಾಗಿದೆ. ಆರ್‌ಬಿಐ ಕಳೆದ ಕೆಲವು ವರ್ಷಗಳಿಂದ ಚಿನ್ನವನ್ನು ಖರೀದಿಸುತ್ತಿದ್ದು, ಕಳೆದ ಹಣಕಾಸು ವರ್ಷದಲ್ಲಿ 27.5 ಟನ್ ಚಿನ್ನವನ್ನು ಖರೀದಿಸಿತ್ತು. ಆ ಮೂಲಕ ಜಾಗತಿಕ ಮಟ್ಟದಲ್ಲಿ ಆರ್‌ಬಿಐ ಚಿನ್ನ ಸಂಗ್ರಹಣೆಯನ್ನು ಹೆಚ್ಚಿಸಿದೆ.

ಅನೇಕ ದೇಶಗಳ ಸೆಂಟ್ರಲ್ ಬ್ಯಾಂಕ್‌ಗಳು ತಮ್ಮ ಚಿನ್ನವನ್ನು ಬ್ಯಾಂಕ್ ಆಫ್ ಇಂಗ್ಲೆಂಡ್‌ನಲ್ಲಿ ಇರಿಸುತ್ತವೆ. ಇದರಲ್ಲಿ ಭಾರತವೂ ಒಂದು. ಸ್ವಾತಂತ್ರ್ಯ ಪೂರ್ವದಿಂದಲೂ ಭಾರತದ ಸಾಕಷ್ಟು ಚಿನ್ನವನ್ನು ಲಂಡನ್‌ನಲ್ಲಿ ಇರಿಸಲಾಗಿದೆ. ಕೆಲವು ವರ್ಷಗಳ ಹಿಂದೆ ಆರ್‌ಬಿಐ ಚಿನ್ನ ಖರೀದಿಸಲು ಆರಂಭಿಸಿತು ಮತ್ತು ಅದನ್ನು ಎಲ್ಲಿ ಸಂಗ್ರಹಿಸಬೇಕು ಎಂದು ನಿರ್ಧರಿಸಿತು. ವಿದೇಶದಲ್ಲಿ ಚಿನ್ನದ ದಾಸ್ತಾನು ಹೆಚ್ಚುತ್ತಿರುವ ಕಾರಣ ಭಾರತಕ್ಕೆ ಸ್ವಲ್ಪ ಚಿನ್ನವನ್ನು ತರಲು ನಿರ್ಧರಿಸಲಾಯಿತು' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಬದಲಾಗುತ್ತಿರುವ ರಾಜಕೀಯ ಸಂಗತಿಗಳು ಮತ್ತು ಕರೆನ್ಸಿ ಮೌಲ್ಯ ಏರಿಳಿತದ ಭೀತಿಯಿಂದಾಗಿ ಆರ್‌ಬಿಐ ಈ ಈ ಚಿನ್ನವನ್ನು ಭಾರತಕ್ಕೆ ತರಲು ಮುಂದಾಗಿದೆ ಎಂದು ಹೇಳಲಾಗುತ್ತಿದೆ.

1991 ರಲ್ಲಿ, ತೀವ್ರ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿದ್ದ ಚಂದ್ರಶೇಖರ್ ನೇತೃತ್ವದ ಸರ್ಕಾರ ಹಣವನ್ನು ಸಂಗ್ರಹಿಸಲು ಚಿನ್ನವನ್ನು ಒತ್ತೆ ಇಟ್ಟಿತ್ತು. ಜುಲೈ 4 ಮತ್ತು 18 ರ ನಡುವೆ, ಭಾರತೀಯ ರಿಸರ್ವ್ ಬ್ಯಾಂಕ್ ಬ್ಯಾಂಕ್ ಆಫ್ ಇಂಗ್ಲೆಂಡ್ ಮತ್ತು ಬ್ಯಾಂಕ್ ಆಫ್ ಜಪಾನ್‌ನಲ್ಲಿ 46.91 ಟನ್ ಚಿನ್ನವನ್ನು ಒತ್ತೆ ಇಟ್ಟು, $400 ಮಿಲಿಯನ್ ಸಾಲ ಪಡೆದುಕೊಂಡಿತ್ತು ಸುಮಾರು 15 ವರ್ಷಗಳ ಹಿಂದೆ, ಪ್ರಧಾನ ಮಂತ್ರಿ ಮನಮೋಹನ್ ಸಿಂಗ್ ನೇತೃತ್ವದ ಯುನೈಟೆಡ್ ಪ್ರೋಗ್ರೆಸ್ಸಿವ್ ಅಲೈಯನ್ಸ್ (ಯುಪಿಎ) ಸರ್ಕಾರದ ಅಡಿಯಲ್ಲಿ ಆರ್‌ಬಿಐ ಅಂತರರಾಷ್ಟ್ರೀಯ ಹಣಕಾಸು ನಿಧಿಯಿಂದ (ಐಎಂಎಫ್) 200 ಟನ್ ಚಿನ್ನವನ್ನು ಖರೀದಿಸಿತು.

ಜೂ. 3ರ ಮಧ್ಯರಾತ್ರಿಯಿಂದ 5ರ ಬೆಳಗ್ಗೆ 6 ಗಂಟೆವರೆಗೆ

ಮೈಸೂರು ನಗರದಲ್ಲಿ ನಿಷೇಧಾಜ್ಞೆ ಜಾರಿ

ಮೈಸೂರು, ಮೇ 31(ಆರ್‌ಕೆ)– ಜೂನ್ 4ರಂದು ಲೋಕಸಭಾ ಚುನಾವಣೆ ಮತ ಎಣಿಕೆ ನಡೆಯುವುದರಿಂದ ಅಹಿತಕರ ಘಟನೆ ನಡೆಯದಂತೆ ಮುನ್ನೆಚ್ಚರಿಕೆ ಕ್ರಮವಾಗಿ ಜೂನ್ 3ರ ಮಧ್ಯರಾತ್ರಿಯಿಂದ 5ರ ಬೆಳಗ್ಗೆ 6 ಗಂಟೆವರೆಗೆ ಮೈಸೂರು ನಗರದಾದ್ಯಂತ ಸೆಕ್ಷನ್ 144 ರೀತ್ಯಾ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ಈ ಸಂಬಂಧ ಆದೇಶ ಹೊರಡಿಸಿರುವ ನಗರ ಪೊಲೀಸ್ ಆಯುಕ್ತ ಬಿ. ರಮೇಶ್, ಚುನಾಯಿತ ಅಭ್ಯರ್ಥಿಗಳ ವಿಜಯೋತ್ಸವ, ಮೆರವಣಿಗೆ, ಪಟಾಕಿ ಸಿಡಿಸುವುದು, ಮತ ಎಣಿಕೆ ಕೇಂದ್ರದ ಸುತ್ತ ಗುಂಪು ಸೇರುವುದು, ಸ್ಫೋಟಕ ವಸ್ತು, ಮಾರಕಾಸ್ತ್ರಗಳನ್ನು ಕೊಂಡೊಯ್ಯುವುದು, ಪ್ರಚೋದನಾಕಾರಿ ಹೇಳಿಕೆ ನೀಡುವುದು, ಬೈಕ್ ರ್‍ಯಾಲಿ, ಧ್ವನಿವರ್ಧಕ, ಡಿಜೆ ಬಳಸಿ ಸಂಭ್ರಮಿಸುವುದನ್ನು ನಿಷೇಧಿಸಲಾಗಿದೆ. ಮದುವೆ ಸಮಾರಂಭ, ಧಾರ್ಮಿಕ ಕಾರ್ಯಕ್ರಮ, ಶವಸಂಸ್ಕಾರಗಳಿಗೆ ಈ ಆದೇಶ ಅನ್ವಯಿಸುವುದಿಲ್ಲ. ಪೊಲೀಸ್ ಕಮೀಷ್ನರೇಟ್ ವ್ಯಾಪ್ತಿಯಲ್ಲಿ ಜಾರಿಗೊಳಿಸುವ ನಿಷೇಧಾಜ್ಞೆ ಉಲ್ಲಂಘಿಸಿದವರ ವಿರುದ್ಧ ಕಾನೂನು ರೀತಿಯ ಕ್ರಮ ವಹಿಸಲಾಗುವುದು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಅದೇ ರೀತಿ ಕರ್ನಾಟಕ ವಿಧಾನಪರಿಷತ್‌ನ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆ ಹಿನ್ನೆಲೆಯಲ್ಲಿ ಮೈಸೂರು ನಗರದಾದ್ಯಂತ ಜೂನ್ 3ರ ಮುಂಜಾನೆ 5 ಗಂಟೆಯಿಂದ ಮಧ್ಯರಾತ್ರಿ 12 ಗಂಟೆವರೆಗೆ ಮತ್ತು ಮತ ಎಣಿಕೆ ಹಿನ್ನೆಲೆಯಲ್ಲಿ ಜೂನ್ 6ರ ಬೆಳಗ್ಗೆ 6ರಿಂದ 7ರ ಬೆಳಗ್ಗೆ 5 ಗಂಟೆವರೆಗೆ ಸಿಆರ್‌ಪಿಸಿ ಸೆಕ್ಷನ್ 144 ರೀತ್ಯಾ ನಿಷೇಧಾಜ್ಞೆ ಜಾರಿ ಮಾಡಲಾಗಿದೆ.

ತಳಿಪರಂಬ ರಾಜರಾಜೇಶ್ವರ ದೇವಸ್ಥಾನದ ಬಳಿ

ಶತ್ರು ಭೈರವಿ ಯಾಗ ನಡೆದಿಲ್ಲ

ಡಿಕೆಶಿ ಆರೋಪ ಸುಳ್ಳು ಎಂದ ಆಡಳಿತ ಮಂಡಳಿ

ತಿರವನಂತಪುರಂ, ಮೇ 31– ಕಣ್ಣೂರು ತಳಿಪರಂಬ ರಾಜರಾಜೇಶ್ವರ ದೇವಸ್ಥಾನದ ಸಮೀಪದಲ್ಲಿ ಪ್ರಾಣಿಬಲಿ ನೀಡಿ ಶತ್ರು ಭೈರವಿ ಯಾಗ ಮಾಡಲಾಗಿದೆ ಎಂಬ ಕರ್ನಾಟಕ ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಹೇಳಿಕೆಯನ್ನು ದೇವಸ್ಥಾನದ ಆಡಳಿತ ಮಂಡಳಿ ತಳ್ಳಿಹಾಕಿದೆ.

ದೇವಸ್ವಂ ಟ್ರಸ್ಟಿ ಮಂಡಳಿ ಸದಸ್ಯ ಮಾಧವನ್ ಪ್ರತಿಕ್ರಿಯಿಸಿ, ಯಾವುದೇ ದೇವಾಲಯವನ್ನು ಕೊಲ್ಲುವ ಶತ್ರು–ಸಂಹಾರ ಪೂಜೆ ಅಥವಾ ಪ್ರಾಣಿ ಬಲಿ ದೇವಾಲಯದಲ್ಲಿ ಅಥವಾ ದೇವಾಲಯದ ಸುತ್ತಲೂ ನಡೆದಿರುವುದು ತಿಳಿದಿಲ್ಲ. ಅವರು ಹೇಳಿದಂತೆ ಮೇಕೆ, ಎಮ್ಮೆಗಳನ್ನು ಕಡಿಯಲಾಗಿದೆ ಎಂಬ ಹೇಳಿಕೆ ನೂರಕ್ಕೆ 100%ರಷ್ಟು ಸುಳ್ಳು ಎಂದಿದ್ದಾರೆ.


ತಳಿಪರಂಬ ಪ್ರದೇಶದಲ್ಲಿ ಇಂತಹ ಚಟುವಟಿಕೆಗಳು ಗೌಪ್ಯವಾಗಿ ನಡೆಯಲು ಸಾಧ್ಯವಿಲ್ಲ ಎಂದು ಟ್ರಸ್ಟಿ ಸದಸ್ಯರು ಹೇಳಿಕೆ ನೀಡಿದ್ದು, ದೇವಸ್ಥಾನದ ಆವರಣದಲ್ಲಿ ನಡೆದಿದೆ ಎಂದು ಹೇಳಿ ದೇವಸ್ಥಾನದ ಹೆಸರನ್ನು ಎಳೆದು ತಂದಿರುವುದು ನಿರಾಸೆ ತಂದಿದೆ ಎಂದಿದ್ದಾರೆ.

ರಾಜರಾಜೇಶ್ವರ ದೇವಸ್ಥಾನದಲ್ಲಿ ಶತ್ರು ಸಂಹಾರ ಪೂಜೆ ಇಲ್ಲ. ಕ್ಷೇತ್ರದ ಅಕ್ಕಪಕ್ಕದಲ್ಲಿ ಮೇಕೆ, ಕೋಣವನ್ನು ಬಲಿ ಕೊಟ್ಟಿದ್ದಾರೆ ಎನ್ನುವುದೂ ಸರಿಯಲ್ಲ. ನಾವು ಈ ಬಗ್ಗೆ ಪರಿಶೀಲನೆ ಮಾಡಿದ್ದೇವೆ. ಯಾರಿಗೂ ಗೊತ್ತಾಗದಂತೆ ತಳಿಪರಂಬ ಪ್ರದೇಶದಲ್ಲಿ ಯಾಗ ನಡೆಸಲು ಸಾಧ್ಯವಿಲ್ಲ. ಇದು ನಿರಾಶಾದಾಯಕ ಹೇಳಿಕೆ. ದೇವಸ್ಥಾನದ ಸುತ್ತಮುತ್ತ ಮುತ್ತ ನಡೆಯಿತು ಎಂದು ಹೇಳಿದ್ದು ಸರಿಯಲ್ಲ. ಈ ದೇವಸ್ಥಾನದಲ್ಲಿ ಈ ರೀತಿಯ ಪೂಜೆ ನಡೆಯುವುದಿಲ್ಲ. ಇಲ್ಲಿ ಬ್ರಾಹ್ಮಣರು ಮಾತ್ರ ಪೂಜೆ ನಡೆಸುವ ಕ್ಷೇತ್ರವಾಗಿದೆ. ರಾಜರಾಜೇಶ್ವರ ದೇಗುಲದಲ್ಲಿ ಶತ್ರು ಭೈರವ ಯಾಗ ಸೇವೆಯೇ ಇಲ್ಲ. ಮಲಬಾರಂ ದೇವಸ್ವಂ ಬೋರ್ಡ್ ಅಡಿ ಬರುವ ಯಾವ ದೇಗುಲದಲ್ಲೂ ಬಲಿ ಕೊಡುವುದಿಲ್ಲ. ಡಿಕೆಶಿ ಹೇಳಿಕೆ ದೌರ್ಭಾಗ್ಯಕರ ಎಂದು ದೇವಸ್ಥಾನ ಆಡಳಿತ ಮಂಡಳಿ ತಿಳಿಸಿದೆ.


ಡಿಕೆಶಿ ಆರೋಪ ನಿರಾಕರಿಸಿದ ಕೇರಳ ಸರ್ಕಾರ ಮಾಧ್ಯಮಗಳಿಗೆ ಹೇಳಿಕೆ ಬಿಡುಗಡೆ ಮಾಡಿ, ಡಿಕೆಶಿ ಆರೋಪ ಮಾಡಿದಂತೆ ಕೇರಳದಲ್ಲಿ ನಡೆದಿರಲು ಸಾಧ್ಯವಿಲ್ಲ. ಕೇರಳದಲ್ಲಿ ನಡೆಯಲು ಸಾಧ್ಯತೆ ಇಲ್ಲದ ಘಟನೆ ಇದು. ಆದರೂ ಇದರ ಬಗ್ಗೆ ತನಿಖೆ ನಡೆಸುತ್ತೇವೆ ಎಂದು ಕೇರಳದ ದೇವಸ್ವಂ ಸಚಿವ ಕೆ.ರಾಧಾಕೃಷ್ಣನ್ ತಿಳಿಸಿದ್ದಾರೆ.

ದೇವಸ್ಥಾನದ ಹೇಳಿಕೆ ಬೆನ್ನಲ್ಲೇ ಸ್ಪಷ್ಟನೆ ನೀಡಿದ ಡಿಕೆಶಿ

ಬೆಂಗಳೂರು: ನನ್ನ ಹೇಳಿಕೆಯನ್ನು ಕೆಲವರು ತಪ್ಪಾಗಿ ಗ್ರಹಿಸಿದ್ದು, ತಳಿಪರಂಬ ರಾಜರಾಜೇಶ್ವರ ದೇವಸ್ಥಾನದ 15 ಕಿ.ಮೀ. ದೂರದಲ್ಲಿರುವ ಖಾಸಗಿ ಸ್ಥಳದಲ್ಲಿ ಯಾಗ ನಡೆದಿದೆ ಎಂದು ಡಿಸಿಎಂ ಡಿಕೆ ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ. ನಾನು ರಾಜರಾಜೇಶ್ವರನ ಭಕ್ತನಾಗಿದ್ದು, ಈ ದೇವಸ್ಥಾನದಲ್ಲಿ ಶತ್ರು ಸಂಹಾರ ಪೂಜೆ ಮಾಡುವುದಿಲ್ಲ ಎನ್ನುವ ಅರಿವಿದೆ. ಯಾಗ ನಡೆದಿರುವ ಸ್ಥಳದ ಬಗ್ಗೆ ಮಾಹಿತಿ ನೀಡಲಷ್ಟೇ ನಾನು ದೇಗುಲದ ಹೆಸರನ್ನು ಉಲ್ಲೇಖಿಸಿದ್ದೆ. ಕೆಲವು ದಿನಗಳ ಹಿಂದೆ ದೇವಸ್ಥಾನಕ್ಕೆ ಭೇಟಿ ನೀಡಿ ಆಶೀರ್ವಾದ ಪಡೆದಿದ್ದೆ. ವಿಷಯಗಳನ್ನು ಸಂದರ್ಭದಿಂದ ಹೊರಗಿಟ್ಟು ಅವುಗಳನ್ನು ತಪ್ಪಾಗಿ ಅರ್ಥೈಸಿಕೊಳ್ಳಬೇಡಿ ಎಂಬುದು ನನ್ನ ವಿನಂತಿ ಎಂದು ಡಿಕೆಶಿ ಹೇಳಿದ್ದಾರೆ.



ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

1.06.2024 ಶನಿವಾರ, ಮಳೆ ನಕ್ಷತ್ರ: ರೋಹಿಣಿ, 25.05.2024ರಿಂದ 07.06.2024
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ,
ತಿಥಿ: ನವಮಿ, ನಕ್ಷತ್ರ: ಉಭಾ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 CFTRI ಶೋಧ–ಅನುಶೋಧ, ಪ್ರಾಯೋಜಿತ ಬಾನುಲಿ ಸರಣಿ, ಪ್ರಾಯೋಜಕರು –CSIR, CFTRI, Mysuru, ಪ್ರಸ್ತುತಿ–ಹೆಚ್.ಇ. ಕೃಷ್ಣಪ್ಪ, 6.40 ಪದ ಸಂಸ್ಕೃತಿ, 6.50 ರೈತರಿಗೆ ಸಲಹೆ, 7.15 ಜಾತ್ರಾ ವಿಶೇಷ: ಬಾನುಲಿ ಮಾಲಿಕೆಯಲ್ಲಿ ಕಪ್ಪಡಿ ಜಾತ್ರೆಯನ್ನು ಪರಿಚಯಿಸುತ್ತಾರೆ. ಜಾನಪದ ವಿದ್ವಾಂಸ ಡಾ. ಕೃಷ್ಣಮೂರ್ತಿ ಹನೂರು ಹಾಗೂ ನೀಲಗಾರ ಗಾಯಕ: ಮೈಸೂರು ಗುರುರಾಜ್. ಪ್ರಸ್ತುತಿ: ಅಬ್ದುಲ್ ರಶೀದ್, 8.30 'ಹಾದಿಯಲ್ಲಿ ಕಂಡ ಮುಖ' ಬಾನುಲಿ ಸರಣಿ, ಕಂಪೆನಿ ನಾಟಕ ಕಲಾವಿದರಾದ ಮಂಜುನಾಥ್ ಮತ್ತು ಅವರ ಮಡದಿ ಸುಬ್ಬಮ್ಮ ಅವರೊಂದಿಗೆ ಸಂವಾದ. ಪ್ರಸ್ತುತಿ: ಅಬ್ದುಲ್ ರಶೀದ್, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಆರ್.ಕೆ. ಪದ್ಮನಾಭ–ವೀಣಾ ವಾದನ

ಮಧ್ಯಾಹ್ನ: 12.30ದೇವರನಾಮ–ಪಿ. ಸುರಭಿ, 12.45 ಜನಪದ ಸಂಗೀತ, 1.20 ಭಾವಗೀತೆಗಳು, 3.30 ಮಕ್ಕಳ ಮಂಟಪ–ಟಿ. ನರಸೀಪುರ ತಾಲೂಕು ಕೇತುಪುರದ ಸರ್ಕಾರಿ ಪ್ರೌಢಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, ಪ್ರಸ್ತುತಿ:ಕೆ. ಬಿ.ಮೀನಾ, 4.00 ನಾಟಕ 'ತಪ್ಪಿಸಿಕೊಂಡವರು', ರಚನೆ : ಹೆಚ್.ಎನ್. ದ್ವಾರಕನಾಥ್, ನಿರ್ದೇಶನ–ಶಿವಶಂಕರ್ ಕಣಾಜ, 4.30 ನೆನಪಿನಂಗಳ, 6.55 ಕೃಷಿರಂಗ : ಕಿಸಾನ್ ವಾಣಿ, 8.00 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಜಯಲಕ್ಷ್ಮೀ ಶೇಖರ್–ವೀಣಾವಾದನ

■ **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್ :** ಅಕ್ಯೂಪ್ರೆಶರ್, ಸುಜೋಕ್, ಅಕ್ಯೂ ಡಿಜಿಟಲ್ ಫಿಶಿಯೋಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: 222, ಲೀಲಾವತಿ ನಾಯ್ಡು, ಅರವಿಂದನಗರ, ಬೆಳಗ್ಗೆ 10.30ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಅಸಹಜ ಯೋನಿ ಸ್ರಾವ ಚಿಕಿತ್ಸಾ ಶಿಬಿರ, ಕುತ್ತಿಗೆ ನೋವು ಮತ್ತು ಭುಜದ ನೋವು ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ :** ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಶಾಲಾ ಮಕ್ಕಳಿಗೆ ಪ್ರಬಂಧ ಸ್ಪರ್ಧೆ, ಸಮೂಹ ಪರಿಸರ ಗೀತ ಗಾಯನ, ಚಿತ್ರಕಲಾ ಸ್ಪರ್ಧೆ, ಸ್ಥಳ: ಕಲಾಮಂದಿರ ಆವರಣ, ವಿನೋಬಾ ರಸ್ತೆ, ಬೆಳಗ್ಗೆ 10 ರಿಂದ.

■ **ಜನರಿಗಾಗಿ ಸೇವಾ ಸಮಿತಿ :** ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ಗೆಲುವಿಗಾಗಿ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಪೂಜೆ, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ಬಿಜೆಪಿ ನಗರಾಧ್ಯಕ್ಷ ನಾಗೇಂದ್ರ, ಜಿಲ್ಲಾಧ್ಯಕ್ಷ ಮಹಾದೇವಸ್ವಾಮಿ, ಮುಡಾ ಮಾಜಿ ಅಧ್ಯಕ್ಷ ಯಶಸ್ವಿನಿ ಸೋಮಶೇಖರ್, ಪಾಲಿಕೆ ಮಾಜಿ ಸದಸ್ಯರಾದ ಬಿ.ವಿ. ಮಂಜುನಾಥ್, ಸೌಮ್ಯ ಉಮೇಶ್, ಮಾ.ವಿ. ರಾಮಪ್ರಸಾದ್, ಪಾರ್ಥಸಾರಥಿ, ಸ್ಥಳ: ವೀರ ಆಂಜನೇಯಸ್ವಾಮಿ ದೇವಸ್ಥಾನ, ಬೆಳಗ್ಗೆ 10ಕ್ಕೆ.

■ **ಸುಯೋಗ್ ಆಸ್ಪತ್ರೆ, ಸುಯೋಗ್ ಗ್ರೂಪ್ ಆಫ್ ಮೆಡಿಕಲ್ ಇನ್‌ಸ್ಟಿಟ್ಯೂಷನ್ಸ್ :** ವಿಶ್ವ ತಂಬಾಕು ರಹಿತ ಜಾಗೃತಿ ದಿನಾಚರಣೆ, ಉದ್ಘಾಟನೆ : ಪೊಲೀಸ್ ಇನ್‌ಸ್ಪೆಕ್ಟರ್ ಯೋಗೇಶ್, ಅಧ್ಯಕ್ಷತೆ : ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ. ಎಸ್.ಪಿ. ಯೋಗಣ್ಣ, ವಿಶೇಷ ಆಹ್ವಾನಿತರು : ವಿಶ್ರಾಂತ ಉಪಕುಲಪತಿ ಡಾ. ಎನ್.ಎಸ್. ರಾಮೇಗೌಡ, ಸ್ಥಳ: ಕುವೆಂಪು ಕಾಂಪ್ಲೆಕ್ಸ್, ಬೆಳಗ್ಗೆ 11ಕ್ಕೆ.

■ **ರಾಮಕೃಷ್ಣ ವಿದ್ಯಾಕೇಂದ್ರ ಸಂಯುಕ್ತ ಪದವಿಪೂರ್ವ ಕಾಲೇಜು :** ಪ್ರಥಮ ಪಿಯು ವಿದ್ಯಾರ್ಥಿಗಳಿಗೆ ಮತ್ತು ಪೋಷಕರಿಗೆ ಅಭಿವಿನ್ಯಾಸ ಕಾರ್ಯಕ್ರಮ, ಸಾನ್ನಿಧ್ಯ : ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್, ಅಧ್ಯಕ್ಷತೆ : ಶ್ರೀ ರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ. ಪಾಪೇಗೌಡ, ಮುಖ್ಯ ಅತಿಥಿಗಳು : ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಂ. ಮರಿಸ್ವಾಮಿ, ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು ಪ್ರಾಂಶುಪಾಲ ಡಾ. ಬಿ. ಸದಾಶಿವೇಗೌಡ, ಸ್ಥಳ: ಶ್ರೀ ಶಾರದಾ ಸಭಾಂಗಣ, ಮಧ್ಯಾಹ್ನ 1.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ ದಲಿತ ವಿದ್ಯಾರ್ಥಿ ಒಕ್ಕೂಟ :** ಬಂಡಾಯದ ಬೆಂಕಿ ವಿ. ಶ್ರೀನಿವಾಸ ಪ್ರಸಾದ್‌ರವರ ನೆನಪಿನ ಕಾರ್ಯಕ್ರಮ, ಪುಷ್ಪನಮನ : ಬರಹಗಾರ ಅಗ್ನಿ ಶ್ರೀಧರ್, ಅಧ್ಯಕ್ಷತೆ : ಮೈಸೂರು ವಿವಿ ಕುಲಸಚಿವ ಪ್ರೊ. ಬಸಪ್ಪ, ಉಪಸ್ಥಿತರು : ಕಾಂಗ್ರೆಸ್ ಮುಖಂಡ ಹೆಚ್. ವಾಸು, ಮಾಜಿ ಶಾಸಕ ಬಿ. ಹರ್ಷವರ್ಧನ್, ಹಿರಿಯ ಪತ್ರಕರ್ತ ಕೆ. ಶಿವಕುಮಾರ್, ಒಡನಾಡಿ ಸಂಸ್ಥೆಯ ಸ್ಟ್ಯಾನ್ಲಿ, ಸ್ಥಳ: ಇಎಂಎಂಆರ್‌ಸಿ ಸಭಾಂಗಣ, ಮಾನಸಗಂಗೋತ್ರಿ, ಮಧ್ಯಾಹ್ನ 3ಕ್ಕೆ.

■ **ಕಲಾಸುರುಚಿ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ, ಕಥೆ ಹೇಳುವವರು: ಲೇಖಕಿ ಶ್ರೀಮತಿ ಉಷಾ ನರಸಿಂಹನ್, ಸ್ಥಳ: ಸುರುಚಿ ರಂಗಮನೆ, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ.

■ **ಪರಮಹಂಸ ಯೋಗ ಮಹಾವಿದ್ಯಾಲಯ :** ಯೋಗ ತರಬೇತಿ 12ನೇ ತಂಡದ ಉದ್ಘಾಟನಾ ಸಮಾರಂಭ, ಉಪಸ್ಥಿತರು : ಶ್ರೀ ಯೋಗಿ ಗುರುರಾಜ್, ಮಹಾವಿದ್ಯಾಲಯ ಛೇರ್ಮನ್ ಶಿವಪ್ರಕಾಶ್ ಗುರೂಜಿ, ಮೈಸೂರು ಯೋಗ ಒಕ್ಕೂಟದ ಅಧ್ಯಕ್ಷ ಜಲೇಂದ್ರ ಕುಮಾರ್, ಮೈಸೂರು ಯೋಗ ಅಸೋಸಿಯೇಷನ್ ಗೌರವ ಅಧ್ಯಕ್ಷ ಬಿ.ವಿ. ಮಂಜುನಾಥ್, ಮೈಸೂರು ಯೋಗ ಅಸೋಸಿಯೇಷನ್ ಅಧ್ಯಕ್ಷ ತಿರುಮಲೆ ಯೋಗ ಪ್ರಕಾಶ್, ನಗರ ಪಾಲಿಕೆ ಮಾಜಿ ಸದಸ್ಯ ಫೈರೋಜ್ ಖಾನ್, ರಂಗ ನಿರ್ದೇಶಕ ಅರಸೀಕೆರೆ ಯೋಗಾನಂದ, ವಿ. ಸೋಮಶೇಖರ್, ಸ್ಥಳ: ಪರಮಹಂಸ ಯೋಗ ಮಹಾವಿದ್ಯಾಲಯ, ರಾಮಕೃಷ್ಣನಗರ, ಸಂಜೆ 5ಕ್ಕೆ.

■ **ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ :** ಮಹಾಶರಣೆ ಅಕ್ಕಮಹಾದೇವಿ ಜಯಂತಿ ಹಾಗೂ ಅಕ್ಕ ಮಹಾದೇವಿ ಸದ್ಭಾವನಾ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಶಾಸಕ ಹರೀಶ್‌ಗೌಡ, ಪುಷ್ಪಾರ್ಚನೆ : ಡಾ. ಬಿ.ಆರ್. ನಟರಾಜ್ ಜೋಯಿಸ್, ಅಧ್ಯಕ್ಷತೆ : ಶರಣ ಸಾಹಿತ್ಯ ಪರಿಷತ್, ಮೈಸೂರು ನಗರ ಘಟಕ ಅಧ್ಯಕ್ಷ ಮ.ಗು. ಸದಾನಂದಯ್ಯ, ಮುಖ್ಯ ಭಾಷಣ : ಸಾಹಿತಿ ಬನ್ನೂರು ಕೆ. ರಾಜು, ಮುಖ್ಯ ಅತಿಥಿಗಳು : ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಶ್ರೀಮತಿ ವಿದ್ಯಾ, ನಿವೃತ್ತ ಆರೋಗ್ಯ ಶಿಕ್ಷಣಾಧಿಕಾರಿ ಜಿ.ಕೆ. ಕುಲಕರ್ಣಿ, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಸಂಜೆ 5ಕ್ಕೆ.

■ **ಶ್ರೀಗಂಧ ಕಲಾವೃಂದ :** ಶ್ರೀಗಂಧ ಕಲಾವೃಂದದವರಿಂದ ಇಳಯರಾಜ, ಎಸ್.ಪಿ. ಬಾಲಸುಬ್ರಮಣ್ಯಂ ಮತ್ತು ವಿ. ರವಿಚಂದ್ರನ್ ಅವರ ಹುಟ್ಟುಹಬ್ಬದ ಪ್ರಯುಕ್ತ ವಿಶೇಷ ಬುದ್ಧಿಮಾಂದ್ಯ ಮಕ್ಕಳ ಮತ್ತು ವೃದ್ಧಾಶ್ರಮ ಸಹಾಯಾರ್ಥ ಸಂಗೀತ ರಸಸಂಜೆ, ಮುಖ್ಯ ಅತಿಥಿಗಳು : ಡಾ. ಕಾರ್ತಿಕ್ ಉಡುಪ, ಡಾ. ರೇಖಾ ಅರುಣ್, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಪಾಲಿಕೆ ಮಾಜಿ ಸದಸ್ಯ ಮಾ.ವಿ. ರಾಮಪ್ರಸಾದ್, ಮಹೇಶ್, ರವಿಶಾಸ್ತ್ರಿ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಸಂಜೆ 5.30ಕ್ಕೆ.

■ **ಮೈಸೂರು ವಕೀಲರ ಸಂಘ :** ಬಸವ ಜಯಂತಿ, ಮುಖ್ಯ ಅತಿಥಿಗಳು : ನ್ಯಾಯಮೂರ್ತಿ ಶ್ರೀನಿವಾಸ್ ಹರೀಶ್‌ಕುಮಾರ್, ಉದ್ಘಾಟನೆ : ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್, ಮುಖ್ಯ ಭಾಷಣಕಾರರು : ಬಸವ ಸಮಿತಿ ಅಧ್ಯಕ್ಷ ಅರವಿಂದ ಜತ್ತಿ, ಅಧ್ಯಕ್ಷತೆ : ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್. ಲೋಕೇಶ್, ಉಪಸ್ಥಿತರು : ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ರವೀಂದ್ರ ಹೆಗ್ಡೆ, ಬಿ.ಆರ್. ಚಂದ್ರಮೌಳಿ, ಎ.ಜಿ. ಸುಧೀರ್, ಎಂ.ವಿ. ಚಂದ್ರಶೇಖರ್, ಹೆಚ್.ಬಿ. ಭರತ್, ಕೆ.ಆರ್. ಚರಣ್‌ರಾಜ್, ಕು. ಬಿ.ವಿ. ವಿನೋದ, ಸ್ಥಳ: ಮೈಸೂರು ವಕೀಲರ ಸಂಘ, ಜಿಲ್ಲಾ ನ್ಯಾಯಾಲಯ ಆವರಣ, ಸಂಜೆ 6ಕ್ಕೆ.

■ **ರಂಗವಲ್ಲಿ :** ಭಾಸ ಮಹಾಕವಿಯ ಪ್ರತಿಜ್ಞಾ ಮತ್ತು ಸ್ವಪ್ನ ನಾಟಕ ಪ್ರದರ್ಶನ, ಪರಿಕಲ್ಪನೆ ಮತ್ತು ನಿರ್ದೇಶನ : ಸಾಲಿಯಾನ್ ಉಮೇಶ ನಾರಾಯಣ, ರಂಗವಿನ್ಯಾಸ : ಹೆಚ್.ಕೆ. ದ್ವಾರಕಾನಾಥ್, ಸಂಗೀತ : ದಿಗ್ವಿಜಯ ಹೆಗ್ಗೋಡು, ಸ್ಥಳ: ಕಿರು ರಂಗಮಂದಿರ, ಸಂಜೆ 6.30ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಜೂನ್ 1 ಶನಿವಾರ 2024

ಮೈಸೂರು ಮಿತ್ರ 45 ಅತ್ಯುತ್ತಮ ಪತ್ರಿಕೋದ್ಯಮ

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 46 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಲೋಕಸಭಾ ಚುನಾವಣಾ ಫಲಿತಾಂಶ – 2024



ದಿನಗಣನೆ
4

ಕೆಬಿಜಿಯವರ ಭೂಮಂತ್ರ..



ತ್ಯಾಜ್ಯ ರಾಶಿ ನಮ್ಮ ನಗರಕ್ಕೊಂದು ಶಾಪ
ಪ್ರಧಾನಿ ಮೋದಿ ಸಹಾಯಕ್ಕೆ ಬಂದಿದ್ದಾರೆ ಆದರೆ..!?
■ ಪುಟ–4

ಪ್ರಜ್ವಲ್ ಜೂ.6ರವರೆಗೆ ಎಸ್‌ಐಟಿ ವಶಕ್ಕೆ

● ಈತ ಸಾಮಾನ್ಯನಲ್ಲ ಜಾಮೀನು ಕೊಡಬೇಡಿ: ಎಸ್‌ಐಟಿ ಪರ ವಕೀಲ ಅಶೋಕ್ ನಾಯಕ್
● ಎಸ್‌ಐಟಿಯದ್ದು ರೆಡಿಮೇಡ್ ದೂರು; ಅವರ ವಶಕ್ಕೆ ಕೊಡಬೇಡಿ: ಪ್ರಜ್ವಲ್ ಪರ ವಕೀಲ ಅರುಣ್



ಬೆಂಗಳೂರು, ಮೇ 31(ಕೆಎಂಶಿ)– ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ, ಅತ್ಯಾಚಾರ ಹಾಗೂ ಅಪಹರಣ ಆರೋಪ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಂಸದ ಪ್ರಜ್ವಲ್ ರೇವಣ್ಣ ಅವರ ಹೆಚ್ಚಿನ ವಿಚಾರಣೆಗಾಗಿ ಜೂನ್ 6ರವರೆಗೆ ಎಸ್‌ಐಟಿ ವಶಕ್ಕೆ ನೀಡಿ ನ್ಯಾಯಾಲಯ ಆದೇಶಿಸಿದೆ.

ವಿದೇಶದಿಂದ ಬಂದ ಪ್ರಜ್ವಲ್ ಅವರನ್ನು ಇಂದು ಮುಂಜಾನೆ ವಶಕ್ಕೆ ಪಡೆದ ಎಸ್‌ಐಟಿ ಪೊಲೀಸರು, ಮಧ್ಯಾಹ್ನ ನಗರದ 42ನೇ ಎಸಿಎಂಎಂ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಮುಂದೆ ಹಾಜರುಪಡಿಸಿದರು. ವಾದ–ಪ್ರತಿವಾದ ಆಲಿಸಿ, ಒಂದು ಗಂಟೆ ಕಾಲ ತೀರ್ಪು ಕಾಯ್ದಿರಿಸಿ, ನಂತರ ನ್ಯಾಯಾಧೀಶ ಕೆ.ಎನ್. ಶಿವಕುಮಾರ್, ಒಂದು ವಾರಗಳ ಕಾಲ ಎಸ್‌ಐಟಿ ಕಸ್ಟಡಿಗೆ ನೀಡಿದರು. ಅಷ್ಟೇ ಅಲ್ಲ ಪ್ರತಿನಿತ್ಯ ಬೆಳಗ್ಗೆ 9–30ರಿಂದ 10–30ರವರೆಗೆ ತಮ್ಮ ವಕೀಲರ ಭೇಟಿಗಾಗಿ ಪ್ರಜ್ವಲ್‌ಗೆ ಅವಕಾಶ ಮಾಡಿಕೊಟ್ಟಿದ್ದಾರೆ.

ಮನೆ ಊಟ ಹಾಗೂ ತಮ್ಮನ್ನು ಇರಿಸುವ ಕೊಠಡಿ ಸ್ವಚ್ಛತೆ, ಅಲ್ಲದೆ, ಮಾಧ್ಯಮಗಳು ತೀರ್ಪುಗಳನ್ನು ನೀಡದಂತೆ ನಿರ್ಬಂಧಿಸಬೇಕು ಎಂಬ ಪ್ರಜ್ವಲ್ ಮನವಿಯನ್ನು ನ್ಯಾಯಾಲಯ ಪುರಸ್ಕರಿಸಲಿಲ್ಲ. ಇದಕ್ಕೂ ಮೊದಲು ಎಸ್‌ಐಟಿ ಪರ ವಕೀಲ ಅಶೋಕ್ ನಾಯಕ್ ಮತ್ತು ಪ್ರಜ್ವಲ್ ವಕೀಲ ಅರುಣ್ ತಮ್ಮ ತಮ್ಮ ವಾದಗಳನ್ನು ನ್ಯಾಯಾಲಯದ ಮುಂದೆ ಮಂಡಿಸಿದರು.

15 ದಿನ ಎಸ್‌ಐಟಿ ವಶಕ್ಕೆ ಕೊಡಿ: ಪ್ರಜ್ವಲ್ ಅವರನ್ನು 15 ದಿನಗಳ ಕಸ್ಟಡಿಗೆ ಕೊಡಬೇಕು. ● 7ನೇ ಪುಟಕ್ಕೆ

ನ್ಯಾಯಾಧೀಶರ ಪ್ರಶ್ನೆ

ಜಡ್ಜ್: ನಿಮ್ಮ ಹೆಸರೇನು?
ಪ್ರಜ್ವಲ್: ಪ್ರಜ್ವಲ್
ಜಡ್ಜ್: ನಿಮ್ಮನ್ನ ಎಲ್ಲಿ ಅರೆಸ್ಟ್ ಮಾಡಿದ್ರು?
ಪ್ರಜ್ವಲ್: ಕೆಂಪೇಗೌಡ ಏರ್ಪೋರ್ಟ್‌ನಲ್ಲಿ ನಿನ್ನೆ ರಾತ್ರಿ 1 ಗಂಟೆಗೆ ಅರೆಸ್ಟ್ ಮಾಡಿದ್ರು
ಜಡ್ಜ್: ಅರೆಸ್ಟ್ ಮಾಡಿದ್ದನ್ನ ನಿಮ್ಮ ಸಂಬಂಧಿಕರಿಗೆ ಹೇಳಿದ್ದಾರಾ?
ಪ್ರಜ್ವಲ್: ತಂದೆಗೆ ಹೇಳಿದ್ದಾರೆ
ಜಡ್ಜ್: ಏನಾದರೂ ತೊಂದರೆ ಕೊಟ್ರಾ?
ಪ್ರಜ್ವಲ್: ಇಲ್ಲ, ಆದರೆ ಕೊಠಡಿ ಕ್ಲೀನ್ ಇಲ್ಲ. ಶೌಚಾಲಯ ವಾಸನೆ ಇದೆ.

ಪ್ರಜ್ವಲ್‌ಗೆ ಪುರುಷತ್ವ ಪರೀಕ್ಷೆ ಸಾಧ್ಯತೆ

ಹಲವು ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಎದುರಿಸುತ್ತಿರುವ, ಜೆಡಿಎಸ್‌ನಿಂದ ಅಮಾನತುಗೊಂಡಿರುವ ಹಾಸನ ಸಂಸದ ಪ್ರಜ್ವಲ್ ರೇವಣ್ಣಗೆ ಪುರುಷತ್ವ ಪರೀಕ್ಷೆ ನಡೆಸಲು ಎಸ್‌ಐಟಿ ಚಿಂತನೆ ನಡೆಸಿದೆ ಎಂದು ಮೂಲಗಳು ತಿಳಿಸಿವೆ. ಅತ್ಯಾಚಾರ ಪ್ರಕರಣದ ಆರೋಪಿಯು ಸಂತ್ರಸ್ತ ಮಹಿಳೆಯ ಮೇಲೆ ಲೈಂಗಿಕ ದೌರ್ಜನ್ಯ ಎಸಗುವ ಸಾಮರ್ಥ್ಯ ಹೊಂದಿದ್ದಾನೆಯೇ ಎಂದು ಖಚಿತಪಡಿಸಿಕೊಳ್ಳಲು ಪುರುಷತ್ವ ಪರೀಕ್ಷೆ ಮಾಡಲಾಗುತ್ತದೆ. ಪ್ರಜ್ವಲ್ ರೇವಣ್ಣ ಮೂರು ಲೈಂಗಿಕ ದೌರ್ಜನ್ಯ ಪ್ರಕರಣಗಳನ್ನು ಎದುರಿಸುತ್ತಿದ್ದಾರೆ.

ಸೂಕ್ತ ಪ್ರಕ್ರಿಯೆ ಮುಗಿದ ನಂತರ ಪ್ರಜ್ವಲ್ ಬಂಧನವಾಗಿದೆ



ಬೆಂಗಳೂರು, ಮೇ 31– ಹಲವು ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಆರೋಪ ಎದುರಿಸುತ್ತಿರುವ ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಸೂಕ್ತ ಪ್ರಕ್ರಿಯೆ ಮುಗಿದ ಬಳಿಕ ಬಂಧಿಸಲಾಗಿದ್ದು, ಮುಂದಿನ ಕಾನೂನು ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಗೃಹ ಸಚಿವ ಜಿ ಪರಮೇಶ್ವರ ಶುಕ್ರವಾರ ಹೇಳಿದ್ದಾರೆ. ಪ್ರಜ್ವಲ್ ರೇವಣ್ಣ ಅವರು ಜರ್ಮನಿಯ ಮ್ಯೂನಿಚ್‌ನಿಂದ ಮಧ್ಯರಾತ್ರಿ 12.40ರಿಂದ 12:50ರ ಸುಮಾರಿಗೆ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂದಿಳಿದರು. ಅವರ ವಿರುದ್ಧ ಬಂಧನ ವಾರಂಟ್ ಇದ್ದ ಕಾರಣ, ಎಸ್‌ಐಟಿ ಅದರ ಪ್ರಕಾರವೇ ಅವರನ್ನು ಬಂಧಿಸಿ ಕಸ್ಟಡಿಗೆ ತೆಗೆದುಕೊಂಡಿದೆ. ಮುಂದಿನ ಕಾನೂನು ಪ್ರಕ್ರಿಯೆಗಳನ್ನು ಅವರು ಅನುಸರಿಸಲಿದ್ದಾರೆ. ನಮ್ಮ ಅಧಿಕಾರಿಗಳೊಂದಿಗೆ ನಾನು ಇನ್ನೂ ಚರ್ಚಿಸಿಲ್ಲ ಎಂದು ಪರಮೇಶ್ವರ ಹೇಳಿದರು. ಸದ್ಯಕ್ಕೆ ಪ್ರಜ್ವಲ್ ಬಂದಿದ್ದಾರೆ ಎಂಬ ಮಾಹಿತಿ ಮಾತ್ರ ಲಭ್ಯವಾಗಿದೆ. ಅವರನ್ನು ಬಂಧಿಸಲಾಗಿದೆ ● 7ನೇ ಪುಟಕ್ಕೆ

ಪ್ರಜ್ವಲ್ ತನಿಖಾ ಪ್ರಕ್ರಿಯೆಯಲ್ಲಿ 'ಸ್ತ್ರೀಶಕ್ತಿ' ಪ್ರದರ್ಶನ!

ಬೆಂಗಳೂರು, ಮೇ 31– ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಆರೋಪಿಯಾಗಿರುವ ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ಸಂಬಂಧಿಸಿದ ತನಿಖಾ ಪ್ರಕ್ರಿಯೆಗಳಲ್ಲಿ ತೊಡಗಿಸಿಕೊಂಡಿರುವುದು ಸಂಪೂರ್ಣ ಮಹಿಳಾ ಸಿಬ್ಬಂದಿ ಎಂಬುದು ಅಚ್ಚರಿ ಹಾಗೂ ಕುತೂಹಲಕಾರಿ ಸಂಗತಿಯಾಗಿದೆ.

ಗುರುವಾರ ಸರಿರಾತ್ರಿ ಜರ್ಮನಿಯಿಂದ ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದ ಪ್ರಜ್ವಲ್ ರೇವಣ್ಣ ಅವರನ್ನು ವಶಕ್ಕೆ ಪಡೆಯಲು ಅನುಕೂಲವಾಗುವಂತೆ ಎಸ್‌ಐಟಿ ಮುಖ್ಯಸ್ಥರಾದ ಎಡಿಜಿಪಿ ಬಿ.ಕೆ.ಸಿಂಗ್ ಅವರು 10 ಮಂದಿ ಎಸ್‌ಐಟಿ ಸಿಬ್ಬಂದಿ ವಿಮಾನ ನಿಲ್ದಾಣದ ಎರಡನೇ ಟರ್ಮಿನಲ್‌ಗೆ ಪ್ರವೇಶಿಸಲು ಪಾಸ್ ಪಡೆದಿದ್ದರು. ಅವರಲ್ಲಿ ಐವರು ಮಹಿಳಾ ಸಿಬ್ಬಂದಿ ಎಂಬುದು ವಿಶೇಷ. ಪ್ರಜ್ವಲ್ ರೇವಣ್ಣ ಅವರನ್ನು ಏರ್‌ಪೋರ್ಟ್‌ನಲ್ಲಿ ವಶಕ್ಕೆ ಪಡೆಯುವ ಪ್ರಕ್ರಿಯೆಯನ್ನು ಈ ಐವರು ಮಹಿಳಾ ಸಿಬ್ಬಂದಿಯೇ ನಿರ್ವಹಿಸಿದರು. ಪುರುಷ ಸಿಬ್ಬಂದಿ, ಪ್ರಜ್ವಲ್ ಅವರ ● 7ನೇ ಪುಟಕ್ಕೆ

ಇಂದು ಕೊನೇ ಹಂತದ ಮತದಾನ; ವಾರಾಣಸಿಯಲ್ಲಿ ಮೋದಿ ಭವಿಷ್ಯ ನಿರ್ಧಾರ



ವಾರಾಣಸಿ, ಮೇ 31– ಪ್ರಸಕ್ತ ಲೋಕಸಭಾ ಚುನಾವಣೆಯ 7ನೇ ಹಾಗೂ ಕೊನೆಯ ಹಂತದ ಮತದಾನ ಶನಿವಾರ (ಜೂನ್ 1) ನಡೆಯಲಿದೆ. ಇದರಲ್ಲಿ ಏಳು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶ ಚಂಡೀಗಢ ಸೇರಿದಂತೆ 57 ಕ್ಷೇತ್ರಗಳಿಗೆ ಮತದಾನ ನಡೆಯಲಿದೆ.

ಉತ್ತರ ಪ್ರದೇಶದ ವಾರಾಣಸಿಯಿಂದ ಪ್ರಧಾನಿ ನರೇಂದ್ರ ಮೋದಿ ಅವರು ಮೂರನೇ ಬಾರಿಗೆ ಸ್ಪರ್ಧಿಸುತ್ತಿದ್ದಾರೆ. ಪಂಜಾಬ್‌ನ 13 ಕ್ಷೇತ್ರ, ಹಿಮಾಚಲ ಪ್ರದೇಶದ 4, ಉತ್ತರ ಪ್ರದೇಶದ 13, ಪಶ್ಚಿಮ ಬಂಗಾಳದ 9, ಬಿಹಾರದ 8 ಹಾಗೂ ಒಡಿಶಾದ 6, ಜಾರ್ಖಂಡ್‌ನ 3 ಕ್ಷೇತ್ರಗಳಿಗೆ ಮತದಾನ ನಡೆಯಲಿದೆ. ಇದರೊಂದಿಗೆ ಒಡಿಶಾದ 42 ಮತ್ತು ಹಿಮಾಚಲ ಪ್ರದೇಶದ ಆರು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯ ಮತದಾನವೂ ಜೂನ್ 1ರಂದೇ ನಡೆಯಲಿದೆ. ಕೇಂದ್ರ ಸಚಿವ ಅನುರಾಗ್ ಠಾಕೂರ್, ಮಮತಾ ಬ್ಯಾನರ್ಜಿ ಸಂಬಂಧಿ ಅಭಿಷೇಕ್ ಬ್ಯಾನರ್ಜಿ, ಲಾಲು ಪ್ರಸಾದ್ ಪುತ್ರಿ ಮಿಸಾ ಭಾರ್ತಿ, ನಟಿ ಕಂಗನಾ ರನೌತ್ ಸೇರಿದಂತೆ 904 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ● 7ನೇ ಪುಟಕ್ಕೆ

ಭವಾನಿ ರೇವಣ್ಣಗೆ ನಿರೀಕ್ಷಣಾ ಜಾಮೀನು ಅರ್ಜಿ ವಜಾ

● ತನಿಖೆಗೆ ಸಹಕರಿಸುವಂತೆ ನೋಟಿಸ್ ● ಎಸ್‌ಐಟಿಯಿಂದ ಬಂಧನದ ಭೀತಿ



ಬೆಂಗಳೂರು, ಮೇ 31– ಕಿಡ್ನಾಪ್ ಕೇಸ್‌ನಲ್ಲಿ ಮಾಜಿ ಸಚಿವ ಎಚ್.ಡಿ. ರೇವಣ್ಣ ಪತ್ನಿ ಭವಾನಿ ರೇವಣ್ಣ ಅವರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಕೋರ್ಟ್ ತಿರಸ್ಕರಿಸಿದೆ. ಇದರೊಂದಿಗೆ ಅವರು ಈ ಕೇಸ್‌ನಲ್ಲಿ ಎಸ್‌ಐಟಿಯಿಂದ ಬಂಧನದ ಭೀತಿ ಎದುರಿಸುವಂತಾಗಿದೆ.

ಕೆಆರ್ ನಗರ ಠಾಣೆಯಲ್ಲಿ ದಾಖಲಾಗಿದ್ದ ಕಿಡ್ನಾಪ್ ಕೇಸ್‌ನಲ್ಲಿ ಬಂಧನ ಭೀತಿಯಿಂದ ಭವಾನಿ ಅವರು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ನಿರೀಕ್ಷಣಾ ಜಾಮೀನು ಅರ್ಜಿ ಸಲ್ಲಿಸಿದ್ದರು. ವಾದ–ಪ್ರತಿವಾದ ಆಲಿಸಿ ಆದೇಶವನ್ನು ಕೋರ್ಟ್ ಕಾಯ್ದಿರಿಸಿತ್ತು. ಇಂದು ನ್ಯಾಯಾಧೀಶರಾದ ಸಂತೋಷ್ ಗಜಾನನ ಭಟ್ ಅವರು ಸಂಜೆಯ ವೇಳೆಗೆ ತೀರ್ಪು ನೀಡಿದ್ದು, ಅವರ ಅರ್ಜಿಯನ್ನು ವಜಾ ಮಾಡಿದ್ದಾರೆ.

ಕಿಡ್ನಾಪ್ ಪ್ರಕರಣದಲ್ಲಿ ಒಳಸಂಚು ರೂಪಿಸಿದ್ದ ಆರೋಪ ಅವರ ಮೇಲಿದೆ. ಮೇ 8 ರಿಂದ ಭವಾನಿ ರೇವಣ್ಣ ನಾಪತ್ತೆಯಾಗಿದ್ದಾರೆ. ಈಗಾಗಲೇ ಭವಾನಿಗೆ ನೋಟಿಸ್ ನೀಡಿರುವ ಎಸ್‌ಐಟಿ, ನಾಳೆ ವಿಚಾರಣೆಗೆ ಸಹಕರಿಸುವಂತೆ ನೋಟಿಸ್ ನೀಡಿದೆ. ಕಿಡ್ನಾಪ್ ಕೇಸ್‌ನಲ್ಲಿ ಭವಾನಿ ರೇವಣ್ಣ ಸಲ್ಲಿಸಿದ್ದ ನಿರೀಕ್ಷಣಾ ಜಾಮೀನಿನ ಅರ್ಜಿಯ ಮೇಲೆ ವಾದ ಮಂಡಿಸಿದ್ದ ಭವಾನಿ ಪರ ವಕೀಲರು, ಯಾವುದೇ ಕಾಲ್ ರೆಕಾರ್ಡ್ ಅನ್ನು ಭವಾನಿ ಅವರ ಮೊಬೈಲ್‌ನಿಂದ ಅಥವಾ ಅವರ ಲ್ಯಾಂಡ್‌ಲೈನ್‌ನಿಂದ ತೆಗೆದುಕೊಂಡಿಲ್ಲ. ರೇವಣ್ಣ ಹಾಗೂ ಸತೀಶ್ ಬಾಬಣ್ಣ ಫೋನಲ್ಲಿ ಮಾತಾಡಿದ್ದಾರೆ. ಆದರೆ, ಭವಾನಿ ಅವರು ಮಾತಾಡಿರುವ ಬಗ್ಗೆ ಯಾವುದೇ ಸಾಕ್ಷಿ ಇಲ್ಲ ಎಂದು ಹೇಳಿದರು. ಈ ಹಂತದಲ್ಲಿ ಎಸ್‌ಐಟಿ ಪರ ವಕೀಲರು, ಮಗನ ಮೇಲೆ ಕೇಸ್ ಆದ ತಕ್ಷಣ ಸಂಚು ಶುರುವಾಗಿದೆ. ಮಗನ ರಕ್ಷಣೆಗಾಗಿ ಭವಾನಿ ರೇವಣ್ಣ ಒಳಸಂಚು ಮಾಡಿದ್ದರು ಎಂದು ತನಿಖೆಯ ಅಂಶಗಳನ್ನು ನೀಡಲು ಮುಂದಾದರು. ಈ ಹಂತದಲ್ಲಿ ಭವಾನಿ ಪರ ವಕೀಲರು ಆಕ್ಷೇಪ ವ್ಯಕ್ತಪಡಿಸಿ, ನಿಮ್ಮ ತನಿಖೆಯ ಏನೇ ಅಂಶಗಳಿದ್ದರೂ ಅದನ್ನು ಓಪನ್ ಕೋರ್ಟ್‌ನಲ್ಲಿ ಹೇಳುವಂತಿಲ್ಲ. ಅದನ್ನು ಕೋರ್ಟ್‌ಗೆ ಲಿಖಿತವಾಗಿ ನೀಡುವಂತೆ ಮನವಿ ಮಾಡಿದರು. ಎಸ್‌ಐಟಿ ಪರ ವಾದ ಮಂಡನೆ ಮಾಡಿದ್ದ ವಕೀಲರು. ಸಂಚಿನಲ್ಲಿ ಭವಾನಿ ಭಾಗಿಯಾಗಿದ್ದಾರೆ ಎಂಬುದಕ್ಕೆ ಸಾಕ್ಷಿಗಳಿವೆ. ● 10ನೇ ಪುಟಕ್ಕೆ

ವಾಲ್ಮೀಕಿ ನಿಗಮದಲ್ಲಿ ಹಣ ಅಕ್ರಮ ವರ್ಗಾವಣೆ ಪ್ರಕರಣ

ಸಿಬಿಐ ತನಿಖೆಗೆ ವಹಿಸಿದ ಯೂನಿಯನ್ ಬ್ಯಾಂಕ್

● ಇಕ್ಕಟ್ಟಿಗೆ ಸಿಲುಕಿದ ರಾಜ್ಯ ಕಾಂಗ್ರೆಸ್ ಸರ್ಕಾರ ● ಹಿರಿಯ ಸಚಿವರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ತುರ್ತು ಸಮಾಲೋಚನೆ ● ವರದಿ ಪಡೆದ ನಂತರ ಸಚಿವ ನಾಗೇಂದ್ರ ವಿರುದ್ಧ ಕ್ರಮಕ್ಕೆ ನಿರ್ಧಾರ

ಬೆಂಗಳೂರು, ಮೇ 31(ಕೆಎಂಶಿ)– ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಬುಡಕಟ್ಟು ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಹಣ ಅಕ್ರಮ ವರ್ಗಾವಣೆಗೆ ಸಂಬಂಧಿಸಿದ ಪ್ರಕರಣದ ತನಿಖೆಯನ್ನು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಸಿಬಿಐಗೆ ವಹಿಸಿದೆ.

ಬ್ಯಾಂಕ್ ನಿರ್ಧಾರ ಕರ್ನಾಟಕ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿದ್ದು ಇಲಾಖೆ ಹೊಣೆ ಹೊತ್ತಿರುವ ಸಚಿವ ನಾಗೇಂದ್ರ ತಲೆದಂಡವಾಗುವ ಸಾಧ್ಯತೆ ಇದೆ.

ಸಿಎಂ ಸಮಾಲೋಚನೆ: ಪ್ರಕರಣ ಸಿಬಿಐಗೆ ವಹಿಸುತ್ತಿದ್ದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಗೃಹ ಕಚೇರಿ ಕೃಷ್ಣಾದಲ್ಲಿ, ಹಿರಿಯ ಸಚಿವ ಎಂ.ಬಿ.ಪಾಟೀಲ್ ಅಲ್ಲದೆ, ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೆ ಸೇರಿದ ಸಚಿವರಾದ ಡಾ.ಜಿ.ಪರಮೇಶ್ವರ್ ಡಾ.ಎಚ್.ಸಿ.ಮಹದೇವಪ್ಪ, ಕೆ.ಎನ್. ರಾಜಣ್ಣ ಪ್ರಿಯಾಂಕ್ ಖರ್ಗೆ ಜೊತೆ ಸಮಾಲೋಚನೆ ನಡೆಸಿದರು. ● 10ನೇ ಪುಟಕ್ಕೆ

ವಾಲ್ಮೀಕಿ ನಿಗಮದ ಅಧಿಕಾರಿ ಆತ್ಮಹತ್ಯೆ ಪ್ರಕರಣ ತನಿಖೆಗೆ ಎಸ್‌ಐಟಿ ರಚನೆ

ಬೆಂಗಳೂರು,ಮೇ 31–ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧಿಕಾರಿ ಚಂದ್ರಶೇಖರ್ ಆತ್ಮಹತ್ಯೆ ಹಾಗೂ ನಿಗಮದಲ್ಲಿ ನಡೆದಿರುವ ಹಣಕಾಸಿನ ಅವ್ಯವಹಾರಗಳ ಬಗ್ಗೆ ತನಿಖೆಗೆ ಐಪಿಎಸ್ ಅಧಿಕಾರಿ ಮನೀಷ್ ಖರ್ಬೀಕರ್ ನೇತೃತ್ವದಲ್ಲಿ ರಾಜ್ಯ ಸರ್ಕಾರ ವಿಶೇಷ ತನಿಖಾ ತಂಡ(ಎಸ್‌ಐಟಿ) ರಚಿಸಿದೆ. ಆರ್ಥಿಕ ಅಪರಾಧ ವಿಭಾಗದ ಎಡಿಜಿಪಿ ಮನೀಷ್ ಖರ್ಬೀಕರ್ ನೇತೃತ್ವದಲ್ಲಿ ನಾಲ್ವರು ಐಪಿಎಸ್ ಅಧಿಕಾರಿಗಳನ್ನೊಳಗೊಂಡ ಎಸ್‌ಐಟಿ ರಚನೆ ಮಾಡಲಾಗಿದ್ದು, ● 7ನೇ ಪುಟಕ್ಕೆ

ಆರ್‌ಟಿಐ ಕಾಯಿದೆ ವಸತಿ ಶಾಲೆಗಳಿಗೂ ಅನ್ವಯ

ಹೈಕೋರ್ಟ್ ಸ್ಪಷ್ಟನೆ

ಬೆಂಗಳೂರು, ಮೇ 31– ವಸತಿ ಶಾಲೆಗಳಿಗೂ ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ (ಅರ್‌ಟಿಐ) 2009 ಕಾಯಿದೆಯ ಅಂಶಗಳು ಅನ್ವಯವಾಗುತ್ತವೆ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ಸರ್ಕಾರದಿಂದ ಯಾವುದೇ ಅನುದಾನವಿಲ್ಲದೇ ಐಸಿಎಸ್‌ಇ ಶಾಲೆ ನಡೆಸುತ್ತಿರುವ ಮೈಸೂರಿನ ಜ್ಞಾನ ಸರೋವರ ಎಜುಕೇಷನ್ ಟ್ರಸ್ಟ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ಪೀಠ ಈ ಆದೇಶ ನೀಡಿದೆ. ಅಲ್ಲದೆ, ಆರ್‌ಟಿಇ ಕಾಯಿದೆಯಲ್ಲಿನ ನಿಯಮಗಳನ್ನು ಪಾಲಿಸದ ಕಾರಣಕ್ಕೆ ಶಿಕ್ಷಣ ಇಲಾಖೆ ಅಧಿಕಾರಿಗಳು 2021ರ ನ.23 ರಂದು 1.61 ಕೋಟಿ ರೂ. ದಂಡ ವಿಧಿಸಿದ್ದನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಾಲಯ ವಜಾಗೊಳಿಸಿದೆ. ಜತೆಗೆ, ಆರ್‌ಟಿಇ ಕಾಯಿದೆ ನಿಯಮ 18ರ ಪ್ರಕಾರ ಮತ್ತು ಕರ್ನಾಟಕ ಆರ್‌ಟಿಇ ಕಾಯಿದೆ ನಿಯಮ 11ರಂತೆ, ನಮೂನೆ–1ರಂತೆ ಸರ್ಕಾರ ಹೊರತುಪಡಿಸಿ ಇತರ ಎಲ್ಲ ಶಾಲೆಗಳು ಸಕ್ಷಮ ಪ್ರಾಧಿಕಾರದಲ್ಲಿ ಅರ್ಜಿ ಸಲ್ಲಿಸಿ ನೋಂದಣಿ ● 10ನೇ ಪುಟಕ್ಕೆ

ಮೈಸೂರು ಎಂಜಿ ರಸ್ತೆಯ ಮಾರುಕಟ್ಟೆ ಬಳಿ ಸಾರ್ವಜನಿಕರ ವಾಹನಗಳ ಸಂಚಾರ ಕಿರಿಕಿರಿಗೆ ಅಧಿಕಾರಿ ವರ್ಗದಲ್ಲಿ ಪರಿಹಾರ ಇಲ್ಲವೇ...!?

● ಈ ರಸ್ತೆ ಬಳಕೆದಾರರ ನೋವಿನ ಪ್ರಶ್ನೆ ● ಹೇಗಾದರೂ ನಡೆದುಕೊಂಡು ಹೋಗಲಿ ಎಂಬಂತಿದೆ ಆಡಳಿತ ವ್ಯವಸ್ಥೆ ನಿಲುವು

ಮೈಸೂರು, ಮೇ 31(ಎಂಕೆ)– 'ಎತ್ತು ಏರಿಗೆ ಎಳೆದರೆ ಕೋಣ ನೀರಿಗೆ ಎಳೆದಂತೆ' ಎಂಬ ಗಾದೆ ಮಾತಿನಂತಿದೆ ಮೈಸೂರಿನ ಎಂ.ಜಿ.ರಸ್ತೆ ಮಾರುಕಟ್ಟೆಯ ಪರಿಸ್ಥಿತಿ. ಅಧಿಕಾರಿ ವರ್ಗ ಸುಗಮ ವಾಹನ ಸಂಚಾರಕ್ಕೆ ವ್ಯವಸ್ಥೆ ರೂಪಿಸಿದರೆ ಮೂರೇ ದಿನಕ್ಕೆ ಗೂಡ್ಸ್ ವಾಹನಗಳು ವ್ಯಾಪಾರಿಗಳು ಅದನ್ನು ಧಿಕ್ಕರಿಸುತ್ತಿದ್ದಾರೆ.

ದಿನ ಬೆಳಗಾದರೆ ಹಿಂಡುಗೂಡುವ ಜನ, ಗೂಡ್ಸ್ ವಾಹನಗಳ ಅಡ್ಡಾದಿಡ್ಡಿ ನಿಲುಗಡೆಯಿಂದಾಗಿ ಮಾರುಕಟ್ಟೆ ವ್ಯಾಪ್ತಿಯ ಎಂ.ಜಿ.ರಸ್ತೆಯನ್ನು ದಾಟಿ ಮುಂದೆ ಸಾಗಬೇಕೆಂದರೆ ವಾಹನ ಸವಾರರ ಅದೃಷ್ಟ ನೆಟ್ಟಗಿರಬೇಕು. ಸರಿ ಸುಮಾರು 2 ದಶಕದ ಮಾರುಕಟ್ಟೆ ಇದಾಗಿದ್ದು, ಸಂಜೆ 5 ಗಂಟೆಯಿಂದಲೇ ನೂರಾರು ಮಂದಿ ರೈತರು ತಾವು ಬೆಳೆದ ತರಕಾರಿ, ಸೊಪ್ಪು, ಹಣ್ಣು–ಹಂಪಲು ವ್ಯಾಪಾರ–ವಹಿವಾಟು ಆರಂಭಿಸುತ್ತಾರೆ. ಪಾಪ ಹೊಟ್ಟೆಪಾಡು ಮಾಡಲಿ... ವಿಪರ್ಯಾಸವೆಂದರೆ ಇಡೀ ರಸ್ತೆಯೇ ಮಾರುಕಟ್ಟೆಯಾಗಿ ಪರಿವರ್ತನೆಯಾದರೆ ಹೇಗೆ? ಆ ಮಾರ್ಗವಾಗಿ ಸಂಚರಿಸುವ ವಾಹನ ಸವಾರರು ಮತ್ತು ಪಾದಚಾರಿಗಳ ಪಾಡೇನು. ಅಗ್ರಹಾರದಿಂದ ಮಾಲ್ ಆಫ್ ಮೈಸೂರ್ ಕಡೆಗೆ ಹಾಗೂ ಮಾಲ್ ಆಫ್ ಮೈಸೂರ್ ಕಡೆಯಿಂದ ಜೆಎಸ್‌ಎಸ್ ಆಸ್ಪತ್ರೆ ● 10ನೇ ಪುಟಕ್ಕೆ



ಮೈಸೂರಿನ ಎಂಜಿ ರಸ್ತೆ ಮಾರುಕಟ್ಟೆ ಬಳಿ ಪ್ರತಿನಿತ್ಯ ಕಂಡುಬರುವ ವಾಹನ ದಟ್ಟಣೆಯ ದೃಶ್ಯವಿದು.



"ಎಂಜಿ ರಸ್ತೆ ಮಾರುಕಟ್ಟೆ ಸಂಬಂಧ ಬಹಳಷ್ಟು ಸಿವಿಲ್ ವಿವಾದಗಳಿರುವುದು ಗಮನಕ್ಕೆ ಬಂದಿದೆ. ಹಾಗಾಗಿ ಲೋಕಸಭಾ ಚುನಾವಣೆಯ ಫಲಿತಾಂಶದ ನಂತರ ಮಾರುಕಟ್ಟೆ ಬಳಕೆ ಮಾಡುತ್ತಿರುವ ಮಧ್ಯಸ್ಥಗಾರರು, ಸ್ಥಳೀಯ ಶಾಸಕರು, ಮುಖಂಡರು, ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷರು ಮತ್ತು ಅಧಿಕಾರಿಗಳು, ಪಾಲಿಕೆ ಹಾಗೂ ಪೊಲೀಸ್ ಅಧಿಕಾರಿಗಳು ಸೇರಿದಂತೆ ಸಂಬಂಧಪಟ್ಟವರೊಂದಿಗೆ ಸಭೆ ನಡೆಸಿ ಸೂಕ್ತ ನಿರ್ಣಯ ಕೈಗೊಳ್ಳಲಾಗುವುದು. ರೈತರು ವ್ಯವಸ್ಥಿತವಾಗಿ ವ್ಯಾಪಾರ–ವಹಿವಾಟು ನಡೆಸಲು ಖಾಸಗಿ ಅಥವಾ ದಸರಾ ವಸ್ತುಪ್ರದರ್ಶನ ಮೈದಾನದಲ್ಲಿ ಜಾಗ ನೀಡುವ ಕುರಿತು ಗಂಭೀರವಾಗಿ ಚರ್ಚಿಸಿ ಸೂಕ್ತ ನಿರ್ಣಯಕ್ಕೆ ಬರಲಾಗುವುದು. ಜೊತೆಗೆ ಇಲ್ಲಿ ವಾಹನ ಸಂಚಾರಕ್ಕೆ ಆಗುತ್ತಿರುವ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಈಗಾಗಲೇ ಕೆಲ ಸೂಚನೆಗಳನ್ನು ನೀಡಲಾಗಿತ್ತು. ಆದರೆ ಅದನ್ನು ಧಿಕ್ಕರಿಸಿದ್ದಾರೆ. ರಸ್ತೆ ಬದಿಯಲ್ಲಿ ವಾಹನಗಳನ್ನು ನಿಲ್ಲಿಸದಂತೆ ಹಾಗೂ ಡಿವೈಡರ್ ದಾಟದಂತೆ ಬ್ಯಾರಿಕೇಡ್‌ಗಳನ್ನು ಅಳವಡಿಸಲು ಸೂಚಿಸಲಾಗುವುದು.

– ಡಾ.ಕೆ.ವಿ.ರಾಜೇಂದ್ರ, ಜಿಲ್ಲಾಧಿಕಾರಿ

ನಕ್ಕರೆ ಅದೇ ಸ್ವರ್ಗ

ಮಹಿಳೆಯೊಬ್ಬರು : (ಅಂಚೆ ಕಚೇರಿಯಲ್ಲಿ ಅಂಚೆ ಮಾಸ್ತರರಿಗೆ ಲಕೋಟೆಯನ್ನು ನೀಡುತ್ತಾ) "ಸ್ಟಾಂಪ್ ಸರಿಯಾಗಿ ಹಚ್ಚಲಾಗಿದೆಯೇ?"
ಅಂಚೆ ಮಾಸ್ತರರು : (ಲಕೋಟೆ ತೂಗಿ) "ನೀವು ಜಾಸ್ತಿ ಬೆಲೆ ಸ್ಟಾಂಪ್ ಹಚ್ಚಿದ್ದೀರಿ"
ಮಹಿಳೆ : "ಅಯ್ಯೋ, ಹಾಗಾದರೆ ಈ ಲಕೋಟೆ ನಿಗದಿ ಮಾಡಿದ ವಿಳಾಸಕ್ಕಿಂತ ದೂರ ಹೋಗಿ ಬಿಡುವುದಿಲ್ಲ ತಾನೆ!"

ಮೈಸೂರು ಮಿತ್ರ
ಶನಿವಾರ, 1 ಜೂನ್ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........


ಜ್ಞಾನವೇ ಸಂಪತ್ತು, ಗೌರವ, ದೀರ್ಘಾಯುಸ್ಸು,
ಸಕಲ ಸೌಭಾಗ್ಯಗಳನ್ನು ನೀಡುವುದು –ಜ್ಞಾನಮಾರ್ಗ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅರಮನೆ ಮುನಿದರೆ ಇರಬಹುದು, ನೆರಮನೆ ಮುನಿದರೆ ಇರಲಾಗದು.

ನಿಮ್ಮ ಪತ್ರಗಳು

■ ವಾಹನ ತಪಾಸಣೆ ನೆಪದಲ್ಲಿ 'ಹಗಲು ದರೋಡೆ'!

ಮಾನ್ಯರೇ,



ದಿನಾಂಕ ಮೇ 28ರಂದು ಮಂಗಳವಾರ ಸಂಜೆ 6.30ರಲ್ಲಿ ನಾನು ಅಗ್ರಹಾರದಿಂದ ಜಯನಗರದ ಮಾರ್ಗ ವಾಗಿ ಕುವೆಂಪುನಗರಕ್ಕೆ ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದಾಗ, ಎನ್‌ಐಇ ಕಾಲೇಜು ರೈಲ್ವೆ ಕೆಳ ಸೇತುವೆ ಬಳಿ ವಾಹನ ತಪಾಸಣೆ ಮಾಡುತ್ತಿದ್ದ ಮಫ್ತಿಯಲ್ಲಿದ್ದ ಪೊಲೀಸರು ನನ್ನನ್ನು ತಡೆದು ನೀವು ಹೆಲ್ಮೆಟ್ ಧರಿಸದ ಕಾರಣ 500 ರೂ. ದಂಡವನ್ನು ಕಟ್ಟಬೇಕೆಂದು ಪಟ್ಟು ಹಿಡಿದರು. ಅದರಂತೆ ನಾನು ದಂಡವನ್ನು ನನ್ನ ಯುಪಿಐ ಪಾವತಿ ಮೂಲಕ 500 ರೂ.ಗಳನ್ನು ಅವರು ತೋರಿಸಿದ ಫೋನಿನ ಸ್ಕ್ಯಾನರ್ ಮೂಲಕ ದಂಡವನ್ನು ಪಾವತಿಸಿದೆ. ಅದಾದ ನಂತರ ಇದು ಅವರ ಸ್ವಂತ ಖಾತೆಗೆ ಜಮಾ ಆಗಿರುವುದು ನನ್ನ ಗಮನಕ್ಕೆ ಬಂತು.


ತಕ್ಷಣ ವಾಪಸ್ ಬಂದು ನಾನು ಅವರನ್ನು ವಿಚಾರಿಸಿದಾಗ ನಾನು ಸರ್ಕಾರಕ್ಕೆ ಹಣ ಪಾವತಿಸಿರುತ್ತೇನೆ. ಆದರೆ ನೀವು ನಿಮ್ಮ ಸ್ವಂತ ಖಾತೆಗೆ ನನ್ನ ಹಣವನ್ನು ವರ್ಗಾಯಿಸಿದ್ದೀರಿ. ಇದು ತಪ್ಪಲ್ಲವೇ? ಎಂದು ಪ್ರಶ್ನಿಸಿದಾಗ, ಅವರು ಉಡಾಫೆಯಾಗಿ ಉತ್ತರ ನೀಡಿ, ಹೋಗು ಎಲ್ಲಿಯಾದರೂ ಹೋಗಿ ದೂರು ಕೊಡು ಎಂದು ಹೇಳಿದರು.

ನಾನು ಕಂಡಂತೆ ಕಳೆದ 2–3 ದಿನಗಳಿಂದ ಅದೇ ಸ್ಥಳದಲ್ಲಿ ವಾಹನ ತಪಾಸಣೆ ಮಾಡುತ್ತಿದ್ದು, ಇಂತಹ ದಂಧೆ ಎಡೆಬಿಡದೆ ನಡೆಯುತ್ತಿದೆ. ನನ್ನಂತಹ ಅನೇಕ ಮುಗ್ಧ ಜನ ಇವರ ಬಲೆಗೆ ಬಿದ್ದು ದಂಡ ಕಟ್ಟುತ್ತಿದ್ದಾರೆ. ಪೊಲೀಸರು ಮಫ್ತಿಯಲ್ಲಿದ್ದು ಸರ್ಕಾರಕ್ಕೆ ಸೇರಬೇಕಾದ ಹಣವನ್ನು ತಮ್ಮ ಸ್ವಂತ ಖಾತೆಗೆ ವರ್ಗಾವಣೆ ಮಾಡಿಕೊಳ್ಳುವುದು ಎಷ್ಟರ ಮಟ್ಟಿಗೆ ಸರಿ? ಇದು ಹಗಲು ದರೋಡೆಯಲ್ಲವೇ? ಮಫ್ತಿಯಲ್ಲಿ ವಾಹನ ತಪಾಸಣೆ ಮಾಡಲು ಸರ್ಕಾರದಿಂದ ಅನುಮತಿ ಇದೆಯೇ? ಸರ್ಕಾರದ ಹಣವನ್ನು ತಮ್ಮ ಸ್ವಂತ ಖಾತೆಗೆ ಜಮೆ ಮಾಡಿಸಿಕೊಳ್ಳಲು ಪೊಲೀಸ್ ಇಲಾಖೆಯಲ್ಲಿ ಅವಕಾಶ ಇದೆಯೆ?

ಆದ್ದರಿಂದ ಪೊಲೀಸ್ ಆಯುಕ್ತರು ತಕ್ಷಣ ಕಾರ್ಯೋನ್ಮುಖರಾಗಿ, ಪರಿಶೀಲಿಸಿ ಇಂತಹ ಪೊಲೀಸರನ್ನು ಕರೆಸಿ ವಿಚಾರಣೆ ನಡೆಸಿ, ಕ್ರಮ ಕೈಗೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇನೆ.

– ಅರುಣ್‌ಕುಮಾರ್, ಜಯನಗರ, ಮೈಸೂರು

■ ನೀರಿನ ಪೈಪ್‌ಲೈನ್ ದುರಸ್ಥಿಗೊಳಿಸಿ



ಮಾನ್ಯರೆ,

ಮೈಸೂರಿನ ಸರಸ್ವತಿಪುರಂ ಪಂಪಾಪತಿ ರಸ್ತೆಯಲ್ಲಿರುವ ಕ್ಯಾಪಿಟೋಲ್ ಪಬ್ಲಿಕ್ ಶಾಲೆ ಮುಂಭಾಗ ಕೆ.ಜಿ.ಕೊಪ್ಪಲು ಬಡಾವಣೆಗೆ ಸಂಪರ್ಕವಿರುವ ಕುಡಿಯುವ ನೀರಿನ ಪೈಪ್‌ಲೈನ್ ಹಾದು ಹೋಗಿದ್ದು, ಇದು ಹಲವು ದಿನಗಳಿಂದ ಒಡೆದು ಸೋರಿಕೆಯಾಗುತ್ತಿದೆ. ಹೀಗೆ, ಸೋರಿಕೆಯಾಗುತ್ತಿರುವ ನೀರು ಹರಿದು ಹೋಗದಂತೆ ಮಣ್ಣಿನಿಂದ ಕಟ್ಟೆ ಕಟ್ಟಿದ್ದಾರೆ. ಹೀಗಾಗಿ, ದಿನದಿಂದ ದಿನಕ್ಕೆ ನೀರಿಗೆ ಕಸ ಕಡ್ಡಿ ಸೇರಿ ಕಲುಷಿತಗೊಂಡು ಪುನಃ ನೀರಿನ ಪೈಪ್‌ಗೆ ಸೇರುತ್ತಿರುವುದರಿಂದ ಇದು ಯಾವಾಗ ಬೇಕಾದರೂ ಕೆ.ಜಿ.ಕೊಪ್ಪಲು ಗ್ರಾಮದ ಜನರಿಗೆ ಕಂಟಕವಾಗಿ ಪರಿಣಮಿಸಬಹುದು. ಆದ್ದರಿಂದ, ಸಂಬಂಧಪಟ್ಟವರು ಕೂಡಲೇ ಎಚ್ಚೆತ್ತು ಅತೀ ತುರ್ತಾಗಿ ನೀರಿನ ಪೈಪ್‌ಲೈನ್ ದುರಸ್ಥಿಗೊಳಿಸಿ ಆಗಬಹುದಾದ ಅನಾಹುತ ತಪ್ಪಿಸಬೇಕಿದೆ.

–ಬಿ. ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.


■ ಚಹಾ ಅಂಗಡಿಗಳು ಧೂಮಪಾನಿಗಳ ಕಟ್ಟೆಯಾಗಿವೆ!

ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ಮೈಸೂರು ನಗರದಲ್ಲಿ ಟೀ, ಕಾಫಿ ಮಾರಾಟ ಮಾಡುವ ಸ್ಟಾಲ್‌ಗಳು ಹೆಚ್ಚಾಗುತ್ತಿದೆ. ಇದು ಚಹಾ ಪ್ರಿಯರಿಗೆ ಒಳ್ಳೆಯ ವಿಷಯ ಹಾಗೂ ವಾಣಿಜ್ಯ ದೃಷ್ಟಿಯಿಂದ ಉತ್ತಮ ಬೆಳವಣಿಗೆ ಸಹ ಹೌದು. ಆದರೆ ಕೆಲವು ಚಹಾ ಅಂಗಡಿಗಳಲ್ಲಿ ಮಕ್ಕಳು, ಮಹಿಳೆಯರು, ಹಿರಿಯ ನಾಗರಿಕರು, ಧೂಮಪಾನ ಮಾಡದವರು, ಚಹಾ ಸೇವಿಸಲು ಹೋಗದ ಪರಿಸ್ಥಿತಿ ಇದೆ. ಕಾರಣ ಹೆಚ್ಚು ಧೂಮಪಾನಿಗಳು ಚಹಾ ಅಂಗಡಿಗಳಲ್ಲಿ ಗಂಟೆಗಟ್ಟಲೆ ಬೀಡಿ – ಸಿಗರೇಟ್ ಸೇದುತ್ತಾ ಹರಟೆ ಹೊಡೆಯುವ ದೃಶ್ಯಗಳು ಕಂಡು ಬರುತ್ತಿದೆ. ಇದು ಇಡೀ ಚಹ ಅಂಗಡಿಯನ್ನೇ ವ್ಯಾಪಿಸಿ ಧೂಮಪಾನಿ ಅಲ್ಲದವರಿಗೂ ಹೊಗೆ ಕುಡಿಯುವ ಹಾಗೆ ಆಗುತ್ತಿದೆ. ಟೀ, ಕಾಫಿ ಕೊಂಡರೆ ಸಿಗರೇಟಿನ ಹೊಗೆ ಉಚಿತ ಅನ್ನೋ ಹಾಗೆ ಆಗಿದೆ. ಧೂಮಪಾನಿಗಳಿಂದ ಆರೋಗ್ಯವಂತರಿಗೂ ನಿರಾಯಾಸವಾಗಿ ಶ್ವಾಸಕೋಶ ಸಂಬಂಧಿತ ರೋಗಗಳು ಹರಡುವ ಸಾಧ್ಯತೆ ಕೂಡ ಹೆಚ್ಚಿರುತ್ತದೆ.

ಕೋಟ್ಪಾ ಖಾಯಿದೆ 2003 ರನ್ವಯ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುವುದು ಅಪರಾಧವಾಗಿದ್ದು, ಇದು ರಾಜಾರೋಷವಾಗಿ ಉಲ್ಲಂಘನೆಯಾಗುತ್ತಿದೆ. ಇದರ ಬಗ್ಗೆ ಆರೋಗ್ಯ ಇಲಾಖೆ, ಮಹಾನಗರ ಪಾಲಿಕೆ ಸೂಕ್ತ ಕ್ರಮ ತೆಗೆದುಕೊಂಡು ಚಹ ಅಂಗಡಿಗಳನ್ನು ಧೂಮಪಾನದಿಂದ ಮುಕ್ತಗೊಳಿಸಬೇಕಾಗಿದೆ.

–ನಾಗೇಂದ್ರ ಕಿಲಗೆರೆ, ಮೈಸೂರು



ಕೆಬಿಜಿಯವರ

ಭೂಮಂತ್ರ... ಭೂಮಂತ್ರ... ಭೂಮಂತ್ರ...

ತ್ಯಾಜ್ಯ ರಾಶಿ ನಮ್ಮ ನಗರಕ್ಕೊಂದು ಶಾಪ

ಪ್ರಧಾನಿ ಮೋದಿ ಸಹಾಯಕ್ಕೆ ಬಂದಿದ್ದಾರೆ ಆದರೆ...!?



ಪ್ರಧಾನಿ ಮೋದಿಯವರ ಕನಸಿನ ಕೂಸು...

ಸ್ವಚ್ಛ ಭಾರತ ಅಭಿಯಾನ ಅಥವಾ ಸ್ವಚ್ಛ ಭಾರತ್ ಮಿಷನ್ ಭಾರತ ಸರ್ಕಾರದ ರಾಷ್ಟ್ರ ಮಟ್ಟದ ಅಭಿಯಾನವಾಗಿದೆ. ಇದು 4,041 ಪಟ್ಟಣಗಳನ್ನು ಒಳಗೊಂಡಂತೆ ರಸ್ತೆಗಳು ಹಾಗೂ ಬಡಾವಣೆಯ ಬೀದಿಗಳನ್ನು ಸ್ವಚ್ಛಗೊಳಿಸುವ ಪ್ರಧಾನಿ ಮೋದಿಯವರ ಕನಸಿನ ಕೂಸು. ನಾಗರಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟು ಮಾಡುವುದನ್ನು ತಡೆಗಟ್ಟುವ ಪ್ರಮುಖ ಜವಾಬ್ದಾರಿ ನಿರ್ವಹಿಸಲು ರಾಜ್ಯ ಸರ್ಕಾರ ಇಲ್ಲವೇ ಮೈಸೂರು ಮಹಾನಗರ ಪಾಲಿಕೆಯು ಆರ್ಥಿಕ ಸಂಪನ್ಮೂಲ ಹೊಂದಿಸಲು ಸಾಧ್ಯವಾಗದೇ ಇರುವುದು ನಿಜಕ್ಕೂ ನಗೆಪಾಟಲು. ಕೊನೆಗೆ ನಮಗೆ ಕೇಂದ್ರ ಸರ್ಕಾರದ ಹಣವೇ ಬೇಕಾಯಿತು...

ನಾವು ಸಂಪಾದಿಸುವ ಸಂಪತ್ತು ನಮ್ಮ ಬ್ಯಾಂಕಿಗೆ ಹೋಗುತ್ತದೆ. ಹಾಗಾದರೆ, ನಮ್ಮಿಂದ ಉತ್ಪಾದನೆಯಾಗುವ ತ್ಯಾಜ್ಯ ಎಲ್ಲಿಗೆ ಹೋಗುತ್ತದೆ? ಅದು ನಮ್ಮ ನಗರದ ವಿವಿಧ ಭಾಗಗಳ ತ್ಯಾಜ್ಯ ಸಂಗ್ರಹ ಸ್ಥಳಗಳಿಗೆ ಹೋಗುತ್ತದೆ. ಈ ಪೈಕಿ ಮೈಸೂರು ದಕ್ಷಿಣದ ವಿದ್ಯಾರಣ್ಯಪುರಂನ ಸಿವೇಜ್ ಫಾರ್ಮ್ ಅತೀ ದೊಡ್ಡದು. 14 ಎಕರೆಯಷ್ಟು ಅತೀ ವಿಸ್ತೀರ್ಣವನ್ನು ಇದು ಹೊಂದಿದೆ. ಈ ಭಾರಿ ಪ್ರಮಾಣದ ತ್ಯಾಜ್ಯ ರಾಶಿಯು ಇಲ್ಲಿಗೆ ಸಮೀಪದ ಚಾಮುಂಡಿಬೆಟ್ಟದೊಂದಿಗೆ ಸ್ಪರ್ಧಿಸುತ್ತಿರುವ ಹಾಗೆ ಕಾಣುತ್ತದೆ.

ಚಾಮುಂಡಿಬೆಟ್ಟದಷ್ಟು ಹಳೆಯದಲ್ಲವಾದರೂ ಈ ತ್ಯಾಜ್ಯ ರಾಶಿಯು ಕನಿಷ್ಠ 20 ವರ್ಷಗಳಷ್ಟು ಹಳೆಯದಾಗಿದೆ. ಜೊತೆಗೆ ಇದರ ದುರ್ವಾಸನೆಯು ಸುತ್ತಮುತ್ತಲ ಒಂದು ಕಿ.ಮೀ. ವ್ಯಾಪ್ತಿಯ ಪ್ರದೇಶದವರೆಗೆ ಸೂಸುತ್ತಿದೆ. ಭಾರಿ ವೇಗದ ಗಾಳಿ ಇದ್ದರಂತೂ ಇದು ಅದಕ್ಕೂ ಮೀರಿ ಬಹುದೂರದವರೆಗೂ ಹರಡುತ್ತದೆ. ಇದರ ಸುತ್ತಮುತ್ತಲ ನಿವಾಸಿಗಳು ಸಹಿಸಲಾರದಂತಹ ದುರ್ವಾಸನೆಯಿಂದ ಸಮಸ್ಯೆಗೆ ಸಿಲುಕಿದ್ದಾರೆ. ಆದಾಗ್ಯೂ ಇದಕ್ಕೊಂದು ಪರಿಹಾರ ದೊರಕಿಸಿ ಕೊಡಲು ಅಧಿಕಾರಸ್ಥ ವ್ಯವಸ್ಥೆಗೆ ಸಾಧ್ಯವಾಗಲಿಲ್ಲ.

ವಿದ್ಯಾರಣ್ಯಪುರಂನ ಈ ತ್ಯಾಜ್ಯ ರಾಶಿ ಈಗ ಅಸಾಧಾರಣ ಹಾಗೂ ನಿರ್ವಹಿಸಲಾಗದ ಸ್ಥಿತಿ ತಲುಪಿದೆ. ಹೀಗಾಗಿ ಮೈಸೂರು ಮಹಾನಗರ ಪಾಲಿಕೆಯು (ಎಂಸಿಸಿ) ಸುಮಾರು ಒಂದೂವರೆ ತಿಂಗಳ ಹಿಂದೆ ಹೆಚ್.ಡಿ. ಕೋಟೆ ರಸ್ತೆಯಲ್ಲಿ 11 ಎಕರೆ ಹಾಗೂ ಸುಮಾರು 7 ತಿಂಗಳ ಹಿಂದೆ ಮೈಸೂರು ಉತ್ತರ ಭಾಗದ ಕೆಸರೆಯಲ್ಲಿ 11 ಎಕರೆ ಭೂಮಿಯಲ್ಲಿ ತ್ಯಾಜ್ಯ ಸಂಗ್ರಹ ಘಟಕಗಳನ್ನು ಸ್ಥಾಪಿಸಿದೆ.

ಇದೀಗ ಮುಂಗಾರು ಆರಂಭಗೊಳ್ಳುತ್ತಿದ್ದು, ಇಲ್ಲಿ ಕೊಳೆತು ಬಿದ್ದಿರುವ ತ್ಯಾಜ್ಯವು ಸಮಸ್ಯೆಯನ್ನು ಮತ್ತಷ್ಟು ಉಲ್ಬಣಗೊಳಿಸಲಿದೆ. ಜೊತೆಗೆ ತ್ಯಾಜ್ಯದ ಸಂಸ್ಕರಣೆ (Treatment) ಮಾಡಿಲ್ಲದ ಕಾರಣ ಅದರ ದುರ್ವಾಸನೆ ಇನ್ನು ಹೆಚ್ಚು ಹರಡಲಿದೆ.

ಗಾತ್ರ ಮತ್ತು ಎತ್ತರದಲ್ಲಿ ಬೃಹತ್ ಆಗಿ ಬೆಳೆಯುತ್ತಿರುವ ಈ ತ್ಯಾಜ್ಯದ ವಿಲೇವಾರಿ ಮಾಡುವುದೇ ಸಮಸ್ಯೆಗೆ ಇರುವ ಪರಿಹಾರವಾಗಿದೆ. ಬೆಳೆಯುತ್ತಿರುವ ಈ ಕಸದ ಸಮಸ್ಯೆ ಜನರ ಆರೋಗ್ಯದ ಮೇಲೆ ತೀವ್ರ ದುಷ್ಪರಿಣಾಮ ಉಂಟು ಮಾಡುವ ಮೂಲಕ ಮೈಸೂರು ಮಹಾನಗರ ಪಾಲಿಕೆಯನ್ನು ಅಣಕಿಸುತ್ತಿದೆ. ಇಂತಹ ಭಾರಿ ಪ್ರಮಾಣದ ತ್ಯಾಜ್ಯ ಸಮಸ್ಯೆಯನ್ನು ಹತೋಟಿಗೆ ತರುವ ನಿಟ್ಟಿನಲ್ಲಿ ಮೈಸೂರು ಮಹಾನಗರ ಪಾಲಿಕೆಯು ಸರ್ಕಾರದ ಅನುಮೋದನೆಯೊಂದಿಗೆ ಸನ್ನದ್ಧವಾಗಿದೆ.

ಹಾಗಾಗಿ ಪ್ರಧಾನಿ ಮೋದಿಯವರ ಸ್ವಚ್ಛ ಭಾರತ ಅಭಿಯಾನಕ್ಕೆ ಧನ್ಯವಾದ ಹೇಳಲೇಬೇಕು. ಸದರಿ ಘನತ್ಯಾಜ್ಯ ರಾಶಿಯನ್ನು ತೆರವುಗೊಳಿಸಲು ಸಮಗ್ರ ಯೋಜನಾ ವರದಿಯನ್ನು (ಡಿಪಿಆರ್) ಸಿದ್ಧಪಡಿಸಿದೆ. ಅಲ್ಲದೆ, ಭವಿಷ್ಯದಲ್ಲಿ ಘನತ್ಯಾಜ್ಯ ಈ ರೀತಿ ಭಾರಿ ಪ್ರಮಾಣದಲ್ಲಿ ಸಂಗ್ರಹಗೊಳ್ಳುವುದನ್ನು ತಡೆಗಟ್ಟಲು ಮುಂದಾಗಿದೆ.

ಅದರಂತೆ ಮೈಸೂರು ಮಹಾನಗರ ಪಾಲಿಕೆಯು 3.8.2023ರಂದು ಕಾಮಗಾರಿಗಾಗಿ ಟೆಂಡರ್ ಆಹ್ವಾನಿಸುವ ಬಿಡ್‌ಗಳನ್ನು ಸಿದ್ಧಪಡಿಸಿತು. ಇದು 6.8.2023ರಂದು ಪತ್ರಿಕೆಗಳಲ್ಲಿ ಪ್ರಕಟಗೊಂಡಿದೆ. ವೈಜ್ಞಾನಿಕ (ತಾಂತ್ರಿಕ) ಬಿಡ್‌ಗಳನ್ನು 7.12.2023 ರಂದು ತೆರೆಯಲಾಗಿದೆ. ನಂತರ 2.1.2024ರಂದು ಪಾಲಿಕೆಯ ಆಗಿನ ಆಯುಕ್ತ ಆಶಾದ್ ಉರ್ ರೆಹಮಾನ್ ಷರೀಫ್ ಅಧ್ಯಕ್ಷತೆಯಲ್ಲಿ ಸಭೆ ನಡೆಸಲಾಗಿದೆ.

ಸ್ವೀಕರಿಸಿದ ಟೆಂಡರ್‌ಗಳನ್ನು (ಬಿಡ್‌ಗಳು) ಪರಿಶೀಲಿಸಲಾಗಿದೆ. ಬಿಡ್‌ನಲ್ಲಿ ನಾಲ್ಕು ಕಂಪನಿಗಳು ಭಾಗವಹಿಸಿದ್ದವು. ಈ ಪೈಕಿ ಹಾರ್ದಿಕ್ ಭಿಖಾಭಾಯಿ ಖುಂಟ್ (M/s D.H. Patel) ಅವರ ಬಿಡ್‌ಗೆ ಸಹಮತದ ಸಮ್ಮತಿ ನೀಡಿ 'ತಾಂತ್ರಿಕ ಬಿಡ್' ಅನುಮೋದನೆಗೆ ಶಿಫಾರಸ್ಸು ಮಾಡಲಾಗಿದೆ. ಅಂತಿಮವಾಗಿ ಸ್ವಚ್ಛ ಭಾರತ ಅಭಿಯಾನದ **(ನಗರ) ರಾಜ್ಯ ಉನ್ನತಾಧಿಕಾರ ಸಮಿತಿ (ಎಸ್‌ಹೆಚ್‌ಪಿಸಿ) ತಾಂತ್ರಿಕ ಬಿಡ್ ಅನ್ನು ಅನುಮೋದಿಸಿತು.** ಅಲ್ಲದೆ, ಈ ಸಂಬಂಧ ಮುಂದಿನ ಕ್ರಮ ವಹಿಸಲು ಪಾಲಿಕೆ ಆಯುಕ್ತರಿಗೆ ತಿಳಿಸಲಾಗಿದೆ.

ಹೇಳುವುದಾದರೆ, ಏಪ್ರಿಲ್ 2023 ರಿಂದ ಮೇ 2024ರವರೆಗೆ ಈ ಯಶಸ್ವಿನ ಹಂತಕ್ಕೆ ಬರಲು ಒಂದು ವರ್ಷವನ್ನೇ ತೆಗೆದುಕೊಳ್ಳಲಾಯಿತು.

ಎಲ್ಲವೂ ಈವರೆಗೆ ಉತ್ತಮವಾಗಿದೆ. ಆದರೆ ಮೈಸೂರಿಗರಲ್ಲಿ ಉಳಿದಿರುವ ಪ್ರಶ್ನೆಯೆಂದರೆ; ಮುಂದೇನು? ಘನತ್ಯಾಜ್ಯ ನಿರ್ವಹಣಾ ಯೋಜನೆ ಯಾವುದೇ ಅಡೆತಡೆ ಇಲ್ಲದೇ ಕಾರ್ಯರೂಪಕ್ಕೆ ಬರಲಿದೆಯೇ? **ಈಗ ಆಯ್ಕೆ ಮಾಡಿದ ಬಿಡ್ದುದಾರ ಈ ಕೆಲಸಕ್ಕೆ ಯೋಗ್ಯನೇ? ಅಥವಾ ರಾಜಮಾರ್ಗ ಕಾಮಗಾರಿ ಹಾಗೂ ಪುರಭವನದ ಮಲ್ಟಿ ಲೆವೆಲ್ ವಾಹನ ಪಾರ್ಕಿಂಗ್ ಕಾಮಗಾರಿಯ ದಾರಿಯಲ್ಲೇ ಸಾಗಲಿದೆಯೇ? ನಾವು ಈ ಮೊದಲು ಮಾಡಿದ ತಪ್ಪು ನಿರ್ಧಾರಗಳಿಂದ ಪಾಠ ಕಲಿತಂತೆ ತೋರುವುದಿಲ್ಲ. ಅದನ್ನು ಆ ದೇವರೇ ಬಲ್ಲ.**

ಆಗಲೇ ಒಂದು ವಿಘ್ನ ಎದುರಾಗಿದೆ. ಸ್ವಚ್ಛ ಭಾರತ ಅಭಿಯಾನ (ನಗರ) ಬೆಂಗಳೂರಿನ ರಾಜ್ಯ ಅಭಿಯಾನ ನಿರ್ದೇಶಕರು 20.4.2024 ರಂದು ಪಾಲಿಕೆ ಆಯುಕ್ತರಿಗೆ ಪತ್ರ ಬರೆದಿರುವ ಪ್ರಕಾರ, ಸದರಿ ಯೋಜನೆಯ ಟೆಂಡರ್ ಸಂಬಂಧ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ (W.P.No. 9711/2024, GM-TEN) ಸಲ್ಲಿಸಲಾಗಿದೆ. ಬೆಂಗಳೂರಿನ ಜತಿನ್ ಇನ್ಫ್ರಾ ಪ್ರೈ. ಲಿಮಿಟೆಡ್ Vs ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಮತ್ತು ಇತರರ ನಡುವೆ ಹೈಕೋರ್ಟ್‌ನಲ್ಲಿ ವ್ಯಾಜ್ಯ ಹಾಕಲಾಗಿದೆ.

ಅನುಭವದ ಆಧಾರದಲ್ಲಿ ಹೇಳುವುದಾದರೆ, ಇವೆಲ್ಲಾ ನ್ಯಾಯಾಲಯದಲ್ಲಿ ಇತ್ಯರ್ಥಗೊಳ್ಳುವವರೆಗೆ ಸದರಿ ಯೋಜನೆ ಸ್ಥಗಿತಗೊಳ್ಳಲಿದೆ. ಅಲ್ಲಿಯವರೆಗೂ ಮೈಸೂರಿಗರು ದುರ್ವಾಸನೆ ಕುಡಿಯುತ್ತಲೇ ಇರಬೇಕು.

Email:
voice@starofmysore.com

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ

ಬೆಳವಾಡಿ, ಹೂಟಗಳ್ಳಿ ಕಲ್ಯಾಣಿ ಜೀರ್ಣೋದ್ಧಾರ



ಮೈಸೂರು, ಮೇ 31(ಆರ್‌ಕೆ)– ಹೂಟಗಳ್ಳಿ ನಗರಸಭೆಯು ಇನ್‌ಫೋಸಿಸ್, ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್, ಎಂಐಟಿ ಹಾಗೂ ಎಸ್‌ಜೆಸಿಇ ಸಂಯುಕ್ತಾಶ್ರಯದಲ್ಲಿ ಮೈಸೂರಿನ ಹೂಟಗಳ್ಳಿ ಮತ್ತು ಬೆಳವಾಡಿಯಲ್ಲಿರುವ ಕಲ್ಯಾಣಿಗಳನ್ನು ಸ್ವಚ್ಛಗೊಳಿಸಿ, ಜೀರ್ಣೋದ್ಧಾರಗೊಳಿಸಿದೆ.

ಈ ಎರಡೂ ಕಲ್ಯಾಣಿಗಳು ಹೂಳು ತುಂಬಿ, ಗಿಡಗಂಟಿ ಬೆಳೆದು, ಸಂಪೂರ್ಣ ಮುಚ್ಚಿ ಹೋಗಿದ್ದವು. ಪುರಾತನ ಕಲ್ಯಾಣಿಗಳು ಜನ–ಜಾನುವಾರುಗಳಿಗೆ ಪ್ರಮುಖ ಜಲ ಮೂಲವಾಗಿದ್ದವು. ತದನಂತರ ಮನೆ ಮನೆಗೆ ಕುಡಿಯುವ ನೀರು ಪೂರೈಕೆ ಆಗಲಾರಂಬಿಸಿ, ಜನರು ಅತ್ತ ಸುಳಿಯದೇ ಕಲ್ಯಾಣಿಗಳು ನಿರ್ಲಕ್ಷ್ಯಕ್ಕೊಳಗಾಗಿದ್ದವು.

ಒಂದೆಡೆ ಹೂಳು ತುಂಬಿ ನೀರು ನಿಲ್ಲಲು ಸಾಧ್ಯವಾಗಿರಲಿಲ್ಲ. ಮತ್ತೊಂದೆಡೆ ಮಳೆ ನೀರನ್ನು ಒಳ ಚರಂಡಿಗೆ ಬಿಡುತ್ತಿರುವುದರಿಂದ ಕಲ್ಯಾಣಿಗಳು ಜಲಕ್ಷಾಮದಿಂದ ನಲುಗಿದ್ದವು.

ಈ ಪುರಾತನ ಕಲ್ಯಾಣಿಗಳನ್ನು ಪುನರುಜ್ಜೀವನಗೊಳಿಸಲು ಮುಂದಾದ ಹೂಟಗಳ್ಳಿ ನಗರಸಭೆ ಆಯುಕ್ತ ಚಂದ್ರಶೇಖರ್, ಸ್ಥಳ ಪರಿಶೀಲಿಸಿ ಗ್ರಾಮದ ಹಿರಿಯರಿಂದ ಮಾಹಿತಿ ಪಡೆದು ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಗುರುವಾರ ಮತ್ತು ಶುಕ್ರವಾರ ಸ್ವಚ್ಛತಾ ಕಾರ್ಯ ನಡೆಸಿದರು.

ಗಿಡಗಂಟಿ ತೆರವುಗೊಳಿಸಿ, ಹೂಳು ತೆಗೆಸಿ, ಸ್ವಚ್ಛಗೊಳಿಸಿರುವುದರಿಂದ ಈ ಕಲ್ಯಾಣಿಗಳಲ್ಲಿ ಮಳೆ ಬಂದಾಗ ನೀರು ನಿಲ್ಲುವ ವ್ಯವಸ್ಥೆ ಮಾಡಲಾಗಿದೆ. ಹೂಟಗಳ್ಳಿ ಸಿಎಂಸಿ ಅಧಿಕಾರಿಗಳು, ಸಿಬ್ಬಂದಿಗಳೊಂದಿಗೆ ಇನ್‌ಫೋಸಿಸ್, ಎಸ್‌ವಿವೈಎಂ, ಎಂಐಟಿ, ಎಸ್‌ಜೆಸಿಎಂ ವಿದ್ಯಾರ್ಥಿಗಳು ಹಾಗೂ ಪ್ರತಿನಿಧಿಗಳು ಕಲ್ಯಾಣಿ ಪುನರುಜ್ಜೀವನಗೊಳಿಸುವ ಕಾರ್ಯದಲ್ಲಿ ಭಾಗಿಯಾಗಿದ್ದರು.

ಮಳೆ ನೀರನ್ನು ಒಳಚರಂಡಿಗೆ ಬಿಡಬೇಡಿ

ಮೈಸೂರು, ಮೇ 31(ಆರ್‌ಕೆ)–ಮಳೆ ನೀರನ್ನು ಒಳಚರಂಡಿಗೆ ಬಿಡಬೇಡಿ ಎಂದು ಹೂಟಗಳ್ಳಿ ನಗರಸಭೆ ಆಯುಕ್ತ ಚಂದ್ರಶೇಖರ್ ಸಾರ್ವಜನಿಕರಿಗೆ ಸಲಹೆ ನೀಡಿದ್ದಾರೆ.

ಮಳೆ ನೀರು ಹರಿದು ಬರುವ ಸಂಪರ್ಕ ಜಾಲಗಳು ಬಂದ್ ಆಗಿರುವುದರಿಂದ ಕೆರೆ, ಕಲ್ಯಾಣಿಯಲ್ಲಿ ನೀರಿಲ್ಲದೆ ಹೂಳು ತುಂಬಿ, ಗಿಡಗಂಟಿಗಳು ಬೆಳೆಯುತ್ತಿವೆ. ಪರಿಣಾಮ ಜಾನುವಾರು, ಪಕ್ಷಿ ಸಂಕುಲ ಕುಡಿಯುವ ನೀರಿಗೆ ಹಾಹಾಕಾರ ಪಡುವಂತಾಗಿದೆ. ಅಂತರ್ಜಲವೂ ಕುಸಿಯುತ್ತಿದೆ ಎಂದು ತಿಳಿಸಿದರು.

ಮೊದಲೆಲ್ಲಾ ಮನೆಗಳ ಟೆರೇಸ್ ಸೇರಿದಂತೆ ಆವರಣದಲ್ಲಿನ ಮಳೆ ನೀರನ್ನು ಚರಂಡಿಗೆ ಬಿಡುತ್ತಿದ್ದರಿಂದ ಇಂತಹ ನೀರು ಹರಿದು ಕೆರೆ–ಕಟ್ಟೆ, ಹಳ್ಳ, ಕಲ್ಯಾಣಿ ಸೇರುತ್ತಿತ್ತು. ಅಲ್ಲಿನ ಸುತ್ತಮುತ್ತಲಿನ ವಾತಾವರಣ ತಂಪಾಗಿರುತ್ತಿತ್ತಲ್ಲದೆ, ಜಲಚರ, ಪಕ್ಷಿ ಸಂಕುಲಗಳಿಗೆ ವರ್ಷವಿಡೀ ನೀರು ಸಿಗುತ್ತಿತ್ತು. ಆದರೆ ಈಗ ಮನೆಗಳ ಮಳೆ ನೀರನ್ನು ಒಳಚರಂಡಿಗೆ ಸಂಪರ್ಕ ಕಲ್ಪಿಸಿರುವುದರಿಂದ ಜೋರು ಮಳೆ ಬಂದಾಗ ಒಳಚರಂಡಿ ಮ್ಯಾನ್‌ಹೋಲ್ ನೀರು ಉಕ್ಕಿ ರಸ್ತೆಯಲ್ಲಿ ಹರಿಯುತ್ತದೆ. ಅಲ್ಲದೆ, ಕೆರೆ–ಕಟ್ಟೆ, ಕಲ್ಯಾಣಿಗಳಲ್ಲಿ ನೀರು ಸಂಗ್ರಹವಾಗುತ್ತಿಲ್ಲ, ಒಳಚರಂಡಿಗೆ ಕಲ್ಪಿಸಿರುವ ಮಳೆ ನೀರಿನ ಸಂಪರ್ಕವನ್ನು ಕಡಿತಗೊಳಿಸುವಂತೆ ಮನವಿ ಮಾಡಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಜೂ.30ರವರೆಗೆ ಸಾಮಾನ್ಯ ಹೆರಿಗೆ ಉಚಿತ, ಸಿಸೇರಿಯನ್‌ಗೆ ರಿಯಾಯಿತಿ

ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಹೆರಿಗೆ ಆರೈಕೆ ಅಭಿಯಾನ

ಮೈಸೂರು, ಮೇ 31(ಎಂಟಿವೈ)– ಜೆಎಸ್‌ಎಸ್ ಮಹಾ ವಿದ್ಯಾಪೀಠದ 70ನೇ ವರ್ಷಾಚರಣೆ ಹಾಗೂ ವಿಶ್ವ ತಾಯಂದಿರ ದಿನಾಚರಣೆ ಅಂಗವಾಗಿ ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಮೇ 24ರಿಂದ ಜೂ.30ರವರೆಗೆ ಗರ್ಭಿಣಿ ಮತ್ತು ಹೆರಿಗೆ ಆರೈಕೆ ಅಭಿಯಾನ ಹಮ್ಮಿಕೊಳ್ಳಲಾಗಿದ್ದು, ಸಾಮಾನ್ಯ ಹೆರಿಗೆಯನ್ನು ಉಚಿತವಾಗಿಯೂ, ರಿಯಾಯಿತಿ ದರದಲ್ಲಿ ಸಿಸೇರಿಯನ್ ಮಾಡಲಾಗುತ್ತದೆ ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯ ನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ. ಬೆಟಸೂರ ಮಠ ತಿಳಿಸಿದ್ದಾರೆ.

ಮೈಸೂರಿನ ಅಗ್ರಹಾರದಲ್ಲಿರುವ ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇ 24ರಿಂದ ಈ ಅಭಿಯಾನ ಆರಂಭಿಸಲಾಗಿದ್ದು, ಸಾಮಾನ್ಯ ಹೆರಿಗೆ ಸೌಲಭ್ಯ ಉಚಿತ ಹಾಗೂ ರಿಯಾಯಿತಿ ದರದಲ್ಲಿ ಸಿಸೇರಿಯರಿನ್ ಶಸ್ತ್ರಚಿಕಿತ್ಸೆ ಮತ್ತು ಗರ್ಭಿಣಿಯರಿಗೆ ಉಚಿತ ಪ್ರಯಾಣದ ವ್ಯವಸ್ಥೆ ಕಲ್ಪಿಸಲಾಗಿದೆ. ಈ ಅಭಿಯಾನದಲ್ಲಿ ಸಾಮಾನ್ಯ ಹೆರಿಗೆ ಹಾಗೂ ಅಗತ್ಯ ಔಷಧಿಗಳನ್ನು ಉಚಿತವಾಗಿ ನೀಡಲಾಗುತ್ತದೆ. ಅಲ್ಲದೆ, ಸಿಸೇರಿಯನ್‌ಗೆ ಶೇ.40ರಿಂದ 50ರಷ್ಟು ರಿಯಾಯಿತಿ ಇರಲಿದೆ. ಆಸ್ಪತ್ರೆಯಿಂದ 25–30 ಕಿಮೀ ವ್ಯಾಪ್ತಿಯಲ್ಲಿರುವ ಗರ್ಭಿಣಿಯರನ್ನು ಆಂಬ್ಯುಲೆನ್ಸ್‌ನಲ್ಲಿ ಉಚಿತವಾಗಿ ಆಸ್ಪತ್ರೆ ಕರೆತರುವುದಕ್ಕೂ ವ್ಯವಸ್ಥೆ ಮಾಡಲಾಗಿದೆ. ಜೂ.30ರೊಳಗೆ ನೋಂದಣಿ ಆದವರಿಗೂ ಈ ಸೌಲಭ್ಯ ದೊರೆಯಲಿದೆ. ಸಾಮಾನ್ಯ ವಾರ್ಡ್‌ಗೆ ಮಾತ್ರ ಈ ಸೌಲಭ್ಯ ಇರಲಿದೆ ಎಂದು ತಿಳಿಸಿದರು. ಅಭಿಯಾನಕ್ಕಾಗಿ ಈಗಾಗಲೇ 150 ಹಾಸಿಗೆಯುಳ್ಳ ವಾರ್ಡ್ ಮೀಸಲಿಡಲಾಗಿದೆ. 18 ಮಂದಿ ಪ್ರಸೂತಿ ತಜ್ಞ ವೈದ್ಯರು, 24 ಸ್ನಾತಕೋತ್ತರ ವಿದ್ಯಾರ್ಥಿಗಳು ಹಾಗೂ ಅಗತ್ಯಕ್ಕೆ ಅನುಗುಣವಾಗಿ ಶುಶ್ರೂಷಕಿಯರನ್ನು ನೇಮಕ ಮಾಡಲಾಗಿದೆ. ಹೆಚ್ಚುವರಿಯಾಗಿ ಇನ್‌ಕ್ಯೂಬಿಂಗ್ ಸೆಂಟರ್ ತೆರೆಯಲಾಗಿದೆ. ಮೇ 24ರಿಂದ ಮೇ 30ರವರೆಗೆ 53 ಮಂದಿ ಗರ್ಭಿಣಿಯರು ಆಸ್ಪತ್ರೆಗೆ ದಾಖಲಾಗಿದ್ದು, ಅವರಲ್ಲಿ 22 ಮಂದಿಗೆ ಉಚಿತವಾಗಿ ಸಾಮಾನ್ಯ ಹೆರಿಗೆ ಮಾಡಿಸಲಾಗಿದೆ. 30 ಮಂದಿಗೆ ಸಿಸೇರಿಯನ್ ಮೂಲಕ ಹೆರಿಗೆ ಮಾಡಿಸಲಾಗಿದೆ. ಇನ್ನು ಒಬ್ಬರಿಗೆ ಇನ್ನು ಹೆರಿಗೆ ಆಗಿಲ್ಲ. ಅಗತ್ಯ ಬಿದ್ದರೆ ಹೆರಿಗೆ ತಾಯಿ ಮತ್ತು ಬಾಣಂತಿಯರನ್ನು 2–3 ದಿನ ನೋಡಿಕೊಳ್ಳುವುದಕ್ಕೆ ವಾರ್ಡ್ ವ್ಯವಸ್ಥೆ ಮಾಡಲಾಗಿದೆ. ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡುವಾಗ ತಾಯಿಗೆ ಅಗತ್ಯ ವಸ್ತುವುಳ್ಳ ಕಿಟ್‌ವೊಂದನ್ನು ನೀಡಲಾಗುತ್ತದೆ. ಅಲ್ಲದೆ, ಮನೆಗೆ ಬಿಟ್ಟು ಬರುವುದಕ್ಕೂ ಆಂಬ್ಯುಲೆನ್ಸ್ ಕಾಯ್ದಿರಿಸಲಾಗಿದೆ ಎಂದರು. ಈ ಅಭಿಯಾನದ ಸೌಲಭ್ಯವನ್ನು ಮೈಸೂರು ಜಿಲ್ಲೆಯಷ್ಟೇ ಅಲ್ಲದೆ, ಸುತ್ತಮುತ್ತಲಿನ ಜಿಲ್ಲೆಯವರೂ ಪಡೆದುಕೊಳ್ಳಬಹುದಾಗಿದೆ. ಬೇರೆ ಆಸ್ಪತ್ರೆ ಅಥವಾ ವೈದ್ಯರ ಬಳಿ ತಪಾಸಣೆ ಮಾಡಿಸಿಕೊಳ್ಳುತ್ತಿರುವ ಗರ್ಭಿಣಿಯರು ಈ ಅಭಿಯಾನದಲ್ಲಿ ಜೆಎಸ್‌ಎಸ್ ಆಸ್ಪತ್ರೆಗೆ ದಾಖಲಾಗ ಬಹುದಾಗಿದೆ. ಹೆಚ್ಚಿನ ಮಾಹಿತಿಗೆ ದೂ: 82966 73241 ಮತ್ತು 9945433987 ಅನ್ನು ಸಂಪರ್ಕಿಸಬಹುದು. ಅಲ್ಲದೇ ಉಚಿತ ಪ್ರಯಾಣದ ವ್ಯವಸ್ಥೆಗೆ ಮೊ.ಸಂ. 9035533060 ಅಥವಾ 14455 (24X7) ಸಂಪರ್ಕಿಸಬಹುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಜೆಎಸ್‌ಎಸ್ ಉನ್ನತ ಶಿಕ್ಷಣ ಅಕಾಡೆಮಿಯ ಉಪ ಕುಲಪತಿ ಡಾ.ಸುರೀಂದರ್ ಸಿಂಗ್, ಜೆಎಸ್‌ಎಸ್ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಸಿ.ಪಿ.ಮಧು, ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ.ಹೆಚ್. ಬಸವನಗೌಡಪ್ಪ, ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್.ಮಹೇಶ್, ಪ್ರಸೂತಿ ತಜ್ಞೆ ಡಾ. ಮಮತಾ ಇದ್ದರು.



ಮೈಸೂರಿನ ಅಗ್ರಹಾರದಲ್ಲಿರುವ ಜೆಎಸ್‌ಎಸ್ ಆಸ್ಪತ್ರೆಯ ಆವರಣದಲ್ಲಿ 'ಉಚಿತ ಸಾಮಾನ್ಯ ಹೆರಿಗೆ' ಅಭಿಯಾನದಡಿ ಹೆರಿಗೆ ಆಗಿ ಮನೆಗೆ ಮರಳುವ ತಾಯಂದಿರಿಗೆ ಆಸ್ಪತ್ರೆ ವತಿಯಿಂದ ಉಡುಗೊರೆ ನೀಡಿ ಬೀಳ್ಕೊಡಲಾಯಿತು.

ಮಾರಿಷಸ್‌ನಲ್ಲಿ ಜೆಎಸ್‌ಎಸ್ ಮೆಡಿಕಲ್ ಕಾಲೇಜಿಗೆ ಪ್ರಕ್ರಿಯೆ ಆರಂಭ

ಮೈಸೂರು, ಮೇ 31(ಎಂಟಿವೈ)–ದ್ವೀಪ ರಾಷ್ಟ್ರ ಮಾರಿಷಸ್‌ನಲ್ಲಿ ಜೆಎಸ್‌ಎಸ್ ಸಂಸ್ಥೆಯ ವತಿಯಿಂದ ಮೆಡಿಕಲ್ ಕಾಲೇಜು ಸ್ಥಾಪನೆ ಮಾಡುವ ನಿಟ್ಟಿನಲ್ಲಿ ಪ್ರಕ್ರಿಯೆಗಳು ಪ್ರಾರಂಭವಾಗಿವೆ ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ ತಿಳಿಸಿದ್ದಾರೆ.

ಈಗಾಗಲೇ ಮಾರಿಷಸ್‌ನಲ್ಲಿ ತಾಂತ್ರಿಕ ಕಾಲೇಜು ನಡೆಯುತ್ತಿದೆ. ಅಲ್ಲಿ ಈಗ ವಿಶ್ವವಿದ್ಯಾನಿಲಯದ ಮಾನ್ಯತೆ ದೊರಕಿದೆ. ಇನ್ನು ಮುಂದೆ ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದಲೇ ಪದವಿ ಪ್ರಮಾಣ ಪತ್ರವನ್ನು ನೀಡಬಹುದಾಗಿದೆ. ಈ ನಿಟ್ಟಿನಲ್ಲಿ ಮುಂದುವರೆದು ವೈದ್ಯಕೀಯ ಕಾಲೇಜು ಸ್ಥಾಪನೆ ಮಾಡಲಾಗುತ್ತಿದೆ ಎಂದು ತಿಳಿಸಿದರು. ಉತ್ತರ ಪ್ರದೇಶದ ನೋಯಿಡಾದಲ್ಲಿ ದಶಕಗಳಿಂದ ತಾಂತ್ರಿಕ ಕಾಲೇಜು ಕಾರ್ಯನಿರ್ವಹಿಸುತ್ತಿದೆ. ಅಲ್ಲಿಯೂ ವಿಶ್ವವಿದ್ಯಾನಿಲಯ ಸ್ಥಾಪನೆಗೆ ಸರ್ಕಾರದ ಮಟ್ಟದಲ್ಲಿ ಅನುಮತಿ ಸಿಕ್ಕಿದೆ. ಇದಲ್ಲದೇ ಜಮ್ಮುವಿನಲ್ಲೂ ಕೂಡಾ ಫಾರ್ಮಸಿ ಕಾಲೇಜು ಸ್ಥಾಪನೆ ಮಾಡಲಾಗಿದ್ದು, ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ನಾಲ್ಕು ವಿವಿಗಳು ಕಾರ್ಯನಿರ್ವಹಿಸಿದಂತೆ ಆಗುತ್ತದೆ. 1954ರಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠವನ್ನು ಪ್ರಾರಂಭಿಸಲಾಯಿತು. ಪ್ರಸ್ತುತ 370 ಸಂಸ್ಥೆಗಳು ಇವೆ ಒಂದು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಓದುತ್ತಿದ್ದಾರೆ. 20 ಸಾವಿರಕ್ಕೂ ಹೆಚ್ಚು ನೌಕರರು ಇದ್ದಾರೆ ಎಂದು ತಿಳಿಸಿದರು.

ಸಚಿವ ನಾಗೇಂದ್ರ ರಾಜೀನಾಮೆಗೆ ಸಿಎಂ ಸಿದ್ದರಾಮಯ್ಯ ಸೂಚನೆ?



ಬೆಂಗಳೂರು, ಮೇ 31– ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಮೊದಲ ವಿಕೆಟ್ ಪತನಕ್ಕೆ ಕ್ಷಣಗಣನೆ ಶುರುವಾಗಿದೆ. ವಾಲ್ಮೀಕಿ ನಿಗಮದ ಅಧಿಕಾರಿ ಪಿ.ಚಂದ್ರಶೇಖರ್ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಚಿವ ಬಿ. ನಾಗೇಂದ್ರ ರಾಜೀನಾಮೆ ನೀಡಬೇಕು ಎಂದು ಖುದ್ದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ ಎಂದು ತಿಳಿದುಬಂದಿದೆ.

ಈ ವಿಚಾರದಲ್ಲಿ ಸರ್ಕಾರಕ್ಕೆ ಮುಖಭಂಗವಾಗಬಾರದೆಂದು ಸಚಿವ ಬಿ.ನಾಗೇಂದ್ರ ರಾಜೀನಾಮೆ ನೀಡಬೇಕು ಎಂದು ಸಿಎಂ ಸಿದ್ದರಾಮಯ್ಯ ಅವರೇ ಸೂಚನೆ ನೀಡಿದ್ದಾರೆ. ತನಿಖೆ ಬಳಿಕ ಮತ್ತೆ ಸಚಿವರನ್ನು ಸಂಪುಟಕ್ಕೆ ಸೇರ್ಪಡೆ ಮಾಡಿಕೊಳ್ಳುವ ಬಗ್ಗೆ ಸರ್ಕಾರ ಚಿಂತನೆ ನಡೆಸಿದೆ. ಹಾಗೂ ಈ ಪ್ರಕರಣವನ್ನು ಸಿಬಿಐಗೆ ನೀಡುವ ಸಾಧ್ಯತೆಯಿದೆ ಎಂದು ವರದಿಗಳು ತಿಳಿಸಿವೆ.

ವಿಧಾನ ಪರಿಷತ್ ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆ ವಿಚಾರವಾಗಿ ದೆಹಲಿಗೆ ತೆರಳಿದ್ದ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆ ಶಿವಕುಮಾರ್ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಜೊತೆ ಈ ಬಗ್ಗೆ ಚರ್ಚೆ ನಡೆಸಿದ್ದಾರೆ. ಅಧಿಕಾರಿಯ ಆತ್ಮಹತ್ಯೆ ಹಾಗೂ ಸಂಭವನೀಯ ಪರಿಣಾಮಗಳ ಬಗ್ಗೆ ಮಾತುಕತೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಸರ್ಕಾರಕ್ಕೆ ಮುಖಭಂಗವಾಬಾರದು ಹೀಗಾಗಿ ಬಿ.ನಾಗೇಂದ್ರ ರಾಜೀನಾಮೆ ನೀಡುವುದು ಒಳಿತು ಎಂಬ ನಿರ್ಧಾರಕ್ಕೆ ಬಂದಿದ್ದಾರೆ.

ಯೂನಿಟ್ ಮಾಲ್ ನಿರ್ಮಾಣ ಕಾರ್ಯ ಸದ್ಯವೆ ಆರಂಭ

ಮೈಸೂರು, ಮೇ 31(ಎಂಕೆ)– ಮೈಸೂರು ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಯೂನಿಟಿ ಮಾಲ್ ನಿರ್ಮಾಣ ಕುರಿತು ಪ್ರವಾಸೋದ್ಯಮ ಇಲಾಖೆ ಅಧಿಕಾರಿಗಳೊಂದಿಗೆ ಚರ್ಚಿಸಿದ್ದು, ಸದ್ಯದಲ್ಲಿಯೇ ನಿರ್ಮಾಣ ಕಾರ್ಯ ಆರಂಭವಾಗಲಿದೆ ಎಂದು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ತಿಳಿಸಿದ್ದಾರೆ.



ಪ್ರವಾಸೋದ್ಯಮ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸಲ್ಮಾ ಅವರೊಂದಿಗೆ ಸಭೆ ನಡೆಸಲಾಗಿದೆ ಸರ್ಕಾರದ ಸಹಕಾರದೊಂದಿಗೆ ಮೈಸೂರು ದಸರಾ ವಸ್ತುಪ್ರದರ್ಶನ ಆವರಣದ ಅಭಿವೃದ್ಧಿ ಹಾಗೂ ಯೂನಿಟಿ ಮಾಲ್ ನಿರ್ಮಾಣಕ್ಕೆ ಕೈಗಾರಿಕಾ ಇಲಾಖೆಗೆ ಈಗಾಗಲೇ ಹಣ ಬಿಡುಗಡೆ ಯಾಗಿದ್ದು, ನಿರ್ಮಾಣ ಕಾರ್ಯ ಆರಂಭಿಸುವ ಕುರಿತು ಚರ್ಚಿಸಲಾಗಿದೆ ಎಂದು 'ಮೈಸೂರು ಮಿತ್ರ'ನಿಗೆ ತಿಳಿಸಿದರು. ಹಾಗೆಯೇ ಮೈಸೂರಿಗೆ ಪ್ರವಾಸಿಗರನ್ನು ಆಕರ್ಷಿಸುವ ನಿಟ್ಟಿನಲ್ಲಿ ವಸ್ತುಪ್ರದರ್ಶನ ಆವರಣದ ಅಭಿವೃದ್ಧಿ, ಕಾರ್ಯಕ್ರಮಗಳ ಆಯೋಜನೆ ಹಾಗೂ ಮುಂದಿನ ಕಾರ್ಯಕ್ರಮಗಳ ರೂಪುರೇಷೆ ಕುರಿತು ಚರ್ಚಿಸಲಾಗಿದೆ ಎಂದರು. ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಸಿಇಓ ರಾಜೇಶ್ ಜಿ.ಗೌಡ ಉಪಸ್ಥಿತರಿದ್ದರು.

ಡಾ.ಬಸವರಾಜು ನಿವೃತ್ತಿ



ಮೈಸೂರು, ಮೇ 31– ಮೈಸೂರು ವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಸಂಸ್ಥೆಯ ಜನರಲ್ ಮೆಡಿಸಿನ್ ವಿಭಾಗದ ಮುಖ್ಯಸ್ಥ ಡಾ.ಎಂ.ಎಂ.ಬಸವರಾಜು ಅವರು ಶುಕ್ರವಾರ ಸೇವೆಯಿಂದ ನಿವೃತ್ತರಾದರು. ಪಿರಿಯಾಪಟ್ಟಣ ತಾಲೂಕು, ಕಿತ್ತೂರು ಹೋಬಳಿ, ಮೇಲೂರು ಗ್ರಾಮದವರಾದ ಇವರು, ಪ್ರಾಮಾಣಿಕ ಸೇವೆಯ ಮೂಲಕ ಜನಪ್ರಿಯರಾಗಿದ್ದರು. ರೋಗಿಗಳಿಗೆ ಔಷಧಿ ಜೊತೆಗೆ ಮನೋಸ್ಥೈರ್ಯ ತುಂಬಿ ಗುಣಪಡಿಸುವ ಮಾದರಿ ವೈದ್ಯರಿವರು.



ಮೈಸೂರು ಮಿತ್ರ ಶನಿವಾರ 1 ಜೂನ್ 2024

ಪಾಂಡವಪುರದ ಆರೋಗ್ಯ ಇಲಾಖೆಯ ವಸತಿ ಗೃಹದಲ್ಲಿ ಹೆಣ್ಣು ಭ್ರೂಣ ಹತ್ಯೆ

ಗರ್ಭಪಾತ ಮಾಡಿಸಿಕೊಂಡಿದ್ದ ಮಹಿಳೆಗೆ ತೀವ್ರ ರಕ್ತಸ್ರಾವ; ಅಸ್ವಸ್ಥ

ಬಂಧಿತ 9 ಆರೋಪಿಗಳ ಜಾಮೀನು ಅರ್ಜಿ ವಜಾ

ಪಾಂಡವಪುರ, ಮೇ 31– ತಾಲೂಕಿನ ಆರೋಗ್ಯ ಇಲಾಖೆಯ ವಸತಿಗೃಹದಲ್ಲಿ ನಡೆದಿರುವ ಹೆಣ್ಣು ಭ್ರೂಣ ಹತ್ಯೆ ಪ್ರಕರಣವನ್ನು ಬಗೆದಷ್ಟು ಹೊಸ ಹೊಸ ವಿಚಾರಗಳು ಬೆಳಕಿಗೆ ಬರುತ್ತಿದೆ. ತಿಂಗಳ ಹಿಂದೆ ಗರ್ಭಪಾತ(ಭ್ರೂಣಹತ್ಯೆ) ಮಾಡಿಸಿಕೊಂಡಿದ್ದ ಮಹಿಳೆಗೆ ಇದೀಗ ರಕ್ತಸ್ರಾವವಾಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಮತ್ತೊಂದೆಡೆ ಹೆಣ್ಣು ಭ್ರೂಣಹತ್ಯೆ ಪ್ರಕರಣದಲ್ಲಿ ಬಂಧಿತರಾಗಿರುವ 9 ಆರೋಪಿಗಳ ಜಮೀನು ಅರ್ಜಿಯನ್ನು ಕೋರ್ಟ್ ತಿರಸ್ಕರಿಸಿದೆ.

ಪಾಂಡವಪುರದಲ್ಲಿಯೇ ನೂರಾರು ಮಹಿಳೆಯರು ಗರ್ಭಪಾತ ಮಾಡಿಸಿಕೊಂಡಿರುವ ಶಂಕೆ ವ್ಯಕ್ತವಾಗಿದೆ. ಪ್ರಕರಣ ಬಹಳ ದೊಡ್ಡದಾಗಿರುವುದರಿಂದ ಕೃತ್ಯದಲ್ಲಿ ಅಧಿಕಾರಿಗಳು ಭಾಗಿಯಾಗಿದ್ದಾರ? ಎನ್ನುವ ಅನುಮಾನಗಳು ಮೂಡಿವೆ. ಪಾಂಡವಪುರದಲ್ಲಿಯೇ ಗರ್ಭಪಾತ ಮಾಡಿಸಿಕೊಂಡಿದ್ದ ಕೆ.ಆರ್.ನಗರ ಮಹಿಳೆಯೊಬ್ಬರು ಮೂರು ತಿಂಗಳ ಹಿಂದೆಯೇ ರಕ್ತಸ್ರಾವ ಉಂಟಾಗಿ ಸಾವನ್ನಪ್ಪಿದ್ದಾರೆ ಎನ್ನುವ ಪ್ರಕರಣ ಇದೀಗ ಬೆಳಕಿಗೆ ಬಂದಿದೆ.



ಭ್ರೂಣಹತ್ಯೆ ನಡೆಯುತ್ತಿದ್ದ ಪಾಂಡವಪುರದ ಆರೋಗ್ಯ ಇಲಾಖೆಯ ವಸತಿ ಗೃಹ.

ಜೊತೆಗೆ ಗರ್ಭಪಾತ ಮಾಡಿಸಿಕೊಂಡು ಹಲವಾರು ಮಹಿಳೆಯರು ಪಾಂಡವಪುರ ಆಸ್ಪತ್ರೆಯಲ್ಲಿಯೇ ಚಿಕಿತ್ಸೆ ಪಡೆದು ಹೋಗಿರುವ ಸಾಧ್ಯತೆಗಳಿವೆ, ಭ್ರೂಣಹತ್ಯೆ ಪ್ರಕರಣ ಇತ್ತೀಚೆಗೆ ಬೆಳಕಿಗೆ ಬಂದ ಹಿನ್ನೆಲೆಯಲ್ಲಿ ಇದೀಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಮಹಿಳೆಯರ ಬಗ್ಗೆ ಮಾಹಿತಿಗಳು ಒಂದೊಂದಾಗಿಯೇ ಹೊರಬರುತ್ತಿವೆ. ಅಲ್ಲದೆ ಭ್ರೂಣ ಹತ್ಯೆ ಮಾಡಿಸಿಕೊಂಡ ಮಹಿಳೆಯರು ಮೈಸೂರು, ಮಂಡ್ಯದಲ್ಲೂ ಚಿಕಿತ್ಸೆ ಪಡೆದಿರುವ ಸಾಧ್ಯತೆಗಳು ಹೆಚ್ಚಾಗಿವೆ.

ಹೆಣ್ಣುಭ್ರೂಣ ಹತ್ಯೆ ಮಾಡುವಂತಹ ಸಂದರ್ಭದಲ್ಲಿ ಮಹಿಳೆಯರಿಗೆ ಸೂಕ್ತವಾದ ಚಿಕಿತ್ಸೆ ಹಾಗೂ ಮುಂಜಾಗ್ರತ ಕ್ರಮಗಳು ಇಲ್ಲದೆ ಚಿಕಿತ್ಸೆಗೆ ಒಳಪಡಿಸಿರುವುದರಿಂದಲೇ ಮಹಿಳೆಯರಿಗೆ ಇದೀಗ ರಕ್ತಸ್ರಾವದಂತಹ ಸಮಸ್ಯೆಗಳು ಉಂಟಾಗಿ ಸಾವು–ನೋವುಗಳು ಸಂಭವಿಸುತ್ತಿವೆ ಎನ್ನಲಾಗಿದೆ.

ಆರೋಪಿಗಳ ಜಾಮೀನು ಅರ್ಜಿ ವಜಾ: ಪಾಂಡವಪುರ ಪಟ್ಟಣದ ಆರೋಗ್ಯ ಇಲಾಖೆಯ ವಸತಿ ಗೃಹದಲ್ಲಿ ನಡೆಯುತ್ತಿದ್ದ ಹೆಣ್ಣು ಭ್ರೂಣಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಬಂಧಿಸಿರುವ 9 ಆರೋಪಿಗಳು ಹಾಗೂ ತಲೆ ಮರೆಸಿಕೊಂಡಿರುವ ಮೂವರು ಆರೋಪಿಗಳ ಜಾಮೀನು ಅರ್ಜಿ ಸಲ್ಲಿಸಿದ್ದು. ಈ ಪೈಕಿ 9 ಆರೋಪಿಗಳ ಅರ್ಜಿಯ ಜಾಮೀನು ನ್ಯಾಯಾಲಯ ವಜಾಗೊಳಿಸಿದೆ.

ಪಾಂಡವಪುರ ವಸತಿ ಗೃಹದಲ್ಲಿ ನಡೆಯುತ್ತಿದ್ದ ಹೆಣ್ಣು ಭ್ರೂಣಹತ್ಯೆ ಪ್ರಕರಣದ ತನಿಖೆ ಚುರುಗೊಳಿಸಿದ್ದ ಪಾಂಡವಪುರ ಪೊಲೀಸರು ಪ್ರಕರಣದ ಆರೋಪಿಗಳಾದ ಸಿ.ಜಿ.ಗಿರಿಜಾಂಭ, ಅಶ್ವಿನಿ, ಎಸ್.ನವೀನ್ ಕುಮಾರ್, ಎಂ.ಎಸ್.ಕಿರಣ್, ಎಚ್.ಪಿ.ಅಖಿಲಾಸ್, ಶೃತಿ, ಸತ್ಯಮ್ಮ, ಕುಮಾರ್ ಹಾಗೂ ಎಂ.ಆನಂದ್ ಅವರನ್ನು ವಶಕ್ಕೆ ಪಡೆದು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದರು. ಪ್ರಮುಖ ಆರೋಪಿಗಳಾದ ಶಿವಲಿಂಗನಾಯ್ಕ, ಸಿದ್ದೇಶ್ ಹಾಗೂ ಅಭಿಷೇಕ್ ಗೌಡ ತಲೆ ಮರೆಸಿಕೊಂಡಿದ್ದಾರೆ.

ಕೆ.ಆರ್.ಪೇಟೆ ಉದ್ಯಮಿ ಪುತ್ರ ಸಾಗರ್ ನೌಕಾಪಡೆಯ ಲೆಫ್ಟಿನೆಂಟ್

ಏಕೈಕ ಪುತ್ರನ ದೇಶ ರಕ್ಷಣೆಗೆ ಅರ್ಪಿಸಿದ ದೇಶಭಕ್ತ ದಂಪತಿ

ಕೆ.ಆರ್.ಪೇಟೆ ಮೇ 31– ತಾಲೂಕಿನ ಬೂಕನಕೆರೆ ಹೋಬಳಿಯ ಬೂಕಹಳ್ಳಿ ಗ್ರಾಮದ ಉದ್ಯಮಿಗಳು ಹಾಗೂ ತಾಲೂಕು ಬಿಜೆಪಿ ನಿಕಟಪೂರ್ವ ಅಧ್ಯಕ್ಷ ಬಿ.ಸಿ.ಮಂಜು ಅವರ ಪುತ್ರ ಬಿ.ಎಂ.ಸಾಗರ್ ಭಾರತೀಯ ಸೇನೆ ನೌಕಾಪಡೆಯಲ್ಲಿ ಲೆಫ್ಟಿನೆಂಟ್ ಅಧಿಕಾರಿಯಾಗಿ ಆಯ್ಕೆಯಾಗುವ ಮೂಲಕ ತಾಲೂಕಿನ ಗೌರವವನ್ನು ಹೆಚ್ಚಿಸಿದ್ದಾರೆ.

ತಮಗಿರುವ ಏಕೈಕ ಪುತ್ರ ಸಾಗರ್ ಸಾವಿರಾರು ಮಂದಿಗೆ ಉದ್ಯೋಗ ನೀಡಿರುವ ತಮ್ಮ ಪ್ರೇಮ ಎಲೆಕ್ಟ್ರಿಕಲ್ಸ್ ಇಂಡಸ್ಟ್ರೀಸ್ ವ್ಯವಹಾರವನ್ನು ನೋಡಿಕೊಂಡು ಹೋದರೆ ಸಾಕು ಎಂಬ ಆಶಯವನ್ನು ತಂದೆ–ತಾಯಿಗಳು ಹೊಂದಿದ್ದರು. ಆದರೆ ಮಗ ಬಿ.ಎಂ.ಸಾಗರ್ ಭಾರತೀಯ ಸೇನೆಗೆ ಸೇರಿ ದೇಶ ಸೇವೆ ಮಾಡುವ ಆಸೆಯನ್ನು ಹೊರಹಾಕಿದಾಗ ತಂದೆ ಬಿ.ಸಿ.ಮಂಜು, ತಾಯಿ ಚಂದ್ರಕಲಾ ಮಂಜು ಅವರು ಮಗ ಸಾಗರ್ ಆಸೆಗೆ ಅಡ್ಡಿಪಡಿಸದೇ ಅವನ ಇಚ್ಛೆಯಂತೆ ಭಾರತೀಯ ಸೇನೆಯ ಒಂದು ಭಾಗವಾಗಿರುವ ನೌಕಾಪಡೆಯಲ್ಲಿ ಲೆಫ್ಟಿನೆಂಟ್ ಅಧಿಕಾರಿಯಾಗಿ ಸೇವೆ ಸಲ್ಲಿಸಲು ಅವಕಾಶ ಮಾಡಿಕೊಟ್ಟಿದ್ದಾರೆ. ಈ ಮೂಲಕ ತಂದೆ–ತಾಯಿಗಳಿಗೆ, ಹುಟ್ಟೂರಿಗೆ ಹಾಗೂ ತಾಲೂಕಿಗೆ ಕೀರ್ತಿ ತಂದಿದ್ದಾರೆ.

ತಾಲೂಕಿಗೆ ಪ್ರಪ್ರಥಮ ಲೆಫ್ಟಿನೆಂಟ್ ಅಧಿಕಾರಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಬಿ.ಎಂ.ಸಾಗರ್ ಅವರು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಮೈಸೂರಿನ ಸೇಂಟ್ ಜೋಸೆಫ್ ಶಾಲೆಯಲ್ಲಿ ಮಾಡಿದರು. ಪದವಿ ಪೂರ್ವ ಶಿಕ್ಷಣವನ್ನು ಮಹೇಶ್ ಪಿ.ಯು ಕಾಲೇಜಿನಲ್ಲಿ ಹಾಗೂ ಇಂಜಿನಿಯರಿಂಗ್ ಶಿಕ್ಷಣವನ್ನು (ಸಿವಿಲ್) ಮೈಸೂರಿನ ವಿದ್ಯಾವರ್ಧಕ ಕಾಲೇಜಿನಲ್ಲಿ ಪೂರೈಸಿರುತ್ತಾರೆ. ತಾಲೂಕಿನ ಬೂಕಹಳ್ಳಿ ಗ್ರಾಮದ ಚಂದ್ರಪ್ಪ ಅವರ ಮೊಮ್ಮಗ ಆಗಿರುವ ಬಿ.ಎಂ.ಸಾಗರ್ ಅವರಿಗೆ ತಾತನೇ ಸ್ಫೂರ್ತಿಯಾಗಿದ್ದಾರೆ. ಇವರಿಗೆ ಭಾರತೀಯ ಸೇನೆಗೆ ಸೇರುವ ಇಚ್ಛೆ ಇತ್ತಂತೆ. ಆದರೆ ಅದು ಸಾಧ್ಯವಾಗಿರಲಿಲ್ಲವಂತೆ. ಚಂದ್ರಪ್ಪ ಅವರು ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ, ಮಂಡಲ ಪಂಚಾಯಿತಿ ಪ್ರಧಾನರಾಗಿ,



ನೌಕಾಪಡೆಯಲ್ಲಿ ಲೆಫ್ಟಿನೆಂಟ್ ಅಧಿಕಾರಿಯಾಗಿ ಆಯ್ಕೆಯಾದ ಸಂದರ್ಭದಲ್ಲಿ ಬೂಕಹಳ್ಳಿ ಬಿ.ಎಂ.ಸಾಗರ್ ಅವರು ತನ್ನ ತಂದೆ ಬಿ.ಸಿ.ಮಂಜು ಹಾಗೂ ತಾಯಿ ಚಂದ್ರಕಲಾ ಅವರೊಂದಿಗೆ.

ಪಿ.ಎಲ್.ಡಿ ಬ್ಯಾಂಕ್ ನಿರ್ದೇಶಕರಾಗಿ ರಾಜಕೀಯ ಸೇವೆ ಸಲ್ಲಿಸಿದ್ದು ಮೊಮ್ಮಗ ಬಿ.ಎಂ.ಸಾಗರ್ ಭಾರತೀಯ ಸೇನೆಗೆ ಸೇರುವ ವ್ಯಕ್ತಪಡಿಸಿದಾಗ ಬಹಳ ಹೆಮ್ಮೆಯಿಂದ ಹಾಗೂ ಸಂತೋಷದಿಂದ ಒಪ್ಪಿಗೆ ಸೂಚಿಸಿದರು ಎಂದು ಲೆಫ್ಟಿನೆಂಟ್ ಅಧಿಕಾರಿಯಾಗಿ ಆಯ್ಕೆಯಾದ ಬಳಿಕ ಪತ್ರಕರ್ತರಿಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದರು.

ಶ್ರೀರಂಗಪಟ್ಟಣದಲ್ಲಿ ಶಾಲೆಗಳು ಆರಂಭ



ಶ್ರೀರಂಗಪಟ್ಟಣ, ಮೇ 31– ಬೇಸಿಗೆ ರಜೆ ಮುಗಿದಿದ್ದು, ಶ್ರೀರಂಗಪಟ್ಟಣ ಸೇರಿದಂತೆ ರಾಜ್ಯದ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು ಶುಕ್ರವಾರದಿಂದ ಪ್ರಾರಂಭವಾಗಿವೆ.

ಕಳೆದ 2 ತಿಂಗಳಿಂದ ಬೇಸಿಗೆ ರಜೆಯಿಂದ ಬಂದ್ ಆಗಿದ್ದ ಶಾಲೆಗಳಿಗೆ ಮಕ್ಕಳು ಸಂಭ್ರಮದಿಂದ ಹಾಜರಾದರು. ಹಲವು ಖಾಸಗಿ ಶಾಲೆಗಳು ಈಗಾಗಲೇ ತರಗತಿಗಳನ್ನು ಆರಂಭಿಸಿದ್ದು, ಸರ್ಕಾರಿ ಶಾಲೆಗಳು ಬುಧವಾರದಿಂದ ಅಧಿಕೃತವಾಗಿ ಪುನರಾರಂಭಗೊಂಡಿದೆ. ರಜಾ ಮುಗಿಸಿಕೊಂಡು ವಾಪಸ್ ಆಗಿರುವ ಚಿಣ್ಣರಿಗೆ, ಶಾಲಾ ಪ್ರಾರಂಭೋತ್ಸವದ ಮೂಲಕ ಸಿಹಿ ನೀಡಿ ಶಿಕ್ಷಕರು ಬರಮಾಡಿಕೊಂಡರು. ಶಾಲೆಗಳಲ್ಲಿ ಪ್ರತಿಯೊಂದು ತರಗತಿ ಕೊಠಡಿ, ಹೊರಾಂಗಣ, ಬಿಸಿಯೂಟ ಕೊಠಡಿ, ಆಟದ ಮೈದಾನ, ಕಾಂಪೌಂಡ್ ಸೇರಿದಂತೆ ಶಾಲೆ ಸ್ವಚ್ಛಗೊಳಿಸಲಾಗಿತ್ತು ತಳಿರು ತೋರಣ, ರಂಗೋಲೆ ಬಿಡಿಸಿ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಮುಖ್ಯಶಿಕ್ಷಕರುಗಳಿಗೆ ಶಿಕ್ಷಣ ಇಲಾಖೆ ಸೂಚಿಸಿತ್ತು ಮಕ್ಕಳು ಶಾಲೆಗೆ ಬರುತ್ತಿದ್ದಂತೆ ಅವರಿಗೆ ಹೂವು, ಚಾಕೊಲೇಟ್ ಸೇರಿದಂತೆ ಯಾವುದಾದರೂ ಸಿಹಿ ನೀಡಿ ಸ್ವಾಗತಿಸುವಂತೆ ಸಲಹೆ ನೀಡಲಾಗಿತ್ತು.

ಮನೆ ಬಾಗಿಲು ಮುರಿದು ಚಿನ್ನ–ಬೆಳ್ಳಿ ಆಭರಣ ಕಳವು

ಹಲಗೂರು: ಹಲಗೂರಿನ ಜೆಪಿಎಂ ಬಡಾವಣೆಯ ನಿವಾಸಿ ಚಂದನ್ ಮನೆಯ ಹಿಂಬದಿಯ ಬಾಗಿಲು ಮುರಿದು ಚಿನ್ನ–ಬೆಳ್ಳಿ ಕಳವು ಮಾಡಿರುವ ಘಟನೆ ಜರುಗಿದೆ.

ಮಳವಳ್ಳಿ ತಾಲೂಕಿನ ಹಲಗೂರು ಪಟ್ಟಣದ ಜೆಪಿಎಂ ಬಡಾವಣೆಯ ಬಿ.ಎಸ್.ಚಂದನ್ ಬಿನ್ ಸುಬ್ರಹ್ಮಣ್ಯ ಅವರ ಮನೆಯಲ್ಲಿ ಗುರುವಾರ ರಾತ್ರಿ 8 ಗಂಟೆಯ ವೇಳೆ ಯಾರು ಇಲ್ಲದ ಸಮಯದಲ್ಲಿ ಬಾಗಿಲು ಮುರಿದು ನುಗ್ಗಿರುವ ಕಳ್ಳರು 30 ಗ್ರಾಂ ಚಿನ್ನ ನೆಕ್ಲೆಸ್, 10 ಗ್ರಾಂ ಚಿನ್ನದ ಕುತ್ತಿಗೆ ಸರ ಮತ್ತು 700 ಗ್ರಾಂನ ಎರಡು ಬೆಳ್ಳಿ ತಟ್ಟೆಗಳನ್ನು ಕದ್ದು ಪರಾರಿಯಾಗಿದ್ದಾರೆ.

ಶ್ವಾನದಳ ಹಾಗೂ ಬೆರಳಚ್ಚು ತಜ್ಞರು ಸ್ಥಳಕ್ಕೆ ಭೇಟಿ ನೀಡಿದ್ದರು. ಸ್ಥಳಕ್ಕೆ ಮಂಡ್ಯ ಜಿಲ್ಲಾ ಎ.ಎಸ್.ಪಿ.ಗಂಗಾಧರಸ್ವಾಮಿ, ಮಳವಳ್ಳಿ ಡಿವೈಎಸ್‌ಪಿ ಕೃಷ್ಣಪ್ಪ, ಹಲಗೂರು ಪಿಎಸ್‌ಐ ಮಹೇಂದ್ರ ಭೇಟಿ ನೀಡಿ ಪರಿಶೀಲನೆ ಮಾಡಿದ್ದಾರೆ. ಹಲಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ವಿಸಿ ನಾಲೆಯ ಆಧುನೀಕರಣ ಕಾಮಗಾರಿ ಕಳಪೆ

ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಪ್ರತಿಭಟಿಸಿದ ರೈತರು

ಪಾಂಡವಪುರ, ಮೇ 31– ತಾಲೂಕಿನಲ್ಲಿ ನಡೆಯುತ್ತಿರುವ ವಿಸಿ ನಾಲೆಯ ಆಧುನೀಕರಣ ಕಾಮಗಾರಿಯನ್ನು ಮಂಡ್ಯ, ಮದ್ದೂರು, ಮಳವಳ್ಳಿ ಹಾಗೂ ಶ್ರೀರಂಗಪಟ್ಟಣ ತಾಲೂಕಿನ ಮೂಲ ರೈತ ಸಂಘ ಕಾರ್ಯಕರ್ತರು ಸ್ಥಳಕ್ಕೆ ಭೇಟಿ ನೀಡಿ ವೀಕ್ಷಿಸಿ ಪ್ರತಿಭಟಿಸಿದರು.

ರೈತಸಂಘ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಂಜೇಶ್ ಗೌಡ ನೇತೃತ್ವದಲ್ಲಿ ಆಗಮಿಸಿ ರೈತಸಂಘದ ಕಾರ್ಯಕರ್ತರು ಪಟ್ಟಣದ ಹಾರೋಹಳ್ಳಿ ಬಳಿ ವಿಸಿ ನಾಲೆಯ ಕಾಮಗಾರಿ ವೀಕ್ಷಣೆ ಮಾಡಿ ಕಾಮಗಾರಿ ಕಳಪೆಯಿಂದ ಕೂಡಿದೆ ಎಂದು ಆರೋಪಿಸಿ ಗುತ್ತಿಗೆದಾರ ವಿರುದ್ಧ ಸ್ಥಳದಲ್ಲಿಯೇ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಮಂಜೇಶ್ ಗೌಡ ಮಾತನಾಡಿ, ವಿಸಿ ನಾಲೆಯ ಕಾಮಗಾರಿ ಅವೈಜ್ಞಾನಿಕವಾಗಿದ್ದು, ಕಾಮಗಾರಿ ಸಂಪೂರ್ಣವಾಗಿ ಕಳಪೆಯಿಂದ ಕೂಡಿದೆ ಎಂದು ಆರೋಪಿಸಿದರು.

ನಾಲೆಯ ಕೆಳಭಾಗದ ರೈತರಿಗೆ ನೀರು ತಲುಪಬೇಕೆಂಬ ಉದ್ದೇಶದಿಂದ ನಾಲೆ ಕಾಮಗಾರಿ ನಡೆಸುತ್ತಿದೆ. ಆದರೆ, ಕಾಮಗಾರಿ ಸಂಪೂರ್ಣವಾಗಿ ಕಳಪೆಯಿಂದ ಕೂಡಿದೆ. ಜತೆಗೆ ಕಾಮಗಾರಿ ಮಂದಗತಿಯಿಂದ ನಡೆಯುತ್ತಿದೆ. ಕಳೆದ ಒಂದು ವರ್ಷದಿಂದ ಸಂಪೂರ್ಣವಾಗಿ ಬರಗಾಲದ ಛಾಯೆ ಮನೆ ಮಾಡಿದೆ, ಇದೀಗ ಜೂನ್, ಜುಲೈ ತಿಂಗಳಲ್ಲಿ ನಾಲೆಗೆ ನೀರು ಹರಿಸಬೇಕು ಆದರೆ, ಮಂದಗತಿ ಕಾಮಗಾರಿಯಿಂದ ನಾಲೆಗೆ ನೀರು ಹರಿಸುವುದು ತಡವಾಗುತ್ತಿದೆ ಎಂದು ಕಿಡಿಕಾರಿದರು.

ನಾಲೆ ಕಾಮಗಾರಿ ಅವೈಜ್ಞಾನಿಕವಾಗಿ ಮಾಡುತ್ತಿದ್ದರು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಹಾಗೂ ಜಿಲ್ಲಾಡಳಿತ ಕಣ್ಣು ಮುಚ್ಚಿ ಕುಳಿತಿದೆ. ಕಾಮಗಾರಿಯನ್ನು ತುಂಡು ಗುತ್ತಿಗೆಯಾಗಿ ನೀಡಿದ್ದಾರೆ. ಒಬ್ಬೊಬ್ಬರು ನಡೆಸುವ ಕಾಮಗಾರಿ ಒಂದೊಂದು ಗುಣಮಟ್ಟದಿಂದ ಕೂಡಿರುತ್ತದೆ. ಕೂಡಲೇ ಸಂಬಂಧಿಸಿದ ಅಧಿಕಾರಿಗಳು, ಮಂತ್ರಿಗಳು ಪರಿಶೀಲಿಸಿ ಕಾಮಗಾರಿ ಪೂರ್ಣಗೊಳಿಸಿ ನಾಲೆಗೆ ನೀರು ಹರಿಸದಿದ್ದರೆ ಉಗ್ರಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಸಂದರ್ಭದಲ್ಲಿ ಮುಖಂಡರಾದ ಅಣ್ಣೂರು ಮಹೇಂದ್ರ, ಕೀಲಘಟ್ಟ ನಂಜುಂಡಯ್ಯ, ವೆಂಕಟೇಶ್, ಉಮೇಶ್, ಪ್ರಕಾಶ್, ಪ್ರಭುಲಿಂಗು, ಚಿಕ್ಕಮರೀಗೌಡ ಸೇರಿದಂತೆ ಅನೇಕ ಮುಖಂಡರು ಇದ್ದರು.



ನಾಲೆ ಆಧುನಿಕ ಕಾಮಗಾರಿಯನ್ನು ಮೂಲ ರೈತ ಸಂಘದ ಕಾರ್ಯಕರ್ತರು ವೀಕ್ಷಿಸಿದರು.

ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ವಿಧಾನಪರಿಷತ್ ಚುನಾವಣೆ; ಝಣಝಣ ಕಾಂಚಣದ ಭಾರಿ ಸದ್ದು

ಅಭ್ಯರ್ಥಿಗಳಿಂದಲೇ ಚುನಾವಣಾ ಭ್ರಷ್ಟತೆಯ ಕರಾಳ ಮುಖ ಬಯಲು

ಮೈಸೂರು, ಮೇ31(ಬಿಎಲ್‌ಯು)–ಆದರ್ಶದ ಪಾಠ ಮಾಡುವ ಪ್ರಬುದ್ಧ ಮತದಾರ ವರ್ಗದ ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್ ಚುನಾವಣೆಯಲ್ಲಿ ಕುರುಡು ಕಾಂಚಣ ಭಾರೀ ಸದ್ದು ಮಾಡುತ್ತಿದೆ. ರಾತ್ರಿ ಆಯಿತೆಂದರೆ ಪಾನಗೋಷ್ಠಿಗಳು ನಡೆಯುತ್ತಿವೆ. ಶಿಕ್ಷಕರ ಕ್ಷೇತ್ರದ ಚುನಾವಣೆ ಇತ್ತೀಚಿನ ವರ್ಷಗಳಲ್ಲಿ ಯಾರೂ ಊಹಿಸಲಾರದಷ್ಟು ಹದಗೆಟ್ಟಿದೆ. ಇದರ ಬಗ್ಗೆ ಚುನಾವಣೆಯಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಗಳೇ ಪರಸ್ಪರ ಆರೋಪ–ಪ್ರತ್ಯಾರೋಪದ ಮೂಲಕ ಬಣ್ಣಗೇಡು ಮಾಡಿದ್ದಾರೆ. ಮೈಸೂರಿನ ಪತ್ರಕರ್ತರ ಭವನದಲ್ಲಿ ಇಂದು ಜಿಲ್ಲಾ ಪತ್ರಕರ್ತರ ಸಂಘ, ದಕ್ಷಿಣ ಶಿಕ್ಷಕರ ಕ್ಷೇತ್ರದ ಅಭ್ಯರ್ಥಿಗಳೊಂದಿಗೆ ಪತ್ರಿಕಾ ಸಂವಾದ ಆಯೋಜಿಸಿತ್ತು. ಈ ವೇಳೆ ಚುನಾವಣೆಯಲ್ಲಿ ಸ್ಪರ್ಧೆ ಮಾಡಿರುವ ಅಭ್ಯರ್ಥಿಗಳು ಒಬ್ಬರಿಗೊಬ್ಬರು ಬೊಟ್ಟು ಮಾಡಿ ತೋರಿಸುವ ಮೂಲಕ ಚುನಾವಣಾ ಭ್ರಷ್ಟ ವ್ಯವಸ್ಥೆಯ ಕರಾಳ ಮುಖವನ್ನು ಬಯಲು ಮಾಡಿದರು. ಶಿಕ್ಷಕ ಮತದಾರರಿಗೆ ಹಂಚುತ್ತಿರುವ ಹಣ, ನೀಡುತ್ತಿರುವ ಉಡುಗೊರೆ, ರಾತ್ರಿ ಆಯಿತೆಂದರೆ ನಡೆಯುವ ಗುಂಡು ಸಮಾರಾಧನೆ ಬಗ್ಗೆ ಸ್ವತಃ ಅಭ್ಯರ್ಥಿಗಳೇ ಹೇಸಿಗೆ ಪಟ್ಟಿದ್ದಾರೆ.



ಮೈಸೂರಿನ ಪತ್ರಕರ್ತರ ಭವನದಲ್ಲಿ ಶುಕ್ರವಾರ ನಡೆದ ಪತ್ರಿಕಾ ಸಂವಾದದಲ್ಲಿ ವಿಧಾನ ಪರಿಷತ್‌ನ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಗಳು ಪರಸ್ಪರ ಶುಭ ಕೋರಿದರು.

ಸಾಕ್ಷಿ ಕೊಡುವೆ ಸ್ಪರ್ಧೆಯಿಂದ ಹಿಂದೆ ಸರಿಯುತ್ತಾರಾ

–ಡಾ.ಮಹೇಶ್ ಸವಾಲು

ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡ, ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿ ವಿವೇಕಾನಂದ ಶಿಕ್ಷಕ ಮತದಾರರಿಗೆ ಗುಂಡು ಪಾರ್ಟಿಗಳನ್ನು ಆಯೋಜಿಸುತ್ತಿದ್ದು, ಇದನ್ನು ವಿಡಿಯೋ ಸಾಕ್ಷಿ ಸಮೇತ ಸಾಬೀತು ಮಾಡಿದರೆ ಸ್ಪರ್ಧೆಯಿಂದ ಹಿಂದೆ ಸರಿಯುತ್ತಾರಾ ಎಂದು ಬಿಎಸ್ ಪಿ ಅಭ್ಯರ್ಥಿ ಡಾ.ಹ.ರಾ.ಮಹೇಶ್ ಸವಾಲು ಹಾಕಿದರು.

ಹಣ, ಹೆಂಡದ ಭರಾಟೆಯಲ್ಲಿ ಈ ಚುನಾವಣೆ ನಡೆಯುತ್ತಿದೆ. ಶಿಕ್ಷಕ ಮತದಾರರಿಗೆ ಆಮಿಷವೊಡ್ಡಿ ಗೆಲ್ಲಲು ಪೈಪೋಟಿ ನಡೆಸುತ್ತಿದ್ದಾರೆ. ಈ ಮೂಲಕ ಶಿಕ್ಷಕ ಕ್ಷೇತ್ರದ ಚುನಾವಣೆಯನ್ನು ಮಲೀನ ಮಾಡಿದ್ದಾರೆ ಎಂದು ಆರೋಪಿಸಿದರು. ವಿಧಾನ ಪರಿಷತ್ ಚಿಂತಕರ ಚಾವಡಿಯಾಗಿದೆ. ಆದರೆ ಶಿಕ್ಷಣ ಕ್ಷೇತ್ರದ ಪರವಾಗಿ ಹೋರಾಟ ಮಾಡುವಲ್ಲಿ ಮರಿತಿಬ್ಬೇಗೌಡ ಸೋತಿದ್ದಾರೆ ಎಂದು ಆಪಾದಿಸಿದರು.

ವಿಶ್ವವಿದ್ಯಾನಿಲಯದಲ್ಲಿ ಈ ಮೊದಲು ಶೇಕಡ 72 ರಷ್ಟು ಖಾಯಂ ಅಧ್ಯಾಪಕರಿದ್ದರು. ಆದರೆ ಈಗ ಶೇಕಡ 30ರಷ್ಟು ಯುಜಿಸಿ ಹಾಗೂ ನ್ಯಾಕ್ ಮಟ್ಟಕ್ಕೆ ಹೋಗದ ಪರಿಸ್ಥಿತಿ ಎದುರಾಗಿದ್ದು, ಶಿಕ್ಷಣದ ಗುಣಮಟ್ಟ ಕುಸಿದಿದೆ. ಇದರಿಂದ ವಿಶ್ವವಿದ್ಯಾನಿಲಯಗಳು ನರಳುತ್ತಿವೆ ಎಂದು ಡಾ.ಮಹೇಶ್ ದೂರಿದರು.

ಅತಿಥಿ ಉಪನ್ಯಾಸಕರನ್ನು ಆಧುನಿಕ ಜೀತದಾರರಂತೆ ನೋಡುತ್ತಿದ್ದಾರೆ. ಈತನಕ ಅಧಿಕಾರ ನಡೆಸಿದ ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ಸರ್ಕಾರಗಳು ಶಿಕ್ಷಣ ಕ್ಷೇತ್ರದ ಸಮಸ್ಯೆಗಳನ್ನು ಜೀವಂತವಾಗಿಟ್ಟಿವೆ. ಮತದಾರರಿಗೆ ಆಮಿಷವೊಡ್ಡಿ ನಿರಂತರ ಆಯ್ಕೆಯಾಗುತ್ತಿದ್ದಾರೆ ಎಂದು ಆರೋಪಿಸಿದರು. ಈ ಹಿನ್ನೆಲೆಯಲ್ಲಿ ಬದಲಾವಣೆ ಅಗತ್ಯವಾಗಿದ್ದು, ಕಳೆದ 22 ವರ್ಷಗಳಿಂದ ಶಿಕ್ಷಕನಾಗಿ ಕಾರ್ಯ ನಿರ್ವಹಿಸಿದ ನನ್ನನ್ನು ಆಯ್ಕೆ ಮಾಡಬೇಕು ಎಂದು ಡಾ.ಮಹೇಶ್ ಮನವಿ ಮಾಡಿದರು.

ತಲಾ 5 ಸಾವಿರದಂತೆ ಶಿಕ್ಷಕ ಮತದಾರರಿಗೆ 10 ಕೋಟಿ ಹಂಚಿಕೆ

–ವಾಟಾಳ್ ನಾಗರಾಜ್

ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್ ಚುನಾವಣೆಯ ಪಕ್ಷೇತರ ಅಭ್ಯರ್ಥಿಯೂ ಆದ ಮಾಜಿ ಶಾಸಕ ವಾಟಾಳ್ ನಾಗರಾಜ್ ಮತದಾರರಿಗೆ ಹಂಚುತ್ತಿರುವ ಹಣದ ಬಗ್ಗೆ ಅಂಕಿ ಅಂಶಗಳ ವಿವರ ನೀಡಿ, ಅಚ್ಚರಿ ಮೂಡಿಸಿದರು. ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಒಟ್ಟು 21 ಸಾವಿರ ಮತದಾರರಿದ್ದಾರೆ. ತಾವು ಮಾಡಿರುವ ಜನಪರ ಕಾರ್ಯಗಳು, ಮುಂದೆ ಮಾಡಬೇಕಿರುವ ಕೆಲಸ ಕಾರ್ಯಗಳ ಬಗ್ಗೆ ಮತದಾರರಿಗೆ ತಿಳಿ ಹೇಳುವ ಬದಲು ಅಡ್ಡ ದಾರಿಯಲ್ಲಿ ಗೆಲ್ಲಲು ಪೈಪೋಟಿಗಿಳಿದಿದ್ದಾರೆ ಎಂದು ದೂರಿದರು. ಪ್ರತಿ ಮತದಾರನಿಗೆ 5 ಸಾವಿರ ರೂಪಾಯಿ ಹಣ ನೀಡುತ್ತಿದ್ದಾರೆ. 21 ಸಾವಿರ ಮತದಾರರಿಗೆ ತಲಾ 5 ಸಾವಿರ ರೂಪಾಯಿಯಂತೆ 10.50 ಕೋಟಿ ಹಣ ಖರ್ಚು ಮಾಡುತ್ತಿದ್ದಾರೆ. ನಮ್ಮಲ್ಲಿ ಅಷ್ಟು ಪ್ರಮಾಣದ ದುಡ್ಡಿಲ್ಲ ಎಂದು ವಾಟಾಳ್ ನಾಗರಾಜ್ ಹೇಳಿದರು. ಮತದಾರರಿಗೆ ವಾಚ್ ಕೊಡುತ್ತಿದ್ದಾರೆ. ಚುನಾವಣೆ ಆದ ಮಾರನೆ ದಿನಕ್ಕೆ ಆ ವಾಚ್ 12 ಗಂಟೆ ಬದಲು 13 ಗಂಟೆ ತೋರಿಸುತ್ತದೆ. ಇದಿಷ್ಟೆ ಅಲ್ಲದೆ ರಾತ್ರಿ ಪಾರ್ಟಿಗಳು ನಡೆಯುತ್ತಿವೆ ಎಂದು ವಾಟಾಳ್ ನಾಗರಾಜ್ ಆರೋಪಿಸಿದರು.

ಇವತ್ತಿನ ದಿನ ಎಲ್ಲಾ ಬೆಲೆಗಳು ಗಗನಕ್ಕೇರಿವೆ. ರುಚಿಯಾದ ಒಂದು ಮಸಾಲೆ ದೋಸೆಗೆ 150 ರೂಪಾಯಿ, ಒಳ್ಳೆ ಕಾಫಿ, ಟೀಗೆ 75 ರೂಪಾಯಿ. ಒಳ್ಳೆ ಹೋಟೆಲ್‌ನಲ್ಲಿ ಉಪಹಾರಕ್ಕೆ ಕುಳಿತರೆ 225 ರೂಪಾಯಿ ವೆಚ್ಚವಾಗುತ್ತದೆ. ಆದರೆ ನಮ್ಮ ಅಭ್ಯರ್ಥಿಗಳು ಪ್ರತಿ ಮತದಾರನಿಗೆ 5 ಸಾವಿರ ರೂಪಾಯಿ ನೀಡುತ್ತಿದ್ದಾರೆ. ಆರು ವರ್ಷದ ಅವಧಿಯಲ್ಲಿ ಒಂದು ದಿನಕ್ಕೆ ಪ್ರತಿ ಮತದಾರನಿಗೆ 2 ರೂಪಾಯಿ 15 ಪೈಸೆಯಂತೆ ಲೆಕ್ಕಾ ಹಾಕಿ ನೀಡುತ್ತಿದ್ದಾರೆ. ಇವರು ನೀಡುವ 2 ರೂಪಾಯಿಗೆ ಒಂದು ಟೀ ಕೂಡ ಬರಲ್ಲ. ಈ ಮೂಲಕ ಶಿಕ್ಷಕ ಮತದಾರರ ಮಹತ್ವವನ್ನು ಕೆಳ ಮಟ್ಟಕ್ಕೆ ತಂದು ಕೂರಿಸಿದ್ದಾರೆ ಎಂದು ಆಪಾದಿಸಿದರು. ದೇಶದ ಅತ್ಯುನ್ನತ ಹುದ್ದೆಯಾದ ರಾಷ್ಟ್ರಪತಿಗಳಿಗಿಂತ ಶಿಕ್ಷಕರ ಹುದ್ದೆ ಮಹತ್ವದ್ದಾಗಿದೆ. ಏಕೆಂದರೆ ರಾಷ್ಟ್ರಪತಿಯಾದವರಿಗೂ ಶಿಕ್ಷಣದ ಜ್ಞಾನ ನೀಡಿದವರು ಶಿಕ್ಷಕರು. ಆದರೆ ಶಿಕ್ಷಕರನ್ನು ಈ ಅಭ್ಯರ್ಥಿಗಳು ತೀರಾ ಕೆಳ ಮಟ್ಟಕ್ಕೆ ತಂದು ನಿಲ್ಲಿಸಿದ್ದಾರೆ ಎಂದು ಕಿಡಿಕಾರಿದರು. ಇವತ್ತು ಹಣ ಕೊಡದೆ ಯಾವ ಸ್ಥಾನಕ್ಕೂ ಬರಲು ಸಾಧ್ಯವಿಲ್ಲ. ವಿಧಾನಸಭಾ ಸದಸ್ಯರಿಂದ ವಿಧಾನ ಪರಿಷತ್‌ಗೆ ಆಯ್ಕೆಯಾಗಲು, ನಾಮಕರಣಗೊಳ್ಳಲು ಕೋಟಿ ಕೋಟಿ ಹಣ ಕೊಟ್ಟರೆ ಮಾತ್ರ ಸಾಧ್ಯ. ಈ ಮೂಲಕ ಎಲ್ಲಾ ಕ್ಷೇತ್ರ ವ್ಯಾಪಾರೀಕರಣಗೊಂಡಿದೆ ಎಂದು ವಾಟಾಳ್ ನಾಗರಾಜ್ ಆಕ್ರೋಶ ವ್ಯಕ್ತಪಡಿಸಿದರು.

ಮೈತ್ರಿ ಅಭ್ಯರ್ಥಿ ವಿವೇಕಾನಂದರಿಂದ ವಾಚ್, ಹಣದ ಆಮಿಷ

–ಮರಿತಿಬ್ಬೇಗೌಡ ಆರೋಪ

ಬಿಜೆಪಿ, ಜೆಡಿಎಸ್ ಮೈತ್ರಿ ಅಭ್ಯರ್ಥಿ ವಿವೇಕಾನಂದ ಶಿಕ್ಷಕ ಮತದಾರರಿಗೆ ವಾಚ್, ಹಣ ಸೇರಿದಂತೆ ನಾನಾ ಆಮಿಷ ತೋರುತ್ತಿದ್ದಾರೆ ಎಂದು ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡ ಆರೋಪಿಸಿದರು. ಶಿಕ್ಷಕ ಕ್ಷೇತ್ರದ ಚುನಾವಣೆ ಈ ತನಕ ಕೆಟ್ಟಿರಲಿಲ್ಲ. ಆದರೆ ಈ ಬಾರಿ ಬಹಳ ಹದಗೆಟ್ಟಿದೆ. ಶತಾಯ ಗತಾಯ ಗೆಲ್ಲಲೇಬೇಕು ಎಂದು ಪಣ ತೊಟ್ಟು ಶಿಕ್ಷಕ ಮತದಾರರಿಗೆ ಹಣ ಹಾಗೂ ಉಡುಗೊರೆಗಳನ್ನು ವಿವೇಕಾನಂದ ನೀಡುತ್ತಿದ್ದಾರೆ ಎಂದು ದೂರಿದರು. ನಾನು ಕಳೆದ 24 ವರ್ಷಗಳಿಂದ ಈ ಕ್ಷೇತ್ರ ಪ್ರತಿನಿಧಿಸಿದ್ದೇನೆ. ಆದರೆ ಈ ತನಕ ನಾನು ಯಾವ ಮತದಾರರಿಗೂ ನಯಾ ಪೈಸೆ ಹಣ ಕೊಟ್ಟಿಲ್ಲ. ನಾನು ಹಣ ಕೊಟ್ಟು ಗೆಲುವು ಸಾಧಿಸಿದ್ದೇನೆ ಎಂಬ ಸಾಕ್ಷ್ಯ ಇದ್ದರೆ ಸಾಬೀತು ಮಾಡಲಿ ಎಂದು ಮರಿತಿಬ್ಬೇಗೌಡರು ಸವಾಲು ಹಾಕಿದರು.

ನಾನು ಪಕ್ಷಗಳನ್ನು ಬದಲಾವಣೆ ಮಾಡಿರಬಹುದು. ಆದರೆ ಶಿಕ್ಷಣ ಕ್ಷೇತ್ರದ ಹೋರಾಟದಿಂದ ನಾನು ವಿಮುಖನಾಗಿರಲಿಲ್ಲ. ಶಿಕ್ಷಕರ ಸಮಸ್ಯೆಗಳನ್ನು ಪ್ರತಿ ಹಂತದಲ್ಲೂ ಸರಿಪಡಿಸಲು ಹೋರಾಟ ಮಾಡಿದ್ದೇನೆ. 5 ನೇ ಬಾರಿ ಆಯ್ಕೆ ಮಾಡಿದರೆ ಶಿಕ್ಷಕರ ಎಲ್ಲಾ ಬೇಡಿಕೆ ಈಡೇರಿಸಿ, ಗುಣಮಟ್ಟದ ಶಿಕ್ಷಣ ನೀಡಲು ಶ್ರಮಿಸುವೆ ಎಂದು ಭರವಸೆ ನೀಡಿದರು. ಕಳೆದ 24 ವರ್ಷದಲ್ಲಿ ನಾನು ವಿರೋಧ ಪಕ್ಷದ ಸ್ಥಾನದಲ್ಲಿ ಇದ್ದೆ ಕೆಲಸ ಮಾಡಿದ್ದೇನೆ. ಉಪ ಸಭಾಪತಿಯಾಗಿ ಆ ಸ್ಥಾನದ ಗೌರವ, ಘನತೆ ಹೆಚ್ಚಿಸಿದ್ದೇನೆ. ಈಗ ಆಡಳಿತ ಪಕ್ಷದಲ್ಲಿದ್ದು, ನನ್ನನ್ನು ಆಯ್ಕೆ ಮಾಡಿದರೆ ಶಿಕ್ಷಕರ ಸಮಸ್ಯೆಗಳನ್ನು ಮತ್ತಷ್ಟು ಶೀಘ್ರಗತಿಯಲ್ಲಿ ಪರಿಹಾರ ಮಾಡಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಮುಖ್ಯಮಂತ್ರಿ ಸಿದ್ದರಾಮಯ್ಯ ವಿದ್ಯಾಸಿರಿ ಯೋಜನೆ ನೀಡಿದ್ದಾರೆ, 6 ನೇ ವೇತನ ಆಯೋಗದ ವರದಿ ಜಾರಿಗೊಳಿಸಿದ್ದಾರೆ, 2 ಸಾವಿರ ಪದವಿ ಪೂರ್ವ ಉಪನ್ಯಾಸಕರು, ವಿಶ್ವವಿದ್ಯಾನಿಲಯದಲ್ಲಿ 800 ಅಧ್ಯಾಪಕರನ್ನು ನೇಮಕ ಮಾಡಿದ್ದಾರೆ ಎಂದು ವಿವರಿಸಿದರು. ಲೋಕಸಭಾ ಚುನಾವಣೆ ಮುಗಿದ ನಂತರ 7 ನೇ ವೇತನ ಆಯೋಗದ ವರದಿ ಜಾರಿಗೊಳಿಸಲಿದ್ದಾರೆ. ಸರ್ಕಾರಿ ನೌಕರರಿಗೆ ಹಳೇ ಪಿಂಚಣಿ ವ್ಯವಸ್ಥೆ ಜಾರಿ ಮಾಡಲಿದ್ದಾರೆ. ಹೀಗೆ ಹತ್ತು ಹಲವು ಮಹತ್ವದ ಕೊಡುಗೆ ನೀಡಲಿದ್ದಾರೆ. ಇದನ್ನು ಮನಗಂಡು ಶಿಕ್ಷಕ ಮತದಾರರು ನನ್ನನ್ನು ಬೆಂಬಲಿಸಬೇಕು ಎಂದು ಮರಿತಿಬ್ಬೇಗೌಡ ಮನವಿ ಮಾಡಿದರು.

ಕಾಂಗ್ರೆಸ್‌ನವರೇ ಹಣ, ಉಡುಗೊರೆ ಹಂಚುತ್ತಿದ್ದಾರೆ

–ರವಿಚಂದ್ರೇಗೌಡ ತಿರುಗೇಟು

ಜೆಡಿಎಸ್, ಬಿಜೆಪಿ ಮೈತ್ರಿ ಅಭ್ಯರ್ಥಿ ಪರವಾಗಿ ಸಂವಾದದಲ್ಲಿ ಹಾಜರಿದ್ದ ಜೆಡಿಎಸ್ ವಕ್ತಾರ ರವಿಚಂದ್ರೇಗೌಡ ಮಾತನಾಡಿ, ಶಿಕ್ಷಕ ಮತದಾರರಿಗೆ ನಾವು ಹಣ, ಉಡುಗೊರೆ ಹಂಚುತ್ತಿಲ್ಲ, ರಾತ್ರಿ ಗುಂಡು ಪಾರ್ಟಿ ಏರ್ಪಡಿಸುತ್ತಿಲ್ಲ. ಇದನ್ನೆಲ್ಲಾ ಕಾಂಗ್ರೆಸ್‌ನವರೇ ಮಾಡುತ್ತಿದ್ದಾರೆ ಎಂದು ತಿರುಗೇಟು ನೀಡಿದರು. ನಮ್ಮ ಅಭ್ಯರ್ಥಿ 7ನೇ ತರಗತಿ ತನಕ ಮಾತ್ರ ಓದಿರಬಹುದು. ಆದರೆ ಯಾರು ಬೇಕಾದರೂ ಚುನಾವಣೆಯಲ್ಲಿ ಸ್ಪರ್ಧೆ ಮಾಡಬಹುದು ಎಂದು ಸಂವಿಧಾನವೇ ಹೇಳಿದೆ. 124 ಕೋಟಿ ಒಡೆಯನಿಗೆ ಟಿಕೆಟ್ ನೀಡಲಾಗಿದೆ ಎಂದು ಆರೋಪಿಸಿದ್ದಾರೆ. ಆದರೆ ನಮ್ಮ ಅಭ್ಯರ್ಥಿ ವಿವೇಕಾನಂದಗೆ ರಾಜಕಾರಣದಲ್ಲಿ ಹಣ ಮಾಡುವ ಉದ್ದೇಶ ಇಲ್ಲ ಎಂದು ಸ್ಪಷ್ಟಪಡಿಸಿದರು. ವಿಧಾನ ಪರಿಷತ್‌ಗೆ ಆಯ್ಕೆಯಾದರೆ ವೇತನದ ಪೂರ್ಣ ಹಣವನ್ನು ಶಿಕ್ಷಣ ಕ್ಷೇತ್ರದ ಕಲ್ಯಾಣ ಕಾರ್ಯಕ್ರಮಗಳಿಗೆ ನೀಡುವುದಾಗಿ ನಮ್ಮ ಅಭ್ಯರ್ಥಿ ಹೇಳಿದ್ದು, ಇಂತಹ ಉದಾರತೆ ಇರುವ ವ್ಯಕ್ತಿಯನ್ನು ಶಿಕ್ಷಕ ಮತದಾರರು ಬೆಂಬಲಿಸಿ ಆಯ್ಕೆ ಮಾಡಬೇಕು ಎಂದು ರವಿಚಂದ್ರೇಗೌಡ ಮನವಿ ಮಾಡಿದರು.

124 ಕೋಟಿ ಒಡೆಯನಿಗೆ ಟಿಕೆಟ್ ಕೊಟ್ಟು ವ್ಯಾಪಾರೀಕರಣ ಮಾಡಿದ್ದಾರೆ

–ಕೆ.ಸಿ.ಪುಟ್ಟಸಿದ್ದಶೆಟ್ಟಿ ಆರೋಪ

ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಜೆಡಿಎಸ್‌ನವರು 124 ಕೋಟಿ ಆಸ್ತಿ ಒಡೆಯ ವಿವೇಕಾನಂದನಿಗೆ ಟಿಕೆಟ್ ಕೊಟ್ಟು ಚುನಾವಣೆಯನ್ನು ವ್ಯಾಪಾರೀಕರಣ ಮಾಡಿದ್ದಾರೆ ಎಂದು ಪಕ್ಷೇತರ ಅಭ್ಯರ್ಥಿ ಹಾಗೂ ಮಾಜಿ ವಿಧಾನ ಪರಿಷತ್ ಸದಸ್ಯ ಕೆ.ಸಿ.ಪುಟ್ಟಸಿದ್ದಶೆಟ್ಟಿ ಆರೋಪಿಸಿದರು. ಶಿಕ್ಷಣ ಹಾಗೂ ಪದವೀಧರ ಕ್ಷೇತ್ರಕ್ಕೆ ವಿಧಾನ ಪರಿಷತ್‌ನಲ್ಲಿ 7 ಸ್ಥಾನವಿದೆ. ಇದಕ್ಕೆ ಆಯ್ಕೆಯಾಗಲು ಹಣ ಬಲ, ಪಕ್ಷ ಬಲ, ಗಾಡ್ ಫಾದರ್ ಕೃಪಾಕಟಾಕ್ಷ ಬೇಕು ಎಂದು ದೂರಿದರು. ಜಾತೀಯತೆಯ ತಂತ್ರಗಾರಿಕೆ ರೂಪಿಸಿ, ಹಣ, ಉಡುಗೊರೆ ವಿತರಿಸಿ, ಪಾರ್ಟಿಗಳನ್ನು ಮಾಡಿ ಇಡೀ ಶಿಕ್ಷಕರ ಕ್ಷೇತ್ರವನ್ನು ಹಾಳು ಮಾಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಕಳೆದ 24 ವರ್ಷ ಇದೇ ಕ್ಷೇತ್ರ ಪ್ರತಿನಿಧಿಸಿದ್ದ ಮರಿತಿಬ್ಬೇಗೌಡರು ಸಮಸ್ಯೆಗಳ ಪಟ್ಟಿ ಮಾಡಿದ್ದಾರೆಯೇ ಹೊರತು, ಈ ತನಕ ಯಾವುದನ್ನು ಪರಿಹಾರ ಮಾಡಲು ಪ್ರಯತ್ನ ಕೂಡ ಮಾಡಿಲ್ಲ. ಸಿದ್ದರಾಮಯ್ಯ ಅವರನ್ನು ಮರಿತಿಬ್ಬೇಗೌಡರು ಹಾಡಿ ಹೊಗಳುತ್ತಾರೆ. ಆದರೆ ಸಿದ್ದರಾಮಯ್ಯಗೆ ಶಿಕ್ಷಕರು ಹಾಗೂ ಸರ್ಕಾರಿ ನೌಕರರಿಗೆ ಹಣ ಕೊಡಲು ಮನಸ್ಸು ಇಲ್ಲ. ಇವರಿಗೆ ವೇತನ ಹೆಚ್ಚಳ ಮಾಡಬೇಕು ಅಂದರೆ ಎಣ್ಣೆ ಮುಖ ಮಾಡಿಕೊಳ್ಳುತ್ತಾರೆ ಎಂದು ಜರಿದರು. ಡಿ.ಇಡಿ ಓದಿದವರು ಇವತ್ತು ಕೆಲಸವಿಲ್ಲದೆ ಕೂಲಿ ಕೆಲಸ ಮಾಡುತ್ತಿದ್ದಾರೆ. ಹೂವು ಮಾರಾಟ ಮಾಡುತ್ತಿದ್ದಾರೆ. ಈ ತನಕ ಅಧಿಕಾರಕ್ಕೆ ಬಂದ ಸರ್ಕಾರಗಳನ್ನು ಶಿಕ್ಷಣ ಕ್ಷೇತ್ರಕ್ಕೆ ಕಿಂಚಿತ್ತೂ ಕೊಡುಗೆ ನೀಡಿಲ್ಲ ಎಂದು ಆರೋಪ ಮಾಡಿದರು. ಈಗಾಗಲೇ ವಿಧಾನ ಪರಿಷತ್‌ನಲ್ಲಿ ಕೆಲಸ ಮಾಡಿರುವ ತಮ್ಮನ್ನು ಆಯ್ಕೆ ಮಾಡಿದರೆ ಶಿಕ್ಷಕರ ಬೇಡಿಕೆ ಈಡೇರಿಸುತ್ತೇನೆ ಎಂದು ಪುಟ್ಟಸಿದ್ದಶೆಟ್ಟಿ ಭರವಸೆ ನೀಡಿದರು.

ಮೈಸೂರು ಮಿತ್ರ
ಶನಿವಾರ 1 ಜೂನ್ 2024

ಮೂರನೇ ಪುಟದಿಂದ

ಪ್ರಜ್ವಲ್ ಜೂ.6ರವರೆಗೆ ಎಸ್‌ಐಟಿ ವಶಕ್ಕೆ

ಇವರ ಮೇಲೆ ಅತ್ಯಾಚಾರ, ಲೈಂಗಿಕ ದೌರ್ಜನ್ಯ, ಅಪಹರಣ ಆರೋಪ ಪ್ರಕರಣಗಳಿವೆ. ಇವರು ಕಾನೂನು ಮಾಡುವವರು, ಇಂತಹವರನ್ನು ಹೊರಗಿಟ್ಟರೆ ತಮ್ಮ ಪ್ರಭಾವ ಬಳಸಿ ಸಾಕ್ಷ್ಯಗಳನ್ನು ನಾಶಪಡಿಸಬಹುದು ಎಂದು ಎಸ್‌ಐಟಿ ಪರ ವಕೀಲ ಅಶೋಕ್ ನಾಯಕ್ ವಾದಿಸಿದರು.

ಇವನೊಬ್ಬ ವಿಕೃತ ಕಾಮಿ ಎನ್ನಿಸುತ್ತದೆ. ಈತ ತುಂಬಾ ಡೇಂಜರ್ ಇದ್ದಾನೆ. ಸಂತ್ರಸ್ತ ಮಹಿಳೆ ಹೇಳಿಕೆ ಗಮನಿಸಿದರೆ ಈ ಅನುಮಾನ ಬರುತ್ತದೆ. ಹಲವರ ಮೇಲೆ ಅತ್ಯಾಚಾರ ಎಸಗಿದ್ದಾನೆ. ಹಲವು ಸಂತ್ರಸ್ತೆಯರಿದ್ದಾರೆ. ಮಾಧ್ಯಮಗಳಲ್ಲಿ ಸುದ್ದಿಯಾಗಬಾರದು ಎಂದು ತಡೆಯಾಜ್ಞೆ ತಂದಿದ್ದಾನೆ. ವಿಡಿಯೊ ಮಾಡಿರುವ ಮೊಬೈಲ್ ಪತ್ತೆ ಮಾಡಬೇಕಿದೆ, ಹಲವು ಸಾಕ್ಷ್ಯಗಳ ಪತ್ತೆ ಆಗಬೇಕಿದೆ. ಈತ ದೇಶ ಬಿಟ್ಟು ಹೋಗಿದ್ದ, ವಾಪಸ್ ಬರುವ ಉದ್ದೇಶ ಇರಲಿಲ್ಲ. ಎಲ್ಲಾ ಕೋನಗಳಿಂದಲೂ ತನಿಖೆ ನಡೆಸಲು 15 ದಿನಗಳ ಕಸ್ಟಡಿಗೆ ನೀಡುವಂತೆ ಮನವಿ ಮಾಡಿದರು. ಈತ ಸಾಮಾನ್ಯನಲ್ಲ, ತನಿಖೆ ಪೂರ್ಣಗೊಳ್ಳುವವರೆಗೂ ಜಾಮೀನು ನೀಡಬಾರದು ಎಂದು ಬಲವಾದ ವಾದ ಮಂಡಿಸಿದರು.

ಎಸ್‌ಐಟಿಯದ್ದು ರೆಡಿಮೇಡ್ ದೂರು: ಇದಕ್ಕೆ ಪ್ರತಿಯಾಗಿ ಪ್ರಜ್ವಲ್ ವಕೀಲ ಅರುಣ್, ಎಸ್‌ಐಟಿ ಅವರು ರೆಡಿಮೇಡ್ ದೂರು ದಾಖಲಿಸಿದ್ದಾರೆ, ಅವರನ್ನು ಬಂಧನದಲ್ಲಿ ವಿಚಾರಣೆಗೆ ಒಳಪಡಿಸುವ ಅಗತ್ಯವಿಲ್ಲ. ಎಸ್‌ಐಟಿ ಸಲ್ಲಿಸಿರುವುದು ಸಿದ್ಧಪಡಿಸಿದ ದೂರಿನಂತಿದೆ. ಪ್ರಜ್ವಲ್ ವಿರುದ್ಧ ದೂರು ನೀಡಿದ ಮಹಿಳೆಯ ವಿಡಿಯೋ ಮಾಡಿಲ್ಲ ಎಂದು ದೂರುದಾರರ ವಿಡಿಯೋಕ್ಕೆ ಸಂಬಂಧಿಸಿದ ಬೇರೆ ಪ್ರಕರಣಗಳನ್ನು ಉಲ್ಲೇಖಿಸಿದರು.

ದೂರುದಾರರು ಬಲವಾದ ಸಾಕ್ಷ್ಯಗಳನ್ನು ಒದಗಿಸಿಲ್ಲ. ಎಸ್‌ಐಟಿಗೆ 15 ದಿನಗಳ ಕಾಲ ವಶಕ್ಕೆ ನೀಡುವ ಅಗತ್ಯವೇ ಇಲ್ಲ ಎಂದು ಪ್ರಜ್ವಲ್ ಪರ ವಕೀಲ ಅರುಣ್ ಬಲವಾಗಿ ವಾದ ಮಂಡಿಸಿದರು. ವಾದ-ಪ್ರತಿವಾದ ಆಲಿಸಿದ ನ್ಯಾಯಾಧೀಶರು, ಜೂನ್ 6ರವರೆಗೆ ಎಸ್‌ಐಟಿ ಕಸ್ಟಡಿಗೆ ನೀಡಿ ಆದೇಶಿಸಿದರು.

ಇದಕ್ಕೂ ಮುನ್ನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂಧನಕ್ಕೊಳಗಾದ ಪ್ರಜ್ವಲ್ ರೇವಣ್ಣ ಅವರನ್ನು ರಾತ್ರಿ ಸಿಐಡಿ ಕಚೇರಿ ಆವರಣದಲ್ಲಿರುವ ಎಸ್‌ಐಟಿ ಸೆಲ್‌ನಲ್ಲಿ ಇರಿಸಲಾಗಿತ್ತು. ವಶಕ್ಕೆ ಪಡೆದ ನಂತರ ಅಧಿಕಾರಿಗಳು ಅವರನ್ನು ಯಾವುದೇ ವಿಚಾರಣೆಗೆ ಒಳಪಡಿಸಲಿಲ್ಲ, ಅವರು ವಿದೇಶದಿಂದ ಬಂದ ಉಡುಪಿನಲ್ಲೇ ಬೌರಿಂಗ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ವೈದ್ಯಕೀಯ ತಪಾಸಣೆಗೆ ಒಳಪಡಿಸಲಾಯಿತು.

ವೈದ್ಯಕೀಯ ವರದಿ ಕೈತಲುಪಿದ ತಕ್ಷಣ ಪೊಲೀಸರು ಅವರನ್ನು ಬಿಗಿ ಬಂದೋಬಸ್ತ್‌ನಲ್ಲಿ ನಗರದ 42ನೇ ಎಸಿಎಂಎಂ ನ್ಯಾಯಾಧೀಶರ ಮುಂದೆ ಹಾಜರುಪಡಿಸಿದರು. ಪ್ರಜ್ವಲ್ ಪ್ರಬಲ ರಾಜಕೀಯ ಕುಟುಂಬದಿಂದ ಬಂದವರು ಮತ್ತು ಹಾಸನ ಲೋಕಸಭಾ ಕ್ಷೇತ್ರವನ್ನು ಪ್ರತಿನಿಧಿಸುವವರು. ಹೀಗಾಗಿ ಸಿಐಡಿ ಕಚೇರಿ ಆವರಣ ಮತ್ತು ಬೌರಿಂಗ್ ಆಸ್ಪತ್ರೆಯಲ್ಲಿ ಪೊಲೀಸ್ ಸರ್ಪಗಾವಲು ಹಾಕಲಾಗಿತ್ತು.

ನ್ಯಾಯಾಲಯದ ಹೊರ ಆವರಣದಲ್ಲಿ ಭಾರೀ ಜನಜಂಗುಳಿಯಿತ್ತು. ಪ್ರಜ್ವಲ್‌ನ ಹಾಜರುಪಡಿಸುವ ವೇಳೆ ನ್ಯಾಯಾಲಯ ಪ್ರವೇಶಿಸುವ ರಸ್ತೆಯನ್ನು ಬ್ಲಾಕ್ ಮಾಡಲಾಗಿತ್ತು. ವಿಚಾರಣೆ ಸಂದರ್ಭದಲ್ಲೂ ನ್ಯಾಯಾಲಯ ಕಿಕ್ಕಿರಿದು ತುಂಬಿತ್ತು. ಅಲ್ಲದೆ, ನ್ಯಾಯಾಲಯದ ಹೊರಗೂ ಜನರು ಕಿಕ್ಕಿರಿದು ಸೇರಿದ್ದರು.

ವಿಶೇಷವೆಂದರೆ ಪ್ರಜ್ವಲ್ ಅವರನ್ನು ಮಹಿಳಾ ಪೊಲೀಸ್ ಅಧಿಕಾರಿಗಳೇ ಬಂಧಿಸಿದ್ದಲ್ಲದೆ, ವೈದ್ಯಕೀಯ ಪರೀಕ್ಷೆ ಮತ್ತು ನ್ಯಾಯಾಲಯಕ್ಕೆ ಹಾಜರುಪಡಿಸುವ ಕೆಲಸವನ್ನೂ ಮಾಡಿದರು.

ಶುಕ್ರವಾರ ಮುಂಜಾನೆ ಜರ್ಮನಿಯ ಮ್ಯೂನಿಚ್‌ನಿಂದ ಬೆಂಗಳೂರು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಪ್ರಜ್ವಲ್ ಅವರನ್ನು ಭದ್ರತಾ ಸಿಬ್ಬಂದಿ ಹಾಗೂ ವಲಸೆ ಅಧಿಕಾರಿಗಳು, ನಿರ್ಗಮನದ ದ್ವಾರದಲ್ಲಿದ್ದ ಎಸ್‌ಐಟಿಯ ಐಪಿಎಸ್ ಅಧಿಕಾರಿ ಸುಮನ್ ಪನ್ನೇಕರ್ ನೇತೃತ್ವದ ತಂಡಕ್ಕೆ ಒಪ್ಪಿಸಿದರು. ಭದ್ರತಾ ಸಿಬ್ಬಂದಿಯಿಂದ ವಶಕ್ಕೆ ಪಡೆಯುವ ಮುನ್ನ ಅಧಿಕಾರಿ ಪನ್ನೇಕರ್, ಆರೋಪಿ ಪ್ರಜ್ವಲ್ ಅವರಿಗೆ ವಾರೆಂಟ್ ತೋರಿಸಿ ವಶಕ್ಕೆ ತೆಗೆದುಕೊಂಡು, ನಂತರ ಅವರನ್ನು ಪೊಲೀಸ್ ಜೀಪಿನಲ್ಲಿ ಕೂರಿಸಲಾಯಿತು. ಈ ಸಂದರ್ಭದಲ್ಲಿ ಅಕ್ಕ-ಪಕ್ಕ ಹಾಗೂ ಹಿಂದೆ-ಮುಂದೆ ಮಹಿಳಾ ಪೊಲೀಸ್ ಅಧಿಕಾರಿಗಳೇ ಇದ್ದರು.

ಪ್ರಕ್ರಿಯೆ ಮುಗಿದ ನಂತರ ಪ್ರಜ್ವಲ್ ಬಂಧನವಾಗಿದೆ

ಅವರ ವಿಚಾರಣೆ ನಡೆಸುವುದು ಸೇರಿದಂತೆ ಎಲ್ಲ ಪ್ರಕ್ರಿಯೆಗಳನ್ನು ಅನುಸರಿಸಲಾಗುವುದು. ಸ್ವಾಭಾವಿಕವಾಗಿ ಅವರು ಬಂಧನಕ್ಕೆ ಸಹಕರಿಸಬೇಕಿತ್ತು. ಅವರು ರಾಜತಾಂತ್ರಿಕ ಪಾಸ್‌ಪೋರ್ಟ್ ಹೊಂದಿದ್ದರಿಂದ, ಎಲ್ಲ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿದ ನಂತರವೇ ಅವರನ್ನು ಬಂಧಿಸಲಾಯಿತು ಎಂದರು. ಈಗ ಪ್ರಜ್ವಲ್‌ನನ್ನು ಬಂಧಿಸಿರುವ ಹಿನ್ನೆಲೆಯಲ್ಲಿ ಇನ್ನಷ್ಟು ಸಂತ್ರಸ್ತರು ಮುಂದೆ ಬರುವಂತೆ ಸರ್ಕಾರ ಮನವಿ ಮಾಡಲಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಅವರಿಂದ ತೊಂದರೆ ಅನುಭವಿಸಿದವರು ಮುಂದೆ ಬಂದು ಎಸ್‌ಐಟಿ ಮತ್ತು ಪೊಲೀಸರಿಗೆ ದೂರು ನೀಡುವಂತೆ ಮತ್ತು ನಾವು ಅವರಿಗೆ ಎಲ್ಲ ರೀತಿಯ ರಕ್ಷಣೆಯನ್ನು ಒದಗಿಸುತ್ತೇವೆ ಎಂದು ನಾವು ಈಗಾಗಲೇ ಹೇಳಿದ್ದೇವೆ. ಮುಂದಿನ ಬೆಳವಣಿಗೆಗಳನ್ನು ನಾವು ಕಾದು ನೋಡಬೇಕಾಗಿದೆ ಎಂದು ಅವರು ತಿಳಿಸಿದರು.

ತನಿಖಾ ಪ್ರಕ್ರಿಯೆಯಲ್ಲಿ 'ಸ್ತ್ರೀಶಕ್ತಿ' ಪ್ರದರ್ಶನ!

ಲಗ್ಗೇಜ್ ಸಾಗಿಸುವ ಕಾರ್ಯದಲ್ಲಿ ನಿರತವಾಗಿತ್ತು. ಜೊತೆಗೆ ಪ್ರಜ್ವಲ್ ಅವರನ್ನು ಪೊಲೀಸ್ ವಾಹನದ ಬಳಿಗೆ ಕರೆದೊಯ್ಯುವ ಕೆಲಸವನ್ನಷ್ಟೇ ನಿರ್ವಹಿಸಿದರು.

ನಂತರ ಏರ್‌ಪೋರ್ಟ್‌ನಿಂದ ಎಸ್‌ಐಟಿ ಕಚೇರಿಗೆ ಪ್ರಜ್ವಲ್‌ನನ್ನು ಕರೆದೊಯ್ದ ವಾಹನದಲ್ಲಿ ಚಾಲಕನನ್ನು ಹೊರತುಪಡಿಸಿದರೆ, ಚಾಲಕನ ಎಡ ಭಾಗದ ಸೀಟ್‌ನಲ್ಲಿ ಮಹಿಳಾ ಅಧಿಕಾರಿ, ಮಧ್ಯದ ಶೀಟ್‌ನಲ್ಲಿ ಪ್ರಜ್ವಲ್ ಎರಡೂ ಬದಿಯಲ್ಲೂ ಮಹಿಳಾ ಸಿಬ್ಬಂದಿ ಹಾಗೂ ಹಿಂದಿನ ಸೀಟ್‌ನಲ್ಲಿ ಇಬ್ಬರು ಮಹಿಳಾ ಸಿಬ್ಬಂದಿ ಆಸೀನರಾಗಿದ್ದರು.

ಪ್ರಜ್ವಲ್‌ರನ್ನು ವೈದ್ಯಕೀಯ ತಪಾಸಣೆಗಾಗಿ ಕರೆದೊಯ್ದ ವಾಹನದಲ್ಲೂ ಓರ್ವ ಮಹಿಳಾ ಅಧಿಕಾರಿ ಹಾಗೂ ಇಬ್ಬರು ಮಹಿಳಾ ಸಿಬ್ಬಂದಿ ಇದ್ದರೆ, ಆಸ್ಪತ್ರೆ ಬಳಿ ಬಂದೋಬಸ್ತ್‌ಗಾಗಿ ಮಾತ್ರ ಪುರುಷ ಸಿಬ್ಬಂದಿಯನ್ನು ಬಳಸಿಕೊಳ್ಳಲಾಗಿತ್ತು. ಇಂದು ಅವರನ್ನು ನ್ಯಾಯಾಲಯಕ್ಕೆ ಕರೆತಂದ ವಾಹನದಲ್ಲೂ ಮಹಿಳಾ ಪೊಲೀಸರದ್ದೇ ಕಾರುಬಾರು. ಅದು ಮಾತ್ರವಲ್ಲದೇ, ಪ್ರಜ್ವಲ್‌ರನ್ನು ನ್ಯಾಯಾಲಯದ ಆವರಣದಿಂದ ಕೋರ್ಟ್ ಹಾಲ್‌ಗೆ ಕರೆದೊಯ್ಯುವಾಗಲೂ ಪ್ರಜ್ವಲ್ ಅವರ ಎರಡೂ ಬದಿ ಹಾಗೂ ಮುಂಭಾಗದಲ್ಲಿ ಮಹಿಳಾ ಪೊಲೀಸರೇ ಇದ್ದರು. ನ್ಯಾಯಾಧೀಶರ ಮುಂದೆಯೂ ಮಹಿಳಾ ಪೊಲೀಸರೇ ಪ್ರಜ್ವಲ್‌ರನ್ನು ಹಾಜರುಪಡಿಸಿದ ನಂತರ ಎಸ್‌ಐಟಿ ಕಚೇರಿಗೆ ಕರೆದೊಯ್ಯುವ ಮೂಲಕ 'ಸ್ತ್ರೀಶಕ್ತಿ' ಮೆರೆದರು.

ಇಷ್ಟೆಲ್ಲಾ ಸ್ತ್ರೀಶಕ್ತಿ ಪ್ರದರ್ಶನದ ಬಗ್ಗೆ ಹಲವಾರು ರೀತಿಯಲ್ಲಿ ಚರ್ಚೆಗಳಾಗುತ್ತಿವೆ. ಇತ್ತೀಚೆಗೆ ತಮಿಳುನಾಡಿನಲ್ಲಿ ಖ್ಯಾತ ಯೂಟ್ಯೂಬರ್‌ಗಳಾದ ಸವುಕ್ಕು ಶಂಕರ್ ಮತ್ತು ಫಿಲಿಕ್ಸ್ ಜೆರಾಲ್ಡ್ ಅವರು ಮಹಿಳೆಯರ ಬಗ್ಗೆ ಅವಹೇಳನಕಾರಿಯಾದ ಹೇಳಿಕೆಗಳನ್ನು ನೀಡಿದ್ದ ಆರೋಪದಡಿ ಬಂಧಿಸಲ್ಪಟ್ಟಾಗ ಅವರ ತನಿಖಾ ಪ್ರಕ್ರಿಯೆಯಲ್ಲೂ ಸಂಪೂರ್ಣ ಮಹಿಳಾ ಸಿಬ್ಬಂದಿ ತೊಡಗಿದ್ದರು. ಮಹಿಳೆಯರನ್ನು ಅವಮಾನಿಸಿದ ಇವರಿಗೆ ಮಹಿಳಾ ಶಕ್ತಿ ಪ್ರದರ್ಶಿಸುವ ಮೂಲಕ ಸಂದೇಶವೊಂದನ್ನು ನೀಡಿದ್ದರು. ಈ ಆರೋಪಿಗಳು ಇನ್ನೂ ಜೈಲಿನಲ್ಲೇ ಇದ್ದು ಪ್ರತಿ ಬಾರಿಯೂ ಅವರನ್ನು ಮಹಿಳಾ ಪೊಲೀಸರೇ ನ್ಯಾಯಾಲಯಕ್ಕೆ ಕರೆತರುತ್ತಿದ್ದಾರೆ ಎಂಬುದನ್ನು ಉಲ್ಲೇಖಿಸುತ್ತಿರುವ ಕೆಲವು ನಿವೃತ್ತ ಪೊಲೀಸ್ ಅಧಿಕಾರಿಗಳು, ಪ್ರಜ್ವಲ್ ರೇವಣ್ಣ ಪ್ರಕರಣದಲ್ಲೂ ಸಂತ್ರಸ್ತೆಯರಿಗೆ ನೈತಿಕ ಸ್ಥೈರ್ಯದ ಸಂದೇಶ ಸಾರುವ ನಿಟ್ಟಿನಲ್ಲಿ ಈ ಒಂದು ಪ್ರಯೋಗ ನಡೆಯುತ್ತಿರಬಹುದು ಎಂದು ಅಭಿಪ್ರಾಯಿಸಲಾಗುತ್ತಿದೆ.

ವಾರಾಣಸಿಯಲ್ಲಿ ಮೋದಿ ಭವಿಷ್ಯ ನಿರ್ಧಾರ

ಏ. 19ರಿಂದ ಆರಂಭವಾದ ಒಟ್ಟು ಏಳು ಹಂತಗಳ 2024ರ ಲೋಕಸಭಾ ಚುನಾವಣೆಗೆ ಶನಿವಾರ ನಡೆಯುವ 7ನೇ ಹಂತದ ಮತದಾನದೊಂದಿಗೆ ತೆರೆ ಬೀಳಲಿದೆ. ಜೂನ್ 4ರಂದು ಮತ ಎಣಿಕೆ ನಡೆಯುವ ಮೂಲಕ ಮತದಾರರ ಆಯ್ಕೆ ಯಾರು ಎಂಬುದು ನಿರ್ಧಾರವಾಗಲಿದೆ. ಈ ಬಾರಿ ಚುನಾವಣೆಯ ಮೊದಲ ಆರು ಹಂತಗಳಲ್ಲಿ ಕ್ರಮವಾಗಿ ಶೇ 66.14, ಶೇ 66.71, ಶೇ 65.68, ಶೇ 69.16, ಶೇ 62.2 ಹಾಗೂ ಶೇ 63.36ರಷ್ಟು ಮತದಾನವಾಗಿದೆ ಎಂದು ಚುನಾವಣಾ ಆಯೋಗ ಹೇಳಿದೆ. ಈವರೆಗೂ ನಡೆದಿರುವ ಆರು ಹಂತಗಳ ಮತದಾನದಲ್ಲಿ 28 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶ ಸೇರಿ 486 ಕ್ಷೇತ್ರಗಳ ಮತದಾನ ಪೂರ್ಣಗೊಂಡಿದೆ. ಇವುಗಳೊಂದಿಗೆ ಆಂಧ್ರಪ್ರದೇಶ, ಅರುಣಾಚಲ ಪ್ರದೇಶ ಹಾಗೂ ಸಿಕ್ಕಿಂ ವಿಧಾನಸಭೆಗೂ ಮತದಾನ ಪೂರ್ಣಗೊಂಡಿದೆ ಇವುಗಳ ಮತ ಎಣಿಕೆಯೂ ಜೂನ್ 4ರಂದೇ ನಡೆಯಲಿದೆ. ಚುನಾವಣಾ ಆಯೋಗದ ಮಾರ್ಗಸೂಚಿಯಂತೆ ಜೂನ್ 1ರಂದು ಸಂಜೆ 6.30ರ ನಂತರ ಚುನಾವಣೋತ್ತರ ಮತಗಟ್ಟೆ ಸಮೀಕ್ಷೆಯನ್ನು ಮಾಧ್ಯಮಗಳು ಪ್ರಸಾರ ಮಾಡಬಹುದಾಗಿದೆ.

ಆತ್ಮಹತ್ಯೆ ಪ್ರಕರಣ ತನಿಖೆಗೆ ಎಸ್‌ಐಟಿ ರಚನೆ

ಎಸ್‌ಐಟಿ ವರದಿಯನ್ನಾಧರಿಸಿಯೇ ಸಚಿವ ನಾಗೇಂದ್ರ ವಿರುದ್ಧ ಕ್ರಮ ಕೈಗೊಳ್ಳಲು ನಿರ್ಧರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ರಾಜ್ಯ ವಾಲ್ಮೀಕಿ ಅಭಿವೃದ್ಧಿ ನಿಗಮದ ಬೆಂಗಳೂರು ಕಚೇರಿಯಲ್ಲಿ ಅಧೀಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದ ಚಂದ್ರಶೇಖರ್ (52) ಅವರು ಶಿವಮೊಗ್ಗದ ವಿನೋಬ ನಗರದ ಕೆಂಚಪ್ಪ ಲೇಔಟ್ ಬಳಿಯಿರುವ ತಮ್ಮ ನಿವಸದಲ್ಲಿ ಮೇ 26ರಂದು ಆತ್ಮಹತ್ಯೆ ಮಾಡಿಕೊಂಡಿದ್ದರು.

ತಮ್ಮ ಸಾವಿಗೆ ಕಾರಣರಾಗಿದ್ದಾರೆ ಎನ್ನಲಾದವರ ಹೆಸರು ಮತ್ತು ನಿಗಮದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಬಗ್ಗೆ ಡೆತ್‌ನೋಟ್‌ನಲ್ಲಿ ಅವರು ಉಲ್ಲೇಖಿಸಿದ್ದರು. ಶಿವಮೊಗ್ಗ ಜಿಲ್ಲೆಯವರಾದ ಇವರು ಬೆಂಗಳೂರಿನಿಂದ ಮೇ 25 ರಂದು ನಗರಕ್ಕೆ ಬಂದಿದ್ದರು. ಮೇ 26ರಂದು ಪತ್ನಿ ಕವಿತಾ ಮತ್ತಿತರರು ಮತ್ತೊಬ್ಬರ ಅಂತ್ಯಸಂಸ್ಕಾರದಲ್ಲಿ ಭಾಗವಹಿಸಲು ಮಾಚೇನಹಳ್ಳಿಗೆ ತೆರಳಿದ್ದ ವೇಳೆ ಚಂದ್ರಶೇಖರ್ ನೇಣುಹಾಕಿಕೊಂಡು ಆತ್ಮಹತ್ಯೆಗೆ ಶರಣಾಗಿದ್ದರು ಎಂದು ಪೊಲೀಸರು ತಿಳಿಸಿದ್ದರು.

ವಿಧಾನಪರಿಷತ್ ಚುನಾವಣೆ ಮತ ಎಣಿಕೆ ಸಿಬ್ಬಂದಿಗೆ ತರಬೇತಿ

ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸಿ: ಸಿಬ್ಬಂದಿಗೆ ಪ್ರಾದೇಶಿಕ ಆಯುಕ್ತ ಡಾ. ಪ್ರಕಾಶ್ ಸೂಚನೆ



ಮೈಸೂರು, ಮೇ 31(ಆರ್‌ಕೆ)- ಕರ್ನಾಟಕ ವಿಧಾನಪರಿಷತ್ ಚುನಾವಣೆ ಮತ ಎಣಿಕೆ ಕಾರ್ಯಕ್ಕೆ ನಿಯೋಜನೆಗೊಂಡಿರುವ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಇಂದು ಮೈಸೂರಿನ ಪ್ರಾದೇಶಿಕ ಆಯುಕ್ತರ ಕಚೇರಿ ಸಭಾಂಗಣದಲ್ಲಿ ತರಬೇತಿ ನೀಡಲಾಯಿತು.

ದಕ್ಷಿಣ ಶಿಕ್ಷಕರ ಕ್ಷೇತ್ರ, ನೈರುತ್ಯ ಪದವೀಧರರ ಕ್ಷೇತ್ರ, ನೈರುತ್ಯ ಶಿಕ್ಷಕರ ಕ್ಷೇತ್ರಗಳ ಚುನಾವಣಾಧಿಕಾರಿಗಳಾದ ಪ್ರಾದೇಶಿಕ ಆಯುಕ್ತ ಡಾ. ಜಿ.ಸಿ. ಪ್ರಕಾಶ್ ಮತ ಎಣಿಕೆ ಪ್ರಕ್ರಿಯೆ, ಅನುಸರಿಸಬೇಕಾದ ಕ್ರಮಗಳ ಬಗ್ಗೆ ಸಿಬ್ಬಂದಿಗೆ ತರಬೇತಿ ನೀಡಿದರು.

ಜೂನ್ 3ರಂದು ಮತದಾನ ನಡೆಯಲಿದ್ದು, ಜೂನ್ 6ರಂದು ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನಲ್ಲಿ ಮೂರೂ ಕ್ಷೇತ್ರಗಳ ಚುನಾವಣಾ ಮತ ಎಣಿಕೆ ನಡೆಯುವುದರಿಂದ ಎಚ್ಚರಿಕೆಯಿಂದ ಕರ್ತವ್ಯ ನಿರ್ವಹಿಸುವಂತೆಯೂ ಅವರು ತಿಳಿಸಿದರು.

ಮತ ಎಣಿಕೆ ಕೇಂದ್ರದ ಮೂರು ಕಡೆ ತಲಾ ಒಂದೊಂದು ಕ್ಷೇತ್ರದ ಎಣಿಕೆ ಕಾರ್ಯಕ್ಕೆ 14 ಟೇಬಲ್‌ಗಳನ್ನು ಅಳವಡಿಸಲಾಗಿದ್ದು, ಪ್ರಾಶಸ್ತ್ಯದ ಮತವಾದ್ದರಿಂದ ಕೋಟಾ ತಲುಪದಿದ್ದರೆ, ಎಲಿಮಿನೇಷನ್ ರೌಂಡ್‌ನಲ್ಲಿ 2ನೇ ಪ್ರಾಶಸ್ತ್ಯದ ಮತಗಳನ್ನು ಸೇರಿಸುತ್ತಾ ಹೋಗಿ ಕೋಟಾ ತಲುಪಿದಾಗ ಆ ಅಭ್ಯರ್ಥಿಯ ಉಳಿದ ಮತಗಳ ಎಣಿಕೆಯನ್ನು ಸ್ಥಗಿತಗೊಳಿಸಬೇಕು ಎಂದು ಡಾ. ಪ್ರಕಾಶ್ ತಿಳಿಸಿದರು.

ಇದು ಬ್ಯಾಲೆಟ್ ಪೇಪರ್ ಮತದಾನ ಪ್ರಕ್ರಿಯೆ ಆಗಿದ್ದು, ಅದರ ವ್ಯಾಲಿಡ್ ಮತ್ತು ಇನ್‌ವ್ಯಾಲಿಡ್ ಮತಪತ್ರದ ಬಗ್ಗೆ ಬ್ಯಾಲೆಟ್ ಪೇಪರ್‌ಗಳನ್ನು ಯಾವ ರೀತಿ ತೆರೆಯಬೇಕು, ಯಾವುದು ವ್ಯಾಲಿಡ್, ಯಾವುದು ವ್ಯಾಲಿಡ್ ಅಲ್ಲ ಎಂಬುದನ್ನು ಯಾವ ರೀತಿ ಗುರುತಿಸಬೇಕು. ಸಂಖ್ಯೆಗಳನ್ನು ಯಾವ ರೀತಿ ಕೊಡಬೇಕು, ಯಾವುದನ್ನು ರಿಜೆಕ್ಷನ್ ಮಾಡಬೇಕು ಎಂಬುದು ಬಗ್ಗೆ ಮಾಹಿತಿ ನೀಡಿದ ಅವರು, ಇದು ಬಹಳ ಸುಲಭದ ಕೆಲಸವಾಗಿದ್ದು, ಮತ ಪತ್ರ ಎಣಿಕೆ ಮಾಡಿ 25 ಬ್ಯಾಲೆಟ್ ಪೇಪರ್‌ಗಳ ಒಂದು ಬಂಡಲ್ ಮಾಡಿ, ಅದರಲ್ಲಿ ಮೊದಲ ಆದ್ಯತೆಯ ಬ್ಯಾಲೆಟ್ ಪೇಪರ್‌ಗಳನ್ನು ಬೇರ್ಪಡಿಸಿ ಕೊಡಬೇಕು ಎಂದು ತಿಳಿಸಿದರು.

ಪ್ರಾದೇಶಿಕ ಕಚೇರಿಯ ಸಹಾಯಕ ಚುನಾವಣಾಧಿಕಾರಿಗಳಾದ ಕವಿತಾ ರಾಜಾರಾಂ ಅವರು ಮಾತನಾಡಿ, ಚುನಾವಣೆಯ ದಿನ ಬೆಳಗ್ಗೆ 8 ಗಂಟೆಗೆ ಮತ ಎಣಿಕೆ ಪ್ರಕ್ರಿಯೆ ಪ್ರಾರಂಭವಾಗಲಿದ್ದು, ಕಡ್ಡಾಯವಾಗಿ ನಿಮ್ಮ ಐಡಿ ಕಾರ್ಡ್‌ಗಳನ್ನು ಧರಿಸಿ ಕಾರ್ಯ ನಿರ್ವಹಿಸಬೇಕು ಎಂದರು.

ಮತಗಟ್ಟೆಯ ಕ್ಷೇತ್ರಗಳ ಬಳಿ ಕೌಂಟಿಂಗ್ ಸೂಪರ್‌ವೈಸರ್, ಕೌಂಟಿಂಗ್ ಅಸಿಸ್ಟೆಂಟ್ಸ್, ಕೌಂಟಿಂಗ್ ಏಜೆಂಟ್ಸ್‌ಗಳಿಗೆ ಮಾತ್ರ ಪ್ರವೇಶ ನೀಡಬೇಕು. ತರಬೇತುದಾರರು ಮತಗಟ್ಟೆ ಒಳಗೆ ಮೊಬೈಲ್ ಅನ್ನು ತೆಗೆದುಕೊಂಡು ಹೋಗುವಂತಿಲ್ಲ ಹಾಗೂ ಚುನಾವಣಾಧಿಕಾರಿಗಳ ಸಲಹೆ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವಂತೆಯೂ ಅವರು ತಿಳಿಸಿದರು.

ವಿವಿಧ ಕ್ಷೇತ್ರದ ಶ್ರಮಿಕರಿಗೆ ಕಾಯಕಯೋಗಿ ಪ್ರಶಸ್ತಿ ಪ್ರದಾನ



ಮೈಸೂರು ಕನ್ನಡ ವೇದಿಕೆ ವತಿಯಿಂದ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ ಕಾಯಕಯೋಗಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮೈಸೂರು, ಮೇ 31(ಎಂಟಿವೈ)- ಬಸವ ಜಯಂತಿ ಹಾಗೂ ಕಾರ್ಮಿಕ ದಿನಾಚರಣೆಯ ಹಿನ್ನೆಲೆಯಲ್ಲಿ ಮೈಸೂರು ಕನ್ನಡ ವೇದಿಕೆ ವತಿಯಿಂದ ವಿವಿಧ ಕ್ಷೇತ್ರಗಳಲ್ಲಿನ ಶ್ರಮಿಕರಿಗೆ ಕಾಯಕಯೋಗಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮೈಸೂರಿನ ಸುಬ್ಬರಾಯನಕೆರೆ ಆವರಣದ ಸ್ವಾತಂತ್ರ್ಯ ಹೋರಾಟಗಾರರ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪಾಪಯ್ಯ(ಚಪ್ಪಲಿ ಹೊಲಿಯುವವರು), ಜವರಪ್ಪ(ಗಾರೆ ಕೆಲಸದ ಮೇಸ್ತ್ರಿ), ಮಣಿಕಂಠ (ವಿಶೇಷ ಚೇತನ) ಮೆಕ್ಯಾನಿಕ್ ಕೆಲಸ), ಎಂ.ಎನ್.ಕಿರಣ್(ಪತ್ರಕರ್ತ), ಮಂಜುಳಾ (ಸೌಂದರ್ಯ ತಜ್ಞೆ), ಆರ್.ಲಕ್ಷ್ಮಿ (ಪೌರಕಾರ್ಮಿಕರು), ಎನ್.ಜಿ ಹರೀಶ್(ಟೈಲರ್), ಯೋಗೇಶ್ (ಟೈಲ್ಸ್ ಕೆಲಸ), ಸ್ವಾಮಿ ಆಚಾರಿ(ಮರಗೆಲಸ) ಅವರಿಗೆ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಕಾಯಕಯೋಗಿ ಪ್ರಶಸ್ತಿ ನೀಡಿ ಸನ್ಮಾನಿಸಿದರು.

ಇದೇ ವೇಳೆ ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದ ಬಳಿಕ ಸಿ.ನಾರಾಯಣಗೌಡ ಮಾತನಾಡಿ, ಅಸಂಘಟಿತ ವಲಯದಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ ಕಾಯಕಯೋಗಿ ಪ್ರಶಸ್ತಿ ನೀಡಿ ಗೌರವಿಸಿರುವುದು ಶ್ಲಾಘನೀಯ. ದೇಶದಲ್ಲಿ ಲಕ್ಷಾಂತರ ಮಂದಿ ಅಸಂಘಟಿತ ಕಾರ್ಮಿಕರಿದ್ದಾರೆ. ಹೋಟೆಲ್ ಉದ್ಯಮಗಳಲ್ಲಿ ಹೆಚ್ಚಿನ ಸಂಖ್ಯೆಯ ಇಂತಹ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಜೀವನಕ್ಕಾಗಿ ಯಾವುದೇ ಕೆಲಸ ಮಾಡಿದರೂ ಅದು ಶ್ರೇಷ್ಠ ವೃತ್ತಿಯೇ ಆಗಿರುತ್ತದೆ. ಯಾವ ಕೆಲಸವೂ ಮೇಲಲ್ಲ, ಯಾವ ಕೆಲಸವೂ ಕೀಳಲ್ಲ. ಬಸವಣ್ಣನವರು ಹೇಳಿದಂತೆ ಕಾಯಕವೇ ಕೈಲಾಸ ಎಂಬಂತೆ ನಾವು ಮಾಡುವ ಕೆಲಸವನ್ನು ಶ್ರದ್ಧೆಯಿಂದ ಮಾಡಬೇಕು. ಆಗ ಮಾತ್ರ ಮುಂದಿನ ದಿನಗಳಲ್ಲಿ ಕಾರ್ಮಿಕನೂ ಒಂದು ದಿನ ಮಾಲೀಕನಾಗುತ್ತಾನೆ. 'ಉದ್ಯೋಗ ಮಾಡು, ಉದ್ಯೋಗ ಕೊಡು' ನಾಣ್ಣುಡಿಯಂತೆ ಪ್ರತಿಯೊಬ್ಬರೂ ಯಾವುದೇ ಕೆಲಸದಲ್ಲೂ ಶ್ರದ್ಧೆಯಿಂದ ದುಡಿಯಬೇಕು ಆ ಮೂಲಕ ಸಾಧನೆ ಮಾಡಬೇಕು ಎಂದು ಸಲಹೆ ನೀಡಿದರು.

ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್. ಬಾಲಕೃಷ್ಣ ಮಾತನಾಡಿ, ಈ ವರ್ಷವೂ ಕಾಯಕ ಯೋಗಿಗಳನ್ನು ಗುರುತಿಸಿ ಸನ್ಮಾನಿಸಿ, ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ. ಎಲ್ಲಾ ಕ್ಷೇತ್ರಗಳಲ್ಲೂ ಶ್ರಮಿಕರು ಹಾಗೂ ಕಾರ್ಮಿಕರ ಶ್ರಮಕ್ಕೆ ಮಹತ್ವವಿದೆ. ಈ ಹಿನ್ನೆಲೆಯಲ್ಲಿ ಇಂದು ಕಾಯಕ ವೃತ್ತಿ ಮಾಡುವವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಇದೊಂದು ಸಾರ್ಥಕ ಕಾರ್ಯಕ್ರಮ. ಎಲೆಮರೆ ಕಾಯಿಯಂತೆ ಸೇವೆ ಸಲ್ಲಿಸುತ್ತಿರುವವರಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಪ್ರಶಸ್ತಿ ನೀಡಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮೈಸೂರು ಕನ್ನಡ ವೇದಿಕೆಯ ಪದಾಧಿಕಾರಿಗಳಾದ ನಾಲಾಬೀದಿ ರವಿ, ಬೋಗಾದಿ ಸಿದ್ದೇಗೌಡ, ಗುರುಬಸಪ್ಪ, ಪ್ಯಾಲೇಸ್ ಬಾಬು, ಗೋಪಿ, ಬೀಡಾ ಬಾಬು, ಮದನ್, ಕಾವೇರಮ್ಮ, ಮಾಲಿನಿ, ಎಲ್‌ಐಸಿ ಸಿದ್ದಪ್ಪ, ಭವಾನಿ ಇನ್ನಿತರರು ಉಪಸ್ಥಿತರಿದ್ದರು.

ಕಾಂಗ್ರೆಸ್ ಹಿರಿಯ ನಾಯಕ ಶಾಮನೂರು ಶಿವಶಂಕರಪ್ಪ ಆಸ್ಪತ್ರೆಗೆ ದಾಖಲು



ದಾವಣಗೆರೆ: ಕಾಂಗ್ರೆಸ್ ಹಿರಿಯ ನಾಯಕ ಶಾಮನೂರು ಶಿವಶಂಕರಪ್ಪ ಅವರ ಆರೋಗ್ಯದಲ್ಲಿ ಏರುಪೇರಾದ ಹಿನ್ನೆಲೆಯಲ್ಲಿ ಅವರನ್ನು ದಾವಣಗೆರೆಯಲ್ಲಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ ಎಂದು ಹೇಳಲಾಗುತ್ತಿದೆ. ಕಾಂಗ್ರೆಸ್ ಹಿರಿಯ ರಾಜಕಾರಣಿ ಶಾಮನೂರು ಶಿವಶಂಕರಪ್ಪ ಅವರಿಗೆ 94 ವರ್ಷ ವಯಸ್ಸಾಗಿದ್ದು, ಕಫದ ಸಮಸ್ಯೆಯಿಂದ ಬಳಲುತ್ತಿದ್ದರು. ಈ ಹಿನ್ನೆಲೆಯಲ್ಲಿ ಶುಕ್ರವಾರ ಬೆಳಗ್ಗೆ ತೀವ್ರ ಅಸ್ವಸ್ಥರಾಗಿದ್ದಾರೆ. ಹೆಚ್ಚುವರಿ ಚಿಕಿತ್ಸೆಗೆಂದು ನಗರದ ಎಸ್‌ಎಸ್ ಹೈಟೆಕ್ ಆಸ್ಪತ್ರೆಗೆ ದಾಖಲಿಸಲಾಗಿದ್ದು, ವೈದ್ಯರು ಹೆಚ್ಚಿನ ನಿಗಾ ವಹಿಸಿದ್ದಾರೆ ಎಂದು ತಿಳಿದುಬಂದಿದೆ.

ಆರೋಗ್ಯದಲ್ಲಿ ಚೇತರಿಕೆ: ಕಫದ ಸಮಸ್ಯೆಯಿಂದ ಅಸ್ವಸ್ಥರಾಗಿ ಶಾಮನೂರು ಅಸ್ಪತ್ರೆಗೆ ದಾಖಲಾಗಿದ್ದು, ಚಿಕಿತ್ಸೆ ಬಳಿಕ ಆರೋಗ್ಯದಲ್ಲಿ ಚೇತರಿಕೆಯಾಗಿದೆ. ಯಾವುದೇ ಭಯಪಡುವ ಅಗತ್ಯವಿಲ್ಲ ಎಂದು ಎಸ್‌ಎಸ್ ಆಸ್ಪತ್ರೆ ವೈದ್ಯರು ಮಾಹಿತಿ ನೀಡಿದ್ದಾರೆ.

ಡಾ. ಯತೀಂದ್ರರಿಗೆ ಎಂಎಲ್‌ಸಿ ಸ್ಥಾನಕ್ಕೆ ದೇವರ ಮೊರೆ: ವಿಶೇಷ ಪೂಜೆ



ಮೈಸೂರು, ಮೇ31(ಬಿಎಲ್‌ಯು) ಮಾಜಿ ಶಾಸಕ ಡಾ.ಯತೀಂದ್ರ ಅವರಿಗೆ ವಿಧಾನ ಪರಿಷತ್ ಸ್ಥಾನ ದೊರೆಯಲೆಂದು ಅಖಿಲ ಕರ್ನಾಟಕ ರಾಕೇಶ್ ಸಿದ್ದರಾಮಯ್ಯ ಅಭಿಮಾನಿಗಳ ಬಳಗದವರು ಮೈಸೂರಿನ ಕೊಲ್ಲಾಪುರ ದೇವಸ್ಥಾನದಲ್ಲಿ ಇಂದು ವಿಶೇಷ ಪೂಜೆ ಸಲ್ಲಿಸಿದರು.

ಈ ವೇಳೆ ಮಾತನಾಡಿದ ಬಳಗದ ಅಧ್ಯಕ್ಷ ವಿಶ್ವನಾಥ್, ಡಾ.ಯತೀಂದ್ರ ರಾಜಕೀಯಕ್ಕೆ ಬಂದ ಕಡಿಮೆ ಅವಧಿಯಲ್ಲಿ ಜನರ ವಿಶ್ವಾಸ ಗಳಿಸಿ ಶಾಸಕರಾಗಿ ಆಯ್ಕೆಯಾದರು. ತರುವಾಯ ತಂದೆಗಾಗಿ ಕ್ಷೇತ್ರ ತ್ಯಾಗ ಮಾಡಿದರು. ಈಗ ಡಾ.ಯತೀಂದ್ರರ ಸೇವೆ ಪರಿಗಣಿಸಿ, ಅವರನ್ನು ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆ ಮಾಡಬೇಕು ಎಂದು ಆಗ್ರಹಿಸಿದರು.

ಈ ವೇಳೆ ಬಳಗದ ಉಪಾಧ್ಯಕ್ಷ ರಮೇಶ್, ರಾಮಪ್ಪ, ದೇವಸ್ಥಾನದ ಅಧ್ಯಕ್ಷ ಎಂ.ನಾಗರಾಜ್, ಜಗದೀಶ್, ಜವರಪ್ಪ, ನಾಗರಾಜ್, ಶಾಂತಮ್ಮ, ದೇವಿಕಾ, ಭವ್ಯ ಇತರರು ಹಾಜರಿದ್ದರು.

ಮರಿತಿಬ್ಬೇಗೌಡರ ಪರ ಮುಡಾ ಅಧ್ಯಕ್ಷ ಮರೀಗೌಡ ಬಿರುಸಿನ ಪ್ರಚಾರ



ಮೈಸೂರು, ಮೇ31(ಬಿಎಲ್‌ಯು)- ಮೈಸೂರಿನ ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರ ಪರ ಇಂದು ಬಿರುಸಿನ ಪ್ರಚಾರ ಮಾಡಿದ ಮುಡಾ ಅಧ್ಯಕ್ಷ ಕೆ.ಮರಿಗೌಡ, ಕಾಂಗ್ರೆಸ್ ಸರ್ಕಾರ ಶಿಕ್ಷಣ ಕ್ಷೇತ್ರಕ್ಕೆ ನೀಡಿರುವ ಕೊಡುಗೆಗಳನ್ನು ಶಿಕ್ಷಕ ಮತದಾರರಿಗೆ ಮನವರಿಕೆ ಮಾಡಿಕೊಟ್ಟರು.

ಮೈಸೂರಿನ ನಾಗನಹಳ್ಳಿ, ಸಿದ್ದಲಿಂಗಪುರ, ಕೆ.ಆರ್.ಮಿಲ್, ಹಂಚ್ಯಾ, ಹೊಸಹುಂಡಿ, ಕಡಕೊಳ, ಶ್ರೀರಾಂಪುರ ಸೇರಿದಂತೆ ಹಲವು ಶಾಲೆಗಳಿಗೆ ಭೇಟಿ ನೀಡಿ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರನ್ನು ಬೆಂಬಲಿಸುವಂತೆ ಮನವಿ ಮಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಶಿಕ್ಷಕರಿಗೆ ಶೇಕಡ 30ರಷ್ಟು ವೇತನ ಹೆಚ್ಚಳ ಮಾಡಿದ್ದಾರೆ. ಈಗ 7 ನೇ ವೇತನ ಆಯೋಗದ ಮೂಲಕ ಮತ್ತಷ್ಟು ವೇತನ ಹೆಚ್ಚಳಕ್ಕೆ ಕ್ರಮ ಕೈಗೊಳ್ಳಲಿದ್ದಾರೆ. ಜೊತೆಗೆ ಹಳೆ ಪಿಂಚಣಿ ವ್ಯವಸ್ಥೆ ಮುಂದುವರೆಸುವುದಾಗಿ ಭರವಸೆ ನೀಡಿದ್ದಾರೆ. ಶಿಕ್ಷಕರ ಪರ ಹತ್ತು ಹಲವು ಕಾರ್ಯಕ್ರಮ ರೂಪಿಸಿರುವ ಕಾಂಗ್ರೆಸ್ ಬೆಂಬಲಿಸುವಂತೆ ಮರೀಗೌಡರು ಈ ವೇಳೆ ಶಿಕ್ಷಕರನ್ನು ಕೋರಿದರು.

ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರು 24 ವರ್ಷಗಳಿಂದ ಇದೇ ಕ್ಷೇತ್ರ ಪ್ರತಿನಿಧಿಸಿ ಶಿಕ್ಷಕರ ಪರವಾಗಿ ಸದನದ ಒಳಗೆ ಹಾಗೂ ಹೊರಗೆ ಹೋರಾಟ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಶಿಕ್ಷಕ ಮತದಾರರು ಕಾಂಗ್ರೆಸ್ ಅಭ್ಯರ್ಥಿಗೆ ಮೊದಲ ಪ್ರಾಶಸ್ತ್ಯ ಮತ ನೀಡಬೇಕೆಂದು ಮನವಿ ಮಾಡಿದರು.

ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷ ಬಿ.ಗುರುಸ್ವಾಮಿ, ಸತೀಶ್ ಕುಮಾರ್, 58 ನೇ ವಾರ್ಡ್‌ನ ಬಿ.ರವಿ, ಉಮಾಶಂಕರ್, ಮಹೇಶ್, ಅರ್ಜುನ್, ಲೋಹಿತ್, ಸುರೇಶ್, ಸುದರ್ಶನ್, ಸೋಮಣ್ಣ, ಕುಮಾರಸ್ವಾಮಿ ಸೇರಿ ಹಲವರು ಈ ವೇಳೆ ಹಾಜರಿದ್ದರು.

ಮರಿತಿಬ್ಬೇಗೌಡರ ಪರ ಎಂ.ಕೆ.ಸೋಮಶೇಖರ್ ಪ್ರಚಾರ



ಮೈಸೂರು, ಮೇ31(ಬಿಎಲ್‌ಯು)- ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರ ಪರ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಇಂದು ಬಿರುಸಿನ ಪ್ರಚಾರ ನಡೆಸಿದರು. ನಗರದ ನಜರ್‌ಬಾದ್‌ನ ಡಯಟ್, ಸರ್ಕಾರಿ ಶಿಕ್ಷಕರ ಮಹಾವಿದ್ಯಾಲಯ, ವಸಂತ್ ಮಹಲ್, ಬಾಸುದೇವ ಸೋಮಾನಿ ಕಾಲೇಜು, ಗುರುಕುಲ, ಜ್ಞಾನಗಂಗಾ ಶಾಲೆ ಸೇರಿದಂತೆ ಇತರೆಡೆ ಭೇಟಿ ನೀಡಿ ಮರಿತಿಬ್ಬೇಗೌಡರಿಗೆ ಮೊದಲ ಪ್ರಾಶಸ್ತ್ಯ ಮತ ನೀಡಬೇಕೆಂದು ಶಿಕ್ಷಕ ಮತದಾರರಲ್ಲಿ ಮನವಿ ಮಾಡಿದರು.

ಈ ವೇಳೆ ಚಂದ್ರಶೇಖರ್, ನಟೇಶ್, ತಮ್ಮಯ್ಯ, ಶಶಿಧರ್, ನಂಜುಂಡರಾಧ್ಯ, ಪುಷ್ಪಲತಾ, ಆಶಾ, ಉದಯಕುಮಾರ್, ರಾಮಚಂದ್ರ ಸೇರಿದಂತೆ ಇತರರು ಹಾಜರಿದ್ದರು.

ನಾಲ್ಕು ವರ್ಷ ನಮ್ಮದೇ ಸರ್ಕಾರ ಇರಲಿದ್ದು ಯಾವುದೇ ಸಮಸ್ಯೆ ಇದ್ದರೂ ನಮ್ಮ ಬಳಿಗೇ ಬರಬೇಕು ಎಂಬುದನ್ನು ಮರೆಯಬಾರದು

ಶಿಕ್ಷಕ ಮತದಾರರಿಗೆ ಕೆಪಿಸಿಸಿ ವಕ್ತಾರ ಎಂ. ಲಕ್ಷ್ಮಣ ಪರೋಕ್ಷ ಎಚ್ಚರಿಕೆ

ಮೈಸೂರು, ಮೇ31(ಬಿಎಲ್‌ಯು)- ಇನ್ನು ನಾಲ್ಕು ವರ್ಷ ಕಾಲ ಕಾಂಗ್ರೆಸ್ ಸರ್ಕಾರವೇ ಅಸ್ತಿತ್ವದಲ್ಲಿರಲಿದ್ದು ಶಿಕ್ಷಕರು ಯಾವುದೇ ಸಮಸ್ಯೆ ಇದ್ದರೂ ನಮ್ಮ ಬಳಿಗೇ ಬರಬೇಕು ಎಂಬುದನ್ನು ಮರೆಯಬಾರದು ಎಂದು ಹೇಳುವ ಮೂಲಕ ದಕ್ಷಿಣ ಶಿಕ್ಷಕರ ಕ್ಷೇತ್ರದ ಮತದಾರ ಶಿಕ್ಷಕರಿಗೆ ಕೆಪಿಸಿಸಿ ವಕ್ತಾರ ಎಂ. ಲಕ್ಷ್ಮಣ ಪರೋಕ್ಷ ಎಚ್ಚರಿಕೆ ನೀಡಿದ್ದಾರೆ.



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಶುಕ್ರವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಮಾತನಾಡಿದರು.

ನಗರದ ಕಾಂಗ್ರೆಸ್ ಭವನದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇನ್ನು ನಾಲ್ಕು ವರ್ಷಗಳ ಕಾಲ ನಮ್ಮ ಕಾಂಗ್ರೆಸ್ ಸರ್ಕಾರವೇ ಅಸ್ತಿತ್ವದಲ್ಲಿರುತ್ತದೆ. ಆದ ಕಾರಣ ಏನೇ ಬೇಡಿಕೆ, ಸಮಸ್ಯೆ ಇದ್ದರೂ ನಮ್ಮ ಬಳಿಯೇ ಬರಬೇಕು ಎಂಬುವುದನ್ನು ಶಿಕ್ಷಕ ಮತದಾರರು ಮರೆಯಬಾರದು. ಶಿಕ್ಷಕರು ಕಾಂಗ್ರೆಸ್ ಬೆಂಬಲಿಸಿದರೆ, ಕಾಂಗ್ರೆಸ್ ಸರ್ಕಾರ ಶಿಕ್ಷಕರಿಗೆ ಸಹಾಯ ಮಾಡಲಿದೆ ಎಂದು ಹೇಳಿದರು.

ನಮ್ಮ ಅಭ್ಯರ್ಥಿ ಸೈಲೆಂಟ್ ಎಂದು ಜೆಡಿಎಸ್ ಶಾಸಕರು ಸಮರ್ಥನೆ ಮಾಡಿಕೊಳ್ಳುತ್ತಾರೆ. ಆದರೆ ಚಿಂತಕರ ಚಾವಡಿಯಾಗಿರುವ ಮೇಲ್ಮನೆಯಲ್ಲಿ ದನಿ ಎತ್ತುವವರು ಬೇಕೆ ಹೊರತು ಸೈಲೆಂಟ್ ಆಗಿರುವವರು ಬೇಕಿಲ್ಲ ಎಂದು ತಿರುಗೇಟು ನೀಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಶಿಕ್ಷಕರಿಗೆ ಬಹಳಷ್ಟು ಕೊಡುಗೆ ನೀಡಿದ್ದಾರೆ. 6 ನೇ ವೇತನ ಆಯೋಗದ ವರದಿ ಜಾರಿಗೊಳಿಸಿದ್ದಾರೆ. ಇದರಿಂದ ವರ್ಷಕ್ಕೆ 14 ಸಾವಿರ ಕೋಟಿ ರೂ. ಹೊರೆಯಾದರೂ ಸರ್ಕಾರಿ ನೌಕರರಿಗೆ ಶೇಕಡ 30 ರಷ್ಟು ವೇತನ ಹೆಚ್ಚಳ ಮಾಡಿದ್ದಾರೆ. ಕುಮಾರ್ ನಾಯಕ್ ವರದಿ ಅನುಷ್ಠಾನ ಮಾಡಿ ವೇತನ ತಾರತಮ್ಯ ನಿವಾರಣೆ ಮಾಡಿದ್ದಾರೆ. ಇಷ್ಟೆಲ್ಲಾ ಅನುಕೂಲ ಮಾಡಿಕೊಟ್ಟಿರುವ ಕಾಂಗ್ರೆಸ್ ಸರ್ಕಾರವನ್ನು ಶಿಕ್ಷಕ ಮತದಾರರು ಬೆಂಬಲಿಸುವಂತೆ ಮನವಿ ಮಾಡಿದರು.

ಲೋಕಸಭಾ ಚುನಾವಣೆ ಮುಗಿದ ನಂತರ 7 ನೇ ವೇತನ ಆಯೋಗದ ವರದಿ ಜಾರಿಗೊಳಿಸುತ್ತಾರೆ. ಹಳೆ ಪಿಂಚಣಿ ನೀತಿ ಜಾರಿ ಮಾಡುತ್ತಾರೆ. ಇದನ್ನೆಲ್ಲಾ ಪರಿಗಣಿಸಿ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡನ್ನು ಬೆಂಬಲಿಸುಂತೆ ಕೋರಿದರು.

ವಿಧಾನ ಪರಿಷತ್ ಚುನಾವಣೆಯನ್ನು ಜೂನ್ ಎರಡನೇ ವಾರ ನಡೆಸಬೇಕು ಎಂದು ಚುನಾವಣಾ ಆಯೋಗಕ್ಕೆ ಮನವಿ ಮಾಡಿದ್ದೆವು. ಆದರೆ ಲೋಕಸಭಾ ಚುನಾವಣೆ ಸಂದರ್ಭದಲ್ಲೆ ವಿಧಾನ ಪರಿಷತ್ ಚುನಾವಣೆ ನಡೆಸಲಾಗುತ್ತಿದೆ. ಈ ವೇಳೆ ಶಿಕ್ಷಕ ಮತದಾರರು ಬೇರೆ ಕೆಲಸದಲ್ಲಿ ನಿರತರಾಗಿ ಮತದಾನದ ಪ್ರಮಾಣ ಕಡಿಮೆಯಾದರೆ ಚುನಾವಣಾ ಆಯೋಗವೇ ಇದಕ್ಕೆ ಹೊಣೆ ಎಂದು ಲಕ್ಷ್ಮಣ ಎಚ್ಚರಿಸಿದರು. ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಮಾಜಿ ಕಾರ್ಪೋರೇಟರ್ ಶಿವಣ್ಣ, ಭಾಸ್ಕರ್ ಗೌಡ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಟ್ರಾಕ್ಟರ್‌ಗೆ ಬೈಕ್ ಡಿಕ್ಕಿ: ಯುವಕ ಸಾವು

ಕುಶಾಲನಗರ, ಮೇ 31– ಮುಂದೆ ಹೋಗುತ್ತಿದ್ದ ಟ್ರಾಕ್ಟರ್‌ಗೆ ಹಿಂದಿನಿಂದ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಯುವಕ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಕೂಡುಮಂಗಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸುಂದರನಗರ ಗ್ರಾಮದಲ್ಲಿ ಶುಕ್ರವಾರ ನಡೆದಿದೆ.

ಚಿಕ್ಕತ್ತೂರು ಗ್ರಾಮದ ಮಹದೇವ್ ಅವರ ಪುತ್ರ ಶಿವಶಂಕರ್(22) ಮೃತಪಟ್ಟ ಕೂಲಿ ಕಾರ್ಮಿಕ. ಈತ ಬೈಕ್‌ನಲ್ಲಿ ಮನೆಗೆ ಹೋಗುತ್ತಿದ್ದಾಗ ನಿಯಂತ್ರಣ ತಪ್ಪಿ ಮುಂದೆ ಹೋಗುತ್ತಿದ್ದ ಟ್ರ್ಯಾಕ್ಟರ್‌ಗೆ ಹಿಂದಿನಿಂದ ಡಿಕ್ಕಿ ಹೊಡೆದಿದ್ದಾನೆ. ಪರಿಣಾಮ ತಲೆಗೆ ತೀವ್ರ ಪೆಟ್ಟು ಬಿದ್ದು ಸ್ಥಳದಲ್ಲೇ ಮೃತಪಟ್ಟಿದ್ದಾನೆ.

ಕುಶಾಲನಗರ ಸಂಚಾರಿ ಠಾಣೆ ಪೊಲೀಸರು ಸ್ಥಳ ಪರಿಶೀಲಿಸಿ, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ರಸ್ತೆ ಉಬ್ಬು ನಿರ್ಮಾಣಕ್ಕೆ ಆಗ್ರಹ: ಹಾರಂಗಿ ರಸ್ತೆಯಲ್ಲಿ ಉಬ್ಬು ಇಲ್ಲದೆ ಅಪಘಾತಗಳು ಸಂಭವಿಸುತ್ತಿರುವುದರಿಂದ ಸುಂದರನಗರದಲ್ಲಿ ರಸ್ತೆ ಉಬ್ಬು ನಿರ್ಮಿಸುವಂತೆ ಆಗ್ರಹಿಸಿ ಪೊಲೀಸ್ ಹಾಗೂ ಸಂಬಂಧಿಸಿದ ಇಲಾಖೆಗಳಿಗೆ ಗ್ರಾಮ ಪಂಚಾಯಿತಿಯಿಂದ ಮನವಿ ಸಲ್ಲಿಸಲಾಗಿತ್ತು. ಆದರೆ, ಈವರೆಗೂ ರಸ್ತೆ ಉಬ್ಬು ನಿರ್ಮಿಸಿಲ್ಲ ಎಂದು ಕೂಡುಮಂಗಳೂರು ಗ್ರಾಪಂ ಸದಸ್ಯ ಕೆ.ಬಿ. ಶಂಶುದ್ದೀನ್ ಅಸಮಾಧಾನ ವ್ಯಕ್ತಪಡಿಸಿದರು.

ಕೂಡಲೇ ಸುಂದರನಗರ ಹಾಗೂ ಹಾರಂಗಿ ರಸ್ತೆಯಲ್ಲಿ ಅಗತ್ಯವಿರುವ ಕಡೆಗಳಲ್ಲಿ ಉಬ್ಬು ನಿರ್ಮಿಸಿ, ಅಪಘಾತಗಳನ್ನು ತಪ್ಪಿಸಬೇಕು ಎಂದು ಒತ್ತಾಯಿಸಿದ್ದಾರೆ.

ಮುಂಗಾರು ಮಳೆ ಆರಂಭ ಹಿನ್ನೆಲೆ ಜಿಲ್ಲಾಡಳಿತ ಸಿದ್ಧತೆ



ಮಡಿಕೇರಿ, ಮೇ 31–ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆಯಂತೆ ಜೂನ್ ಮೊದಲ ವಾರ ಕೊಡಗಿಗೆ ಮುಂಗಾರು ಪ್ರವೇಶಿಸುವ ನಿರೀಕ್ಷೆ ಇದ್ದು, ಮಳೆಗಾಲವನ್ನು ಸಮರ್ಥವಾಗಿ ಎದುರಿಸಲು ಜಿಲ್ಲಾಡಳಿತದಿಂದ ಪೂರ್ವ ಸಿದ್ಧತೆ ಕೈಗೊಳ್ಳಲಾಗಿದೆ.

2018ರ ಮಳೆಗಾಲದ ಸಂದರ್ಭದಲ್ಲಿ ಜಿಲ್ಲೆಯಲ್ಲಿ ಪ್ರಕೃತಿ ವಿಕೋಪದಿಂದಾಗಿ ಸಂಭವಿಸಿದ ಭೂಕುಸಿತ ಮತ್ತು ನೆರೆ ಹಾವಳಿ ಪ್ರದೇಶಗಳ ಬಗ್ಗೆ ಜಿಯೋಲಾಜಿಕಲ್ ಸರ್ವೇ ಆಫ್ ಇಂಡಿಯಾ ವೈಜ್ಞಾನಿಕವಾಗಿ ಅಧ್ಯಯನ ನಡೆಸಿ ಸಂಭಾವ್ಯ ಅಪಾಯ ಸ್ಥಳಗಳು, ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಕುರಿತು ಜಿಲ್ಲಾಡಳಿತಕ್ಕೆ ವಿಸ್ತೃತ ವರದಿ ನೀಡಿದೆ.

ಇಂದು ಎನ್‌ಡಿಆರ್‌ಎಫ್ ಆಗಮನ

ಜೂ.1ರಂದು ಎನ್‌ಡಿಆರ್‌ಎಫ್ ತಂಡ ಜಿಲ್ಲೆಗೆ ಆಗಮಿಸಲಿದ್ದು, ಅಗ್ನಿ ಶಾಮಕ, ಗೃಹ ರಕ್ಷಕದಳ, ಪೊಲೀಸ್, ಸೆಸ್ಕ್, ಕಂದಾಯ, ಸ್ಥಳೀಯ ಗ್ರಾಮ ಪಂಚಾಯಿತಿ ಸೇರಿದಂತೆ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಈಗಾಗಲೇ ಸನ್ನದ್ಧ ಸ್ಥಿತಿಯಲ್ಲಿರಲು ಜಿಲ್ಲಾಡಳಿತ ನಿರ್ದೇಶನ ನೀಡಿದೆ.

ವಿಜ್ಞಾನಿಗಳು ನೀಡಿದ ವರದಿ ಆಧರಿಸಿ ಜಿಲ್ಲೆಯ 44 ವಲಯಗಳಲ್ಲಿ ಸಂಭವನೀಯ ಭೂ ಕುಸಿತ ಮತ್ತು 40 ವಲಯಗಳಲ್ಲಿ ನೆರೆ ಹಾವಳಿ ಪ್ರದೇಶವೆಂದು ಜಿಲ್ಲಾಡಳಿತ ಗುರುತಿಸಿದೆ. ಅಂತಹ ಪ್ರದೇಶಗಳಲ್ಲಿ ಅಗತ್ಯ ಮುಂಜಾಗ್ರತ ಕ್ರಮಗಳನ್ನು ಕೂಡ ಕೈಗೊಳ್ಳಲಾಗಿದೆ. ಅಪಾಯ ಪ್ರದೇಶಗಳಲ್ಲಿ ತಂಡಗಳನ್ನು ರಚಿಸಲಾಗಿದೆ. ಇಂತಹ ಪ್ರದೇಶಗಳ ಸಂತ್ರಸ್ತರನ್ನು ಸ್ಥಳಾಂತರಿಸಿ, ಸುರಕ್ಷಿತ ಶಾಲೆಗಳು ಮತ್ತು ಹಾಸ್ಟೆಲ್‌ಗಳ ಸಹಿತ ಅಂದಾಜು 100 ಕಾಳಜಿ ಕೇಂದ್ರಗಳನ್ನು ತೆರೆಯಲು ಯೋಜನೆ ರೂಪಿಸಲಾಗಿದೆ. ತಹಸೀಲ್ದಾರ್, ತಾಪಂ ಕಾರ್ಯನಿರ್ವಹಣಾಧಿಕಾರಿ, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಈ ಬಗ್ಗೆ ಸೂಚನೆ ನೀಡಲಾಗಿದೆ. ಭೂ ಕುಸಿತದಂತಹ ಸಂಭವಿಸುವ ಪ್ರದೇಶಗಳಲ್ಲಿ ಸ್ಥಳೀಯ ಅಧಿಕಾರಿಗಳು ನಿಗಾ ವಹಿಸಲಿದ್ದಾರೆ.

ಸರ್ಕಾರದ ವಿರುದ್ಧ ಬಿಜೆಪಿ ರೈತ ಮೋರ್ಚಾ ಪ್ರತಿಭಟನೆ

ಮಡಿಕೇರಿ, ಮೇ 31– ರಾಜ್ಯ ಸರ್ಕಾರ ರೈತರಿಗೆ ಉಚಿತ ದರದಲ್ಲಿ ಬಿತ್ತನೆ ಬೀಜ ವಿತರಿಸುವ ಬದಲು ಅದರ ದರಗಳನ್ನೇ ದುಪ್ಪಟ್ಟು ಮಾಡಿದೆ ಎಂದು ಆರೋಪಿಸಿ ಬಿಜೆಪಿ ರೈತ ಮೋರ್ಚಾ ಕಾರ್ಯಕರ್ತರು ನಗರದ ಜಂಟಿ ಕೃಷಿ ಇಲಾಖೆ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಸರ್ಕಾರ ರೈತ ವಿರೋಧಿ ನೀತಿ ಅನುಸರಿಸುತ್ತಿದ್ದು, ಉಚಿತ ಭಾಗ್ಯಗಳಿಗೆ ಹಣ ಹೊಂದಿಸಲು ರೈತರಿಗೆ ವಿತರಿಸುವ ಬಿತ್ತನೆ ಬೀಜಗಳ ದರ ಏರಿಕೆ ಮಾಡಿದೆ. ಸರ್ಕಾರದ ಖಜಾನೆ ಖಾಲಿಯಾಗಿದ್ದು, ಹಣ ಹೊಂದಿಸಲು ಅಗತ್ಯ ವಸ್ತುಗಳ ಬೆಲೆ ಏರಿಕೆ ಮೊರೆ ಹೋಗಿದೆ. ಕೇಂದ್ರ ಸರ್ಕಾರ ಬರ ಪರಿಹಾರ ಬಿಡುಗಡೆ ಮಾಡಿದ್ದರೂ, ರಾಜ್ಯ ಸರ್ಕಾರ ರೈತರ ಖಾತೆಗಳಿಗೆ ಅಲ್ಪ ಮೊತ್ತದ ಪರಿಹಾರ ವಿತರಿಸಿ ಕೈತೊಳೆದುಕೊಂಡಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.



ಮಡಿಕೇರಿ ಜಂಟಿ ಕೃಷಿ ಇಲಾಖೆ ಕಚೇರಿ ಎದುರು ಸರ್ಕಾರದ ವಿರುದ್ಧ ಬಿಜೆಪಿ ರೈತ ಮೋರ್ಚಾ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಸರ್ಕಾರ ಮುಂಗಾರಿನಲ್ಲಿ ಗುಣಮಟ್ಟದ ಬಿತ್ತನೆ ಬೀಜಗಳನ್ನು ರೈತರಿಗೆ ನೀಡುವ ಬದಲು ಕಳಪೆ ಮಟ್ಟದ ಬೀಜಗಳನ್ನು ವಿತರಿಸುತ್ತಿದೆ. ಇಂತಹ ಬೀಜಗಳಿಗೆ ದುಪ್ಪಟ್ಟು ದರವನ್ನು ವಿಧಿಸಿ ತನ್ನ ಖಜಾನೆ ತುಂಬಿಸಿಕೊಳ್ಳುತ್ತಿದೆ ಎಂದು ಆರೋಪಿಸಿದರು. ಕಿಸಾನ್ ಸಮ್ಮಾನ್ ನಿಧಿ, ರೈತರ ಮಕ್ಕಳ ವಿದ್ಯಾರ್ಥಿ ವೇತನವನ್ನೂ ತಡೆ ಹಿಡಿದೆ ಎಂದು ಸರ್ಕಾರದ ವಿರುದ್ಧ ಮಾಜಿ ಶಾಸಕ ಅಪ್ಪಚ್ಚು ರಂಜನ್ ಆಕ್ರೋಶ ವ್ಯಕ್ತಪಡಿಸಿದರು.

ಬಳಿಕ ಕೃಷಿ ಇಲಾಖೆ ಜಂಟಿ ನಿರ್ದೇಶಕರಿಗೆ ಮನವಿ ಸಲ್ಲಿಸಲಾಯಿತು. ವಿಧಾನ ಪರಿಷತ್ ಮಾಜಿ ಸದಸ್ಯ ಸುನೀಲ್ ಸುಬ್ರಮಣಿ, ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ಮಾಜಿ ಅಧ್ಯಕ್ಷ ರಾಬಿನ್ ದೇವಯ್ಯ ಮನು ಮುತ್ತಪ್ಪ, ರಾಜ್ಯ ರೈತ ಮೋರ್ಚಾದ ಪ್ರಮುಖರಾದ ಡಾ.ಬಿ.ಸಿ. ನವೀನ್, ನಗರಸಭಾ ಅಧ್ಯಕ್ಷೆ ಅನಿತಾ ಪೂವಯ್ಯ, ಸದಸ್ಯರಾದ ಮಹೇಶ್ ಜೈನಿ, ಉಮೇಶ್ ಸುಬ್ರಮಣಿ, ಪ್ರಮುಖರಾದ ಬಿ.ಕೆ.ಅರುಣ್ ಕುಮಾರ್, ಪಿ.ಎಂ.ರವಿ, ಡೀನ್ ಬೋಪಣ್ಣ, ಬಿ.ಪಿ.ಡಿಶು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಜಿಲ್ಲೆಯಲ್ಲಿ ಶಾಲಾ ಪ್ರಾರಂಭೋತ್ಸವ

- ವಿದ್ಯಾರ್ಥಿಗಳಿಗೆ ಗುಲಾಬಿ ಹೂ ನೀಡಿ ಸ್ವಾಗತ
- ಮೊದಲ ದಿನ ಬಿಸಿಯೂಟದಲ್ಲಿ ಪಾಯಸ



ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕ ಎಂ.ಚಂದ್ರ ಕಾಂತ್, ಬೋಯಿಕೇರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಭೇಟಿ ನೀಡಿ, ಮಕ್ಕಳಿಗೆ ಪಠ್ಯಪುಸ್ತಕ ಹಾಗೂ ಸಮವಸ್ತ್ರ ವಿತರಿಸಿದರು.

ಮಡಿಕೇರಿ: ಜಿಲ್ಲೆಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಪ್ರಾರಂಭೋತ್ಸವ ಅಂಗವಾಗಿ ಶುಕ್ರವಾರ ಶಾಲೆಗಳಲ್ಲಿ ತಳಿರು ತೋರಣ ಕಟ್ಟಿ, ಗುಲಾಬಿ ಹೂ ನೀಡಿ ವಿದ್ಯಾರ್ಥಿಗಳನ್ನು ಬರಮಾಡಿಕೊಳ್ಳಲಾಯಿತು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕ ಎಂ.ಚಂದ್ರಕಾಂತ್ ಅವರು ಬೋಯಿಕೇರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಭೇಟಿ ನೀಡಿ, ಮಕ್ಕಳಿಗೆ ಪಠ್ಯಪುಸ್ತಕ ಹಾಗೂ ಸಮವಸ್ತ್ರ ವಿತರಿಸಿದರು. ಶಾಲಾ ಆವರಣ, ಕೊಠಡಿ ಹಾಗೂ ಶೌಚಾಲಯ, ಸಂಪು, ಟ್ಯಾಂಕ್ ಸ್ವಚ್ಛತೆ, ಅಡುಗೆ ಮನೆಯಲ್ಲಿ ಶುಚಿತ್ವ ಕಾಪಾಡುವುದು, ಆಹಾರ ಧಾನ್ಯಗಳ ವ್ಯವಸ್ಥೆಯನ್ನು ಪರಿಶೀಲಿಸಿದರು. ಶಾಲೆ ಆರಂಭವಾದ ಶುಕ್ರವಾರ ಮಧ್ಯಾಹ್ನ ಬಿಸಿಯೂಟದಲ್ಲಿ ಪಾಯಸ ಬಡಿಸುವ ಮೂಲಕ ವಿದ್ಯಾರ್ಥಿಗಳಿಗೆ ಸಿಹಿ ವಿತರಿಸಲಾಯಿತು.

ಇದೇ ವೇಳೆ ಮಾತನಾಡಿದ ಚಂದ್ರಕಾಂತ್, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ನಿಗದಿಪಡಿಸಿರುವ ವೇಳಾಪಟ್ಟಿಯಂತೆ ಶಾಲಾ ತರಗತಿಗಳು ನಡೆಯಲಿವೆ. ಸೇತುಬಂಧ ಚಟುವಟಿಕೆ ಮತ್ತು ಮೂಲ ಕಲಿಕಾಂಶ ಆಧಾರಿತ ಕಲಿಕೆಯನ್ನು ಅನುಷ್ಠಾನಗೊಳಿಸಿ ಸಾಕ್ಷರತೆ ಮತ್ತು ಸಂಖ್ಯಾ ಜ್ಞಾನವನ್ನು ಅಭಿವೃದ್ಧಿ ಪಡಿಸಿ ಕಲಿಕಾ ಅಂತರವನ್ನು ನೀಗಿಸಲು ಸಲಹೆ ನೀಡಲಾಗಿದೆ ಎಂದರು.

ಶಿಕ್ಷಕರಿಗೆ ಶೈಕ್ಷಣಿಕ ಮಾರ್ಗದರ್ಶಿಯಂತೆ ಪಾಠ ಪ್ರವಚನ ಹಾಗೂ ಇತರೆ ಶೈಕ್ಷಣಿಕ ಚಟುವಟಿಕೆಗಳನ್ನು ಕೈಗೊಳ್ಳುವಂತೆ ಸಲಹೆ ಮಾಡಲಾಗಿದೆ. ಜೂ.1 ರಿಂದ 15ರವರೆಗೆ ಶಾಲಾ ದಾಖಲಾತಿ ಆಂದೋಲನ ನಡೆಯಲಿದ್ದು, ಮಕ್ಕಳು ಶಾಲೆಯಿಂದ ಹೊರಗುಳಿಯಬಾರದು ಎಂಬ ಉದ್ದೇಶದಿಂದ ಮನೆ ಮನೆಗೆ ಭೇಟಿ ನೀಡಿ, ಶಾಲಾ ದಾಖಲಾತಿ ಆಂದೋಲನ ನಡೆಯಲಿದೆ ಎಂದರು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಶಿಕ್ಷಣಾಧಿಕಾರಿ ಎಂ.ಮಹದೇವಸ್ವಾಮಿ ಅವರು ಕುಶಾಲನಗರದ ಸರ್ಕಾರಿ ವಿವಿಧ ಶಾಲೆಗಳಿಗೆ ಭೇಟಿ ನೀಡಿ, ಶಾಲಾ ಪ್ರಾರಂಭೋತ್ಸವದಲ್ಲಿ ಪಾಲ್ಗೊಂಡಿದ್ದರು. ಜಿಲ್ಲೆಯಲ್ಲಿ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಒಟ್ಟು 479 ಪ್ರಾಥಮಿಕ ಶಾಲೆ ಮತ್ತು 171 ಪ್ರೌಢಶಾಲೆಗಳು ಇವೆ ಎಂದು ಮಹದೇವಸ್ವಾಮಿ ಮಾಹಿತಿ ನೀಡಿದರು.

ಎತ್ತಿನ ಗಾಡಿಯಲ್ಲಿ ಶಾಲೆಗೆ ಬಂದ ಕೂಡುಮಂಗಳೂರು ವಿದ್ಯಾರ್ಥಿಗಳು



ಪ್ರಾರಂಭೋತ್ಸವ ಅಂಗವಾಗಿ ಮಕ್ಕಳು ಕೂಡುಮಂಗಳೂರು ಸರ್ಕಾರಿ ಶಾಲೆಗೆ ಎತ್ತಿನ ಗಾಡಿಯಲ್ಲಿ ಬಂದರು.

ಕುಶಾಲನಗರ: ಉತ್ತರ ಕೊಡಗು ಜಿಲ್ಲೆಯ ಕುಶಾಲನಗರ ತಾಲೂಕಿನ ಕೂಡುಮಂಗಳೂರು ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗೆ ಶುಕ್ರವಾರ ಮಕ್ಕಳು ಶಾಲಾ ಪ್ರಾರಂಭೋತ್ಸವ ಅಂಗವಾಗಿ ಎತ್ತಿನ ಗಾಡಿಯಲ್ಲಿ ಬಂದು ಸಂಭ್ರಮಿಸಿದರು.

ಎತ್ತಿನ ಗಾಡಿ ಏರಿದ ಮಕ್ಕಳು ಸರ್ಕಾರಿ ಶಾಲೆಗೆ ಹೋಗೋಣ ಬನ್ನಿ, ಸರ್ಕಾರಿ ಶಾಲೆ ನಮ್ಮ ಹೆಮ್ಮೆ, ಸರ್ಕಾರಿ ಶಾಲೆ ನಮ್ಮೂರ ಶಾಲೆ, ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸೋಣ ಬನ್ನಿ, 'ಶಿಕ್ಷಣವೇ ಶಕ್ತಿ' ಎಂಬಿತ್ಯಾದಿ ಘೋಷಣೆಗಳ ಫಲಕಗಳನ್ನು ಹಿಡಿದು ಶಾಲೆಗೆ ಆಗಮಿಸಿದರು. ಇದೇ ವೇಳೆ ಎತ್ತಿನ ಗಾಡಿಯ ಮೆರವಣಿಗೆಯಲ್ಲಿ ಆಗಮಿಸಿದ ಮಕ್ಕಳಿಗೆ ಶಿಕ್ಷಕರು ಹೂವು ಹಾಗೂ ಸಿಹಿ ವಿತರಿಸಿ ಸ್ವಾಗತಿಸಿ, ಶಾಲೆಗೆ ಬರಮಾಡಿಕೊಂಡರು.

ಗ್ರಾಮದ ಬಸವೇಶ್ವರ ದೇವಸ್ಥಾನದ ಮುಖ್ಯ ರಸ್ತೆ ಬಳಿ ಎತ್ತಿನಗಾಡಿಗೆ ಮೆರವಣಿಗೆಗೆ ಗ್ರಾಮದ ಹಿರಿಯರಾದ ಕೃಷಿಕ ಕೆ.ಎಸ್.ರಾಜಾಚಾರಿ ಚಾಲನೆ ನೀಡಿದರು. ಬಳಿಕ ಮುಖ್ಯ ಶಿಕ್ಷಕ ಟಿ.ಜಿ. ಪ್ರೇಮಕುಮಾರ್ ಎತ್ತಿನ ಗಾಡಿ ಮುನ್ನಡೆಸಿದರು. ಕೃಷಿಕ ಕೆ.ಆರ್.ನಾಗರಾಜ್ ಅವರ ಎತ್ತಿನಗಾಡಿಯಲ್ಲಿ ಸಾಗಿದ ಮಕ್ಕಳಿಗೆ ದಾರಿಯಲ್ಲಿ ಮಹಿಳೆಯರು ಆರತಿ ಬೆಳಗಿ ಸ್ವಾಗತಿಸಿದರು.

ಜಾನಪದ ಕಲಾವಿದ ಭರಮಣ್ಣ ಬೆಟಗೇರಿ ಪಠ್ಯಪುಸ್ತಕ ವಿತರಣೆಗೆ ಚಾಲನೆ ನೀಡಿದರು. ಎಸ್‌ಡಿಎಂಸಿ ಮಾಜಿ ಸದಸ್ಯ ಎಂ.ನಾಗರಾಜ್ ಹಾಗೂ ದಾನಿ ಕೆಎನ್.ಸೋಮಶೇಖರ್ ಮಕ್ಕಳಿಗೆ ಪಠ್ಯಪುಸ್ತಕ ಹಾಗೂ ಸಮವಸ್ತ್ರ ವಿತರಿಸಿದರು. ಎಸ್‌ಡಿಎಂಸಿ ಅಧ್ಯಕ್ಷ ಗಿರಿಪ್ರಸಾದ್, ಉಪಾಧ್ಯಕ್ಷೆ ಶಾಹಿದಾ, ಮಾಜಿ ಅಧ್ಯಕ್ಷ ಕೆ.ಕೆ.ಭೋಗಪ್ಪ, ಸದಸ್ಯೆ ಸುಮತಿ, ಮುಖ್ಯ ಶಿಕ್ಷಕಿ ಎಚ್.ಎಂ.ಸುಜಾತ, ಶಿಕ್ಷಕರಾದ ಕೆಗೋಪಾಲ ಕೃಷ್ಣ, ಎಂ.ಟಿ.ದಯಾನಂದ ಪ್ರಕಾಶ್, ಬಿ.ಎನ್. ಸುಜಾತ, ಬಿ.ಡಿ.ರಮ್ಯ, ಎಸ್.ಎಂ.ಗೀತಾ, ಬಿ.ಎಸ್. ಅನ್ನಿಲಾ ರೇಖಾ, ಕೆ.ಟಿ.ಸೌಮ್ಯ, ಪೋಷಕರು ಇದ್ದರು.

ಮೌಂಟ್ ಎವರೆಸ್ಟ್ ಏರಿದ ಕೊಡಗಿನ ಡಾ.ಲತಾ

ಮಡಿಕೇರಿ: ಅತ್ಯಂತ ಎತ್ತರದ ಶಿಖರ ಮೌಂಟ್ ಎವರೆಸ್ಟ್ ಅನ್ನು ಏರುವ ಮೂಲಕ ಕೊಡಗು ಮೂಲದ ಮಹಿಳೆಯೋರ್ವರು ಸಾಧನೆ ಮೆರೆದಿದ್ದಾರೆ.

ಸೋಮವಾರಪೇಟೆ ತಾಲೂಕಿನ ಆಲೂರು ಸಿದ್ದಾಪುರ ಬಳಿಯ ಬಡಬನಹಳ್ಳಿ ನಿವಾಸಿ, ಪ್ರಸ್ತುತ ಬೆಂಗಳೂರಿನಲ್ಲಿ ವೈದ್ಯರಾಗಿ ಸೇವೆ ಸಲ್ಲಿಸುತ್ತಿರುವ 57 ವರ್ಷದ ಡಾ.ಲತಾ ಅವರೇ ಮೌಂಟ್ ಎವರೆಸ್ಟ್ ಶಿಖರ ಏರುವ ಮೂಲಕ ಕೊಡಗಿಗೆ ಕೀರ್ತಿ ತಂದಿದ್ದಾರೆ. ಡಾ.ಲತಾ ಅವರು ಎವರೆಸ್ಟ್ ಬೇಸ್ ಕ್ಯಾಂಪ್‌ನಲ್ಲಿ ಪಾಲ್ಗೊಂಡು ಮೊದಲ ಹಂತದಲ್ಲೇ 18,514 ಅಡಿಗಳನ್ನು ಏರುವ ಮೂಲಕ ಗುರಿ ತಲುಪಿದ್ದಾರೆ.



ಎವರೆಸ್ಟ್ ಶಿಖರ ಏರಿದ ಡಾ.ಲತಾ.

ಜೂ.6ರಂದು ಚಿತ್ರಕಲಾ, ಪ್ರಬಂಧ ಸ್ಪರ್ಧೆ

ಚಾಮರಾಜನಗರ, ಮೇ 31– ವಿಶ್ವ ಬಾಲ ಕಾರ್ಮಿಕ ವಿರೋಧಿ ದಿನಾಚರಣೆ ಅಂಗವಾಗಿ ಜಿಲ್ಲಾಡಳಿತ, ಕಾರ್ಮಿಕ ಇಲಾಖೆ, ಜಿಲ್ಲಾ ಬಾಲ ಕಾರ್ಮಿಕ ಯೋಜನಾ ಸೊಸೈಟಿ ಹಾಗೂ ವಿವಿಧ ಇಲಾಖೆಗಳ ಸಹಯೋಗದಲ್ಲಿ ಜೂ.6ರಂದು ಬೆಳಗ್ಗೆ 11 ಗಂಟೆಗೆ ನಗರದ ಅಂಬೇಡ್ಕರ್ ಭವನದಲ್ಲಿ ವಿದ್ಯಾರ್ಥಿಗಳಿಗೆ ಚಿತ್ರಕಲಾ ಹಾಗೂ ಪ್ರಬಂಧ ಸ್ಪರ್ಧೆ ಏರ್ಪಡಿಸಲಾಗಿದೆ.

ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಬಾಲ ಕಾರ್ಮಿಕರ ಬವಣೆಗಳು ಕುರಿತು ಚಿತ್ರಕಲಾ ಸ್ಪರ್ಧೆ ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ಬಾಲ ಕಾರ್ಮಿಕರ ಪದ್ಧತಿ ನಿರ್ಮೂಲನೆಯಲ್ಲಿ ಸಾರ್ವಜನಿಕರ ಪಾತ್ರ ಕುರಿತು ಪ್ರಬಂಧ ಸ್ಪರ್ಧೆ ಏರ್ಪಡಿಸಲಾಗಿದೆ. ವಿಜೇತರಿಗೆ ಜೂ.12ರಂದು ನಡೆಯುವ ಕಾರ್ಯಕ್ರಮದಲ್ಲಿ ಬಹುಮಾನ ವಿತರಿಸಲಾಗುವುದು.

ಮಾಹಿತಿಗಾಗಿ ಜಿಲ್ಲಾ ಬಾಲ ಕಾರ್ಮಿಕ ಯೋಜನಾ ಸೊಸೈಟಿ ನಿರ್ದೇಶಕರ (ಮೊ.ಸಂ:9886164951)ನ್ನು ಸಂಪರ್ಕಿಸುವಂತೆ ಜಿಲ್ಲಾ ಬಾಲ ಕಾರ್ಮಿಕ ಯೋಜನಾ ಸೊಸೈಟಿ ಸದಸ್ಯ ಕಾರ್ಯದರ್ಶಿ ಹಾಗೂ ಜಿಲ್ಲಾ ಕಾರ್ಮಿಕ ಅಧಿಕಾರಿ ಎಂ.ಸವಿತಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೊಳ್ಳೇಗಾಲದಲ್ಲಿ ಅದ್ಧೂರಿ ಬಸವ ಜಯಂತಿ ಆಚರಣೆ



ಕೊಳ್ಳೇಗಾಲದಲ್ಲಿ ನಡೆದ ಬಸವ ಜಯಂತಿ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಜನರು.

ಕೊಳ್ಳೇಗಾಲ, ಮೇ 31–ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾದ ತಾಲೂಕು ಘಟಕ, ಬಸವ ಜಯಂತಿ ಮಹೋತ್ಸವ ಸಮಿತಿ ಮತ್ತು ವೀರಶೈವ–ಲಿಂಗಾಯತ ಸಂಘ ಸಂಸ್ಥೆಗಳ ಒಕ್ಕೂಟದ ವತಿಯಿಂದ ಶುಕ್ರವಾರ ಪಟ್ಟಣದಲ್ಲಿ ಬಸವೇಶ್ವರ ಜಯಂತಿಯನ್ನು ಅದ್ಧೂರಿಯಾಗಿ ಆಚರಿಸಲಾಯಿತು.

ಅಲಂಕರಿಸಿದ ರಥದ ಮೇಲೆ ಬಸವೇಶ್ವರ ಮೂರ್ತಿಯನ್ನು ಮೆರವಣಿಗೆ ಮಾಡಲಾಯಿತು. ಮಹದೇಶ್ವರಬೆಟ್ಟದ ಸಾಲೂರು ಮಠದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಆಲಹಳ್ಳಿ ಮಠಾಧ್ಯಕ್ಷರಾದ ಶ್ರೀ ಶಿವಕುಮಾರಸ್ವಾಮೀಜಿ, ಚಿಕ್ಕಿಂದುವಾಡಿ ಮಠದ ಶ್ರೀ ಬಾಲಷಡಕ್ಷರಿ ಸ್ವಾಮೀಜಿ ಪುಷ್ಪ ನಮನ ಸಲ್ಲಿಸುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು.

ಗುರುಕಾರ್ ವೃತ್ತ, ಡಾ.ರಾಜ್‌ಕುಮಾರ್ ರಸ್ತೆ, ಮಸೀದಿ ವೃತ್ತ, ಡಾ.ಅಂಬೇಡ್ಕರ್ ರಸ್ತೆ, ಸರ್ಕಲ್, ಎಡಿಬಿ ವೃತ್ತ, ನ್ಯಾಯಾಲಯದ ರಸ್ತೆ ಮಾರ್ಗವಾಗಿ ಜೆಎಸ್‌ಎಸ್ ಕಾಲೇಜು ಆವರಣದವರೆಗೆ ಬಸವ, ನಂದಿಕಂಬ, ವೀರಗಾಸೆ, ಗಾರುಡಿಗೊಂಬೆ ಕುಣಿತ, ಕೋಲಾಟ, ಮಂಗಳವಾದ್ಯದೊಂದಿಗೆ ಮೆರವಣಿಗೆ ನಡೆಸಲಾಯಿತು.

ಈ ವೇಳೆ ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಎಂ.ಆರ್.ಮಂಜುನಾಥ್, ಮಾಜಿ ಸಚಿವ ಎನ್.ಮಹೇಶ್, ಮಾಜಿ ಶಾಸಕರಾದ ಆರ್.ನರೇಂದ್ರ, ಪರಿಮಳಾ ನಾಗಪ್ಪ, ಬಾಲರಾಜು, ಮಾನಸ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಡಾ.ದತ್ತೇಶ್‌ಕುಮಾರ್, ಬಿಜೆಪಿ ಮುಖಂಡ ಪ್ರೀತನ್ ನಾಗಪ್ಪ, ಯುವ ಮುಖಂಡ ನಿಶಾಂತ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್, ಚಾಮುಲ್ ಅಧ್ಯಕ್ಷ ನಾಗೇಂದ್ರ, ನಿರ್ದೇಶಕ ನಂಜುಂಡಸ್ವಾಮಿ, ಶಿವಪುರ ಲೋಕೇಶ್, ತಾಪಂ ಮಾಜಿ ಅಧ್ಯಕ್ಷ ಮುರಡೇಶ್ವರ, ವೀರಶೈವ ಮಹಾಸಭಾ ಅಧ್ಯಕ್ಷ ಮಹದೇವಪ್ರಸಾದ್, ಮಲ್ಲೇಶಪ್ಪ, ಉಪ್ಪಾರ ನಿಗಮದ ಮಾಜಿ ಅಧ್ಯಕ್ಷ ಶಿವಕುಮಾರ್, ಕ್ರೈಸ್ತ ಸಮುದಾಯ ಅಧ್ಯಕ್ಷ ಸೆಲ್ವರಾಜು, ಬ್ರಾಹ್ಮಣ ಸಮುದಾಯದ ನರಸಿಂಹನ್, ದಲಿತ ಮುಖಂಡ ನಟರಾಜ ಮಾಳಿಗೆ, ಶಾಂತರಾಜು, ತಾಪಂ ಮಾಜಿ ಅಧ್ಯಕ್ಷ ಮುರಳಿ ಇನ್ನಿತರರು ಪಾಲ್ಗೊಂಡರು.

ಚಾ.ನಗರ ಜಿಲ್ಲೆಯ ಎಲ್ಲೆಡೆ ಶಾಲಾ ಮಕ್ಕಳ ಸಂಭ್ರಮ

ಶಾಲಾ ಪ್ರಾರಂಭೋತ್ಸವ ಅಂಗವಾಗಿ ವಿದ್ಯಾರ್ಥಿಗಳ ಮೆರವಣಿಗೆ, ಸಿಹಿ ವಿತರಣೆ



ನಾಗವಳ್ಳಿಯ ಪಿಎಂಶ್ರೀ ಸರ್ಕಾರಿ ಶಾಲಾ ಮಕ್ಕಳಿಗೆ ಡಿಡಿಪಿಐ ರಾಮಚಂದ್ರರಾಜೇ ಅರಸ್ ಸಮವಸ್ತ್ರ ಹಾಗೂ ಪಠ್ಯ ಪುಸ್ತಕ ವಿತರಿಸಿದರು.

ಚಾಮರಾಜನಗರ, ಮೇ 31–ಜಿಲ್ಲೆಯ ಎಲ್ಲೆಡೆ ಶುಕ್ರವಾರ ಶಾಲಾ ಪ್ರಾರಂಭೋತ್ಸವ ಅಂಗವಾಗಿ ಶಿಕ್ಷಕರು ಆಯಾ ಶಾಲೆಯನ್ನು ತಳಿರು ತೋರಣಗಳಿಂದ ಶೃಂಗರಿಸಿದರು. ಗ್ರಾಮದ ಪ್ರಮುಖ ಬೀದಿಗಳಲ್ಲಿ ಮಕ್ಕಳನ್ನು ಮೆರವಣಿಗೆ ನಡೆಸಿ, ಸಿಹಿ ಹಾಗೂ ಹೂ ನೀಡಿ ಸ್ವಾಗತಿಸಿದರು.

ತಾಲೂಕಿನ ನಾಗವಳ್ಳಿಯ ಪಿಎಂಶ್ರೀ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಶುಕ್ರವಾರ ಆಗಮಿಸಿದ ಮಕ್ಕಳನ್ನು ಸ್ವಾಗತಿಸಿ, ಬರಮಾಡಿಕೊಳ್ಳಲಾಯಿತು.

ಇದೇ ವೇಳೆ ಮಕ್ಕಳಿಗೆ ಸಮವಸ್ತ್ರ ಹಾಗೂ ಪಠ್ಯ ಪುಸ್ತಕ ವಿತರಿಸಿ ಮಾತನಾಡಿದ ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ ರಾಮಚಂದ್ರರಾಜೇ ಅರಸ್, ಶಾಲೆಯ ವಾತಾವರಣ, ಶುಚಿತ್ವ, ಮೂಲಸೌಕರ್ಯಕ್ಕೆ ಹೆಚ್ಚಿನ ಆದ್ಯತೆ ನೀಡಿರುವುದನ್ನು ಮೆಚ್ಚುಗೆ ವ್ಯಕ್ತಪಡಿಸಿದರು.

ಮುಖ್ಯ ಶಿಕ್ಷಕಿ ಎಂ.ಶಾಂತಿ ಮಾತನಾಡಿ, ಈ ಶಾಲೆ ಪಿಎಂಶ್ರೀ ಯೋಜನೆಯಡಿ ಆಯ್ಕೆಯಾಗಿದೆ. ಈ ವರ್ಷದಿಂದ ಎಲ್‌ಕೆಜಿ ತರಗತಿ ಆರಂಭಗೊಂಡಿದ್ದು, ಶಾಲೆ ಮೂಲಸೌಕರ್ಯ ಹೊಂದಿದೆ. ಜೊತೆಗೆ ಹಸಿರು ಶಾಲೆ ಎಂಬ ಕೀರ್ತಿ ಪಡೆದಿದೆ. ಪೋಷಕರು ಶಾಲೆಯ ಅಭಿವೃದ್ಧಿಗೆ ಸಹಕಾರ ನೀಡಬೇಕೆಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಡಯಟ್ ಹಿರಿಯ ಉಪನ್ಯಾಸಕಿ ಹೆಚ್. ಕಾತ್ಯಾಯಿಣಿ, ವಿಷಯ ಸಂಯೋಜಕ ಸಿದ್ದರಾಜು, ಬಿಆರ್‌ಪಿ ರಮೇಶ್, ಸಿಆರ್‌ಪಿಗಳಾದ ಸೋಮಣ್ಣ, ಕಿಟ್ಟು, ಶಿಕ್ಷಕರಾದ ರಾಜಮ್ಮ, ಎಸ್.ಗೀತಾ, ರಾಜೇಶ್ವರಿ, ಲೀಲಾವತಿ, ಸಿ.ಕುಮಾರ್, ಅಡುಗೆ ಸಹಾಯಕರು, ಪೋಷಕರು ಇದ್ದರು.

ಮೊದಲ ದಿನವೇ 17 ಮಕ್ಕಳು ದಾಖಲು

ಕೊಳ್ಳೇಗಾಲ, ಮೇ 31– ಶೈಕ್ಷಣಿಕ ಸಾಲಿನ ಶಾಲಾ ಪ್ರಾರಂಭೋತ್ಸವ ಮೊದಲ ದಿನವಾದ ಶುಕ್ರವಾರ ತಾಲೂಕಿನ ಕುಣಗಳ್ಳಿ ಸರ್ಕಾರಿ ಉನ್ನತಿಕರಿಸಿದ ಹಿರಿಯ ಪ್ರಾಥಮಿಕ ಶಾಲೆಗೆ 17 ಮಕ್ಕಳು 1ನೇ ತರಗತಿಗೆ ದಾಖಲಾದರು.

ಶಾಲೆಗೆ ಮಕ್ಕಳನ್ನು ಪೂರ್ಣಕುಂಭದೊಂದಿಗೆ ಸ್ವಾಗತಿಸಲಾಯಿತು. ನಂತರ ಗ್ರಾಮದ ಮುಖ್ಯರಸ್ತೆಯಲ್ಲಿ ಮಕ್ಕಳನ್ನು ಸರ್ಕಾರಿ ಶಾಲೆಗೆ ದಾಖಲಿಸಿ ಎಂಬ ಸಂದೇಶ ಸಾರುವ ಮೂಲಕ ಜಾಥಾ ನಡೆಸಲಾಯಿತು. ಮುಖ್ಯಶಿಕ್ಷಕ ರಾಜಣ್ಣ, ಶಿಕ್ಷಕರಾದ ನಾಗಲಾಂಬಿಕಾ, ವಾಣಿ, ಶಿವಶಾಂತಿ, ಶಾಂತಿ, ರವಿ, ಮಹದೇವಪ್ಪ, ಮಾಲರಸಿ, ಚಂದ್ರಮೋಹನ್, ಕೆಂಪರಾಜು, ಎಡಿಎಂಸಿ ಅಧ್ಯಕ್ಷ ಮಾದೇಶ್ ಇನ್ನಿತರಿದ್ದರು.



ಕುಣಗಳ್ಳಿ ಸರ್ಕಾರಿ ಶಾಲೆಗೆ ಮಕ್ಕಳನ್ನು ಪೂರ್ಣಕುಂಭದೊಂದಿಗೆ ಸ್ವಾಗತಿಸಲಾಯಿತು.

ಕನ್ನಡ ಶಲ್ಯ ಧರಿಸಿ ಆಗಮಿಸಿದ ಮಕ್ಕಳು

ಚಾಮರಾಜನಗರ: ಮೊದಲ ದಿನ ಶುಕ್ರವಾರ ತಾಲೂಕಿನ ಕರಡಿಮೋಳೆ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ಅಕ್ಷರ ಅಣತಿಯೊಡನೆ ಕನ್ನಡ ಶಲ್ಯವನ್ನು ಧರಿಸಿ ಮಕ್ಕಳು ಆಗಮಿಸಿದರು.

ವಿದ್ಯಾರ್ಥಿಗಳನ್ನು ಎಸ್‌ಡಿಎಂಸಿ ಅಧ್ಯಕ್ಷರು, ಸದಸ್ಯರು ಹಾಗೂ ಮುಖ್ಯ ಶಿಕ್ಷರು ಹಾಗೂ ಶಿಕ್ಷಕರು ಸಿಹಿ ನೀಡಿ ಸ್ವಾಗತಿಸಿದರು. ನಂತರ ವಿದ್ಯಾರ್ಥಿಗಳನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮೂಲಕ ಶಾಲಾ ದಾಖಲಾತಿ ಆಂದೋಲನ ನಡೆಸಿದರು. ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಸೇರಿಸಿ ಎಂಬ ಘೋಷಣೆ ಕೂಗುತ್ತ ಬೀದಿ ಬೀದಿಗಳಲ್ಲಿ ಜಾಥಾ ನಡೆಸಿದರು.

5 ವರ್ಷ 5 ತಿಂಗಳು ತುಂಬಿರುವ ಮಕ್ಕಳನ್ನು ಕಡ್ಡಾಯವಾಗಿ ಶಾಲೆಗೆ ಸೇರಿಸುವಂತೆ ಪೋಷಕರಿಗೆ ತಿಳಿಸಲಾಯಿತು.



ಚಾಮರಾಜನಗರ ತಾಲೂಕಿನ ಕರಡಿಮೋಳೆ ಸರ್ಕಾರಿ ಪ್ರಾಥಮಿಕ ಶಾಲೆಗೆ ಮಕ್ಕಳು ಅಕ್ಷರ ಅಣತಿಯೊಡನೆ ಕನ್ನಡ ಶಲ್ಯ ಧರಿಸಿ ಆಗಮಿಸಿದರು.

ಇದೇ ವೇಳೆ ಶಾಲಾ ಪ್ರಾರಂಭೋತ್ಸವ ಮತ್ತು ದಾಖಲಾತಿ ಆಂದೋಲನ ಅಂಗವಾಗಿ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ, ಸಮವಸ್ತ್ರಗಳನ್ನು ಎಸ್‌ಡಿಎಂಸಿ ಅಧ್ಯಕ್ಷೆ ಜ್ಯೋತಿ ಅಂಕೇಶ್ ಹಾಗೂ ಸದಸ್ಯರು ವಿತರಿಸಿದರು. ಕಾರ್ಯಕ್ರಮದಲ್ಲಿ ಎಸ್‌ಡಿಎಂಸಿ ಸದಸ್ಯರಾದ ಸುಮಿತ್ರ, ಚೈತ್ರ, ಮಂಜುಳಾ, ರಕ್ಷಿತಾ, ಮುಖ್ಯ ಶಿಕ್ಷಕರಾದ ಬಿ.ಎಸ್.ಲತಾ, ಸಹಶಿಕ್ಷಕ ಸೋಮಣ್ಣ ಹಾಜರಿದ್ದರು.

ಶಿಕ್ಷಕರು ಅರಿತು ಪಾಠ ಮಾಡಿದರೆ ಉತ್ತಮ ಫಲಿತಾಂಶ



ಚಂದಕವಾಡಿ ಪಬ್ಲಿಕ್ ಶಾಲೆಯಲ್ಲಿ ಡಿಡಿಪಿಐ ರಾಮಚಂದ್ರ ರಾಜೇಅರಸ್ ಮಕ್ಕಳನ್ನು ಸ್ವಾಗತಿಸಿದರು.

ಚಾಮರಾಜನಗರ: ಶಿಕ್ಷಕರು ಮಗುವನ್ನು ಅರಿತು ಪಾಠ ಮಾಡಿದರೆ ಉತ್ತಮ ಫಲಿತಾಂಶ ಬರುತ್ತದೆ. ಈ ನಿಟ್ಟಿನಲ್ಲಿ ಶಿಕ್ಷಕರು ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ರಾಮಚಂದ್ರ ರಾಜೇ ಅರಸ್ ಸಲಹೆ ನೀಡಿದರು.

ತಾಲೂಕಿನ ಚಂದಕವಾಡಿ ಪಬ್ಲಿಕ್ ಶಾಲೆಯಲ್ಲಿ ನಡೆದ ಶುಕ್ರವಾರ ಇ–ಕಲಿಕಾ ಕೇಂದ್ರದ ಉದ್ಘಾಟನೆ, ಶಾಲಾ ಪ್ರಾರಂಭೋತ್ಸವ ಮತ್ತು ದಾಖಲಾತಿ ಆಂದೋಲನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಚಂದಕವಾಡಿ ಶಾಲೆ ದೊಡ್ಡ ಶಾಲೆಯಾಗಿದೆ. ಇಲ್ಲಿಗೆ ಹಿಂದುಳಿದ ಮತ್ತು ಬಡವರ್ಗದ ಮಕ್ಕಳೇ ಹೆಚ್ಚಾಗಿ ಬರುತ್ತಿದ್ದಾರೆ. ಈ ಮಕ್ಕಳು ಸರ್ಕಾರಿ ಶಾಲೆಯನ್ನೇ ನಂಬಿದ್ದಾರೆ. ಹಾಗಾಗಿ ಶಾಲೆಯಲ್ಲಿ ಕೊರತೆ ಇದ್ದರೆ ತಕ್ಷಣ ಸಮಸ್ಯೆ ಬಗೆಹರಿಸಲಾಗುವುದು ಎಂದು ಭರವಸೆ ನೀಡಿದರು.

ಈ ಶಾಲೆಯನ್ನು ದತ್ತು ಮಾದರಿಯಲ್ಲಿ ಅಭಿವೃದ್ಧಿಪಡಿಸಲು ಗಮನ ಹರಿಸಲಾಗುವುದು. ಸರ್ಕಾರ ಆರಂಭದಲ್ಲೇ ಮಕ್ಕಳಿಗೆ ಯಾವುದೇ ಕೊರತೆಯಾಗದಂತೆ ಎರಡು ಜೊತೆ ಸಮವಸ್ತ್ರ, ಪಠ್ಯ ಪುಸ್ತಕ, ಶೂ, ಬಿಸಿಯೂಟ ನೀಡುತ್ತಿದೆ. ವಿದ್ಯಾರ್ಥಿಗಳು ನಿರಂತರವಾಗಿ ಶಾಲೆಗೆ ಬರಬೇಕು ಎಂದು ಮಕ್ಕಳಿಗೆ ಕಿವಿಮಾತು ಹೇಳಿದರು.

ಇದೇ ವೇಳೆ ಮಕ್ಕಳಿಗೆ ಗುಲಾಬಿ ಹೂ, ಚಾಕೊಲೇಟ್, ಜ್ಯೂಸ್, ಸಮವಸ್ತ್ರ, ಪಠ್ಯ ಪುಸ್ತಕ ನೀಡಿ ಶಾಲೆಗೆ ಬರಮಾಡಿಕೊಳ್ಳಲಾಯಿತು. ಪ್ರಾಂಶುಪಾಲ ಹೆಚ್.ಎನ್.ಸ್ವಾಮಿ, ಉಪಪ್ರಾಂಶುಪಾಲ ಚಂದ್ರಶೇಖರ, ಶಿಕ್ಷಕರ ಸಂಘದ ಕಾರ್ಯದರ್ಶಿ ಮಹೇಶ್, ಪ್ರಾಥಮಿಕ ಶಿಕ್ಷಕರ ಸಂಘದ ಅಧ್ಯಕ್ಷ ರಾಮಸ್ವಾಮಿ, ಬಿಆರ್‌ಪಿ ಮಹದೇವಯ್ಯ, ರಮೇಶ್, ಸಿಆರ್‌ಪಿ ಬಸವಣ್ಣ, ಶಾಂತಮೂರ್ತಿ, ಸುಬ್ರಹ್ಮಣ್ಯ, ಶಿವರಾಜು, ಎಂ.ಬಸವರಾಜು, ಮಹದೇವಸ್ವಾಮಿ, ಬಿ.ಶಿವಣ್ಣ, ಬಸವರಾಜು, ಕೆ.ಬಿ.ನಾಗರಾಜು, ನಾಗರತಮ್ಮ, ಶೈಲಾ, ಕೋಮಲಾ, ಶಾಲಾಭಿವೃದ್ಧಿ ಸಮಿತಿ ಸದಸ್ಯ ಮಲ್ಲು ಇದ್ದರು.

ಡಿಪ್ಲೋಮಾ ಪ್ರವೇಶಾತಿಗೆ ಅರ್ಜಿ ಆಹ್ವಾನ

ಕೊಳ್ಳೇಗಾಲ: ಚಿಲಕವಾಡಿ ಬೆಟ್ಟದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ಪ್ರಥಮ ವರ್ಷದ ಡಿಪ್ಲೋಮಾ ಪ್ರವೇಶಾತಿಗೆ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಸೂಕ್ತ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಬಹುದು. ಕಂಪ್ಯೂಟರ್ ಸೈನ್ಸ್ (ಸಿಎಸ್), ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್ (ಇಸಿ), ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ (ಇಇ) ಕೋರ್ಸ್‌ಗಳು ಲಭ್ಯವಿದ್ದು, ಮೊದಲು ಬಂದವರಿಗೆ ಆದ್ಯತೆ ಮೇರೆಗೆ ನೇರ ಪ್ರವೇಶ ನೀಡಲಾಗುವುದು.

ಮಾಹಿತಿಗೆ ಕೊಳ್ಳೇಗಾಲ ಚಿಲಕವಾಡಿ ಬೆಟ್ಟದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಅಥವಾ ಮೊ.ಸಂ: 9972014274, 7892023182 ಅನ್ನು ಸಂಪರ್ಕಿಸಬಹುದು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಉದ್ಯೋಗವಕಾಶದ ಸೆಮಿನಾರ್
ಪ್ರಖ್ಯಾತ ಬ್ಯಾಂಕ್ ಸಮೂಹದಿಂದ ರಾಜ್ಯ / ಕೇಂದ್ರ ಸರ್ಕಾರದಿಂದ ನಿವೃತ್ತರಾದವರು ಸ್ವಯಂ ನಿವೃತ್ತರು ಆಸಕ್ತ ಇರುವ ಗೃಹಿಣಿಯರು ಸ್ವಯಂ ಉದ್ಯೋಗಿಗಳಿಗೆ ಉದ್ಯೋಗವಕಾಶದ ಸೆಮಿನಾರ್ ವಿರ್ಪಡಿಸಲಾಗಿದೆ.
ವಿದ್ಯಾರ್ಹತೆ: 1) SSLC above any Degree ಮುಖ್ಯವಾದ ಅಂಶಗಳು 1) SSLC above 3) ಫೋಟೋ 4) ಆಧಾರ್ ಕಾರ್ಡ್ 5) ಬ್ಯಾಂಕ್ ಪಾಸ್ ಬುಕ್ 1st Page ತಪ್ಪದೇ ತರುವುದು.
Venue: ಹೋಟೆಲ್ ಮೌರ್ಯ ರೆಸಿಡೆನ್ಸಿ ಉಡ್‌ಲ್ಯಾಂಡ್ ಟಾಕೀಸ್ ಹತ್ತಿರ, ದಿನಾಂಕ: 03–06–2024 Time-11 AM, ಲಘು ಉಪಹಾರದ ವ್ಯವಸ್ಥೆ ಇದೆ.
9449068132, 7022034200

WANTED
COMPUTER TYPIST (Male / Female) FOR ADVOCATE OFFICE
Qualification: Typing - English & Kannada (Kan - Nudi / Baraha) in M.S. Word & Excel / Page Maker
9.30 am to 2 pm. Sunday: 10.30 to 3 pm. Salary: 10,000/- per month. For evening: (Male only). 6.30 pm to 11.30 pm. Salary: Rs. 10,000/- per month.
7349337469, 9448525072

MUDA ಸೈಟ್ ಮಾರಾಟಕ್ಕಿದೆ
ದಟ್ಟಗಳ್ಳಿ ರಿಂಗ್ ರೋಡ್ ಪಕ್ಕದ ವಿದ್ಯಾದೇವ್ ಏನ್ಕ್ಲೇವ್ ಬಡಾವಣೆಯಲ್ಲಿ 30'×50' ಅಳತೆಯ EAST ಫೇಸಿಂಗ್ ಸೈಟ್.
9886048471

SITE FOR SALE
30x40 West Face (Muda) Marimallappa Layout Near H.D. Devegowda Circle
9901313634

SITE FOR SALE
9.5X16.5 located at a prime Location close to KT Street behind Irwin road suitable for commerical purpose.
9886730361 (6pm to 9 pm)

Urgent site sale
in Muda Approved Belavadi village Telecom layout Ananda Sagara 30x40 & 60x40
JK 8951144240

MUDA ಸೈಟ್ ಮಾರಾಟಕ್ಕಿದೆ
ಲಲಿತಾದ್ರಿಪುರ ಲೇಔಟ್ ಪಕ್ಕದ "ಶ್ರೀಶಾ ಹಿಲ್ ವ್ಯೂ" ಬಡಾವಣೆಯಲ್ಲಿ 30'×50' ಅಳತೆಯ NORTH ಫೇಸಿಂಗ್ ಸೈಟ್.
9886048471

ಮನೆ ಮಾರಾಟಕ್ಕಿದೆ
ಬೋಗಾದಿಯಲ್ಲಿ 2 ರೂಮ್‌ಗಳುಳ್ಳ 30x40 ಅಳತೆಯ ಮನೆ ಸುಸಜ್ಜಿತ ಮನೆ ಮಾರಾಟಕ್ಕಿದೆ. 85 ಲಕ್ಷ (NEGOTIABLE) ಮಧ್ಯವರ್ತಿಗಳು ಅವಕಾಶವಿಲ್ಲ
9845193962
9620562731

RENT/LEASE
2BHK & 3BHK(Duplex) available for RENT/LEASE in Pragathi Dreams Near Paper Mill Circle, KRS Road.
9448609607
9243505812

ಸ್ಫೂರ್ತಿಧಾರೆ
ಸಂಪು ಕ್ಲೀನಿಂಗ್‌ಗೆ ಸಂಪರ್ಕಿಸಿ
Mob: 9108566022

WANTED SITES
At Bogadi Dattagalli Vijayanagara, Yelwala Mysore Bannur-TN Pura Road & Mysore Surrounding Quick Regn.
9538839926

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು/ಕಂಪ್ಯೂಟರ್ ಬಿಲ್ಲಿಂಗ್, ಕ್ಯಾಶಿಯರ್ಸ್ ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ:
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್
1. ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು
2. ಶಿಷ್ಯರಣಿ ಸ್ಕೂಲ್ ಹತ್ತಿರ, ಹೆಬ್ಬಾಳ್, ಮೈಸೂರು



ಸ್ಕೂಲ್ ಯೂನಿಫಾರಂ ಹೋಲ್‌ಸೇಲ್ ಬೆಲೆಯಲ್ಲಿ
JSS CKC CFTRI DMS
ಭಾವಸಾರ್ ಶ್ರೀಗಣೇಶ್
ಅಗ್ರಹಾರ, ಬಸವೇಶ್ವರ ರಸ್ತೆ 5ನೇ ಕ್ರಾಸ್, ಮೈಸೂರು

SURYA COACHING
Excellent coaching for 2nd PUC Commerce in Accounts, Statistics, Basic Maths etc. Low fees, Free coaching for poor students. Only 6 students per batch. 100% individual attention. Contact: Professor Sharma MSS
9901932751

ಸೈಟುಗಳು ಮಾರಾಟಕ್ಕಿದೆ
30x40 S/F, 52/A2E/F Corner, 58x60 N/E Corner, 50x80 E/F
ರಿಂಗ್ ರೋಡ್ ಹತ್ತಿರ ಯೂನಿವರ್ಸಿಟಿ ಲೇಔಟ್ ಎದುರು 30x40
30x50 ವರಕೂಡು ಹತ್ತಿರ,
30x40 ಶ್ರೀನಗರ ಹತ್ತಿರ
9900372792

ಸಂಪು
ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8880558064

ಸೈಟುಗಳು ಮಾರಾಟಕ್ಕಿವೆ
ಸುಲಭವಾಗಿ 15 ಕಂತುಗಳಲ್ಲಿ ಪಾವತಿಸಿ Govt ಹೈಸ್ಕೂಲ್ & ಕಾಲೇಜು ಹತ್ತಿರ Yelwala ನಂತರ
8050009696

SITE FOR SALE
20x30 site for sale in Bogadi 2nd stage
20X40 NEW DUPLEX HOUSE FOR SALE IN kouppllur near JP Nagar
9880344263

ಹೊಸ ಮನೆ ಮಾರಾಟಕ್ಕಿದೆ
ಮೈಸೂರು ನಗರದ ಅಶೋಕಪುರಂ 4ನೇ ಕ್ರಾಸ್ ಬಡಾವಣೆಯಲ್ಲಿರುವ 19x55 ಅಡಿಯಲ್ಲಿ ಕಟ್ಟಿರುವ 2BHK ಯ 2 ಇಂಡಿಪೆಂಡೆಂಟ್ ಆಗಿ ಸಪರೇಟ್ ಆಗಿರುವ ಹಾಗೂ ಕಾರ್ಪೋರೇಷನ್ ಖಾತೆ ಹಾಗೂ ಕ್ಲಿಯರ್ ಡಾಕ್ಯೂಮೆಂಟ್ ಹೊಂದಿರುವಂತೆ ಮನೆ ಮಾರಾಟಕ್ಕಿದೆ. ಈ ಮನೆಗೆ ಬ್ಯಾಂಕ್ ಸಾಲ ಸೌಲಭ್ಯ ಕೂಡ ಲಭ್ಯವಿದೆ.
9739780095
9113523954

Required Immediately candidates
10+ any languages M/F Salary 10k to 17k Prestigious Company
6366803708

WANTED
female graduates and NST or NTT trained teachers for montessori preschool in bogadi
9113257683

HOUSE FOR RENT
1st Floor Two Bed Room with Solar hot water Only Vegetarian Krishnamurty Layout T.K.Layout, 4th Stage
9741201142

ತಕ್ಷಣ ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಮಹಿಳೆಯರು ಹುಡುಗಿಯರು ಬೇಕಾಗಿದ್ದಾರೆ. ಸ್ಥಳ: ಕೆ.ಜಿ.ಕೊಪ್ಪಲ್ ಮತ್ತು ಹೆಬ್ಬಾಳ, ಮೈಸೂರು. ಸ್ಥಳೀಯರಿಗೆ ಆದ್ಯತೆ ಸಂಬಳ : 9000 ರಿಂದ ಆರಂಭ
9986311444
9986322444

ಇಂದೇ ಸಂಪರ್ಕಿಸಿ
ಮೈಸೂರಿನ ಪ್ರಸಿದ್ಧ ಆಫೀಸ್ ಶೋರೂಂ ಮತ್ತು ಕಂಪನಿಗಳಿಗೆ Packing, Helper, Quality, Maintenance, Cashier, Billing, Data Entry, Telecalling ಮುಂತಾದ ಕೆಲಸಗಳಿಗೆ 7th, 10th, PUC, ITI, Diplamo (Any Degree Pass / Fail) ಆದ ಯುವಕ/ಯುವತಿಯರು ಬೇಕಾಗಿದ್ದಾರೆ. ಸಂಬಳ 14500/- 39500/- (ESI+PF+OT) ಸೇರಿ T&C apply
9164052361
6364103418

FOR SALE
30x40 HOUSE West facing University Layout Mysore Brokers Excuse
9900268633

ವಿಶೇಷತೆ ಆರ್ಥೋಪೆಡಿಕ್ ಕ್ಲಿನಿಕ್
ಪಾದ ಮತ್ತು ಪಾದದ ಕೀಲಿನ ಸಮಸ್ಯೆಗಳಿಗೆ
ಭೇಟಿ ಕೊಡಿ : ಮಹಾವೀರ್ ಪಾದ ಮತ್ತು ಪಾದದ ಕೀಲಿನ ಸೆಂಟರ್ ನಂ. 926, ವಿಶ್ವಾಮಿತ್ರ ರಸ್ತೆ, ವಿವೇಕಾನಂದನಗರ, ವಿವೇಕಾನಂದ ವೃತ್ತ, ಮೈಸೂರು–23
ಪ್ರತಿ ಮಂಗಳವಾರ ಬೆ. 9 ರಿಂದ ಮ.12
ಫಿಸಿಯೋಥೆರಪಿ ಪ್ರತಿ ದಿನ ಸಂಜೆ 5.30PM-8PM
ಸಂದರ್ಶನಕ್ಕೆ ಕರೆ ಮಾಡಿ
7204080539, 0821-4000961
Main Clinic ಬೆಂಗಳೂರಿನಲ್ಲಿ

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಬೋಳು ತಲೆಯ ಸಮಸ್ಯೆಯೇ?



ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Aniketana Road, Kuvempunagar, Mysuru
MYSURU 9611028523 BANGALORE 9343142258

ಸುವರ್ಣ ಯಾತ್ರ
1) ನೇಪಾಳ ಮುಕ್ತಿನಾಥ, ಪಶುಪತಿನಾಥ, ಅಯೋಧ್ಯೆ, ಪೋಕ್ರ, ಕಠ್ಮಂಡು ಪ್ರವಾಸ, 9 ದಿನಗಳು 18–6–24 ಹಾಗೂ 12–7–24.
2) ಪುರಿ ಜಗನ್ನಾಥ್, ಕೋನಾರ್ಕ್, ಭುವನೇಶ್ವರ್ 4 ದಿನಗಳು 14–6–24.
9019462508, 9480843945

SITES for SALE
JP Nagar Ring Road
30 x 40 - 33 Lakhs, Near Gurur Bus Stop, Ramabainagar, Mysore.
DTCP approved (Corporation limits)
1.5 Kms from JP Nagar Ring Road
8660105902

ಹೊಸ ಮನೆ ಮಾರಾಟಕ್ಕಿದೆ
30x40, 3BHK ಪೂರ್ವ ದಿಕ್ಕು Italian Kitchen, TV Cabinete Wardrobe, Fall cilling ಒಳಗೊಂಡಿರುವ ಸುಸಜ್ಜಿತವಾದ ಮನೆ 100% ವಾಸ್ತು ಕಲ್ಪವೃಕ್ಷನಗರ, ಕೆಸರೆ 3ನೇ ಹಂತ
8095673991

ಸೈಟುಗಳು ಮಾರಾಟಕ್ಕಿವೆ
ಬಾಪೂಜಿ ನಗರ 40x60 W/F
ನಿವೇದಿತಾ ನಗರ ಪಾರ್ಕ್ ಹಿಂಭಾಗ
ಆನಂದನಗರ 30x40 N/F, S/F
ನಿವೇದಿತ ನಗರ 40x60 W/F
9945148025

ಸಂಪು
ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7304494854

ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್
ದಟ್ಟಗಳ್ಳಿ, ಮೈಸೂರು
ಬೇಕಾಗಿದ್ದಾರೆ
1. ಡ್ರೈವರ್ಸ್, 2) ಟ್ರಾನ್ಸ್‌ಪೋರ್ಟ್ ಮ್ಯಾನೇಜರ್ 3) ಹೌಸ್ ಕೀಪಿಂಗ್ ಮ್ಯಾನೇಜರ್
ಅನುಭವಕ್ಕೆ ತಕ್ಕಂತೆ ಆಕರ್ಷಕ ವೇತನ ನೀಡಲಾಗುವುದು.
9110851597

ಬಾಡಿಗೆಗೆ ದೊರೆಯುತ್ತದೆ
ಚಾಮುಂಡಿವನದಲ್ಲಿ ನಂ.04 ಉಳ್ಳ 10x12 ಅಳತೆಯ ಮಳಿಗೆ ಬಾಡಿಗೆಗೆ ದೊರೆಯುತ್ತದೆ.
ಸಂಪರ್ಕಿಸಬೇಕಾದ ವಿಳಾಸ: ಎಸ್.ಜಿ.ಡಿ.ಎಂ.ಟ್ರಸ್ಟ್ ಚಾಮುಂಡಿವನಂ, ವಿದ್ಯಾರಣ್ಯಪುರಂ, ಮೈಸೂರು
9448053321

30x40, E/F Duplex House For Sale Near KEB Junction, Dattagalli
9008267070

ಸಂಪು
ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

WANTED RESIDENT ENGLISH TEACHERS
Honorarium: 15,000 to 20,000/- + Veg food+accommodation
Divya Deepa Charitable Trust
Kenchalagudu, Mandavadi Road, Mysore-570008
9341369901
9538499901, 8088586087
www.divyadeepatrust.org

SITE FOR SALE
20x30 East Facing Near Roopanagar Muda approved Bank Loan available Call Ravi Ramesh
9886183629

ಹೊಸ ಮನೆ ಮಾರಾಟಕ್ಕಿದೆ
ಸರ್ದಾರ್ ವಲ್ಲಭಾಯಿಪಟೇಲ್ ನಗರ ಮುಡಾ ಅನುಮೋದಿತ ಲೇಔಟ್ 20*40 ಅಡಿ. ಪೂರ್ವ ದಿಕ್ಕು. 3 ಬಿಹೆಚ್‌ಕೆ, ಬೋರ್‌ವೆಲ್ ಮತ್ತು ಪಿಲ್ಲರ್ ಹೊಂದಿದೆ, 100% ವಾಸ್ತು, ಉತ್ತಮ ಗುಣಮಟ್ಟದ ಹೊಸ ಮನೆ
Call: 9380284276

ಬೇಕಾಗಿದ್ದಾರೆ
ವಕೀಲರ ಕಛೇರಿಗೆ ಕಾನೂನು ದಾಖಲಾತಿಗಳನ್ನು ಪರಿಶೀಲಿಸಲು ಹಾಗೂ Legal Opinion ನ್ನು Type ಮಾಡಲು ಕನಿಷ್ಠ 1 ವರ್ಷ ಅನುಭವವುಳ್ಳ ಬೆರಳಚ್ಚು ತಜ್ಞರು ಬೇಕಾಗಿದ್ದಾರೆ.
ಸಂಪರ್ಕಿಸಿ :9538033364

Sudarshan Saur
SOLAR WATER HEATER



ATTRACTIVE OFFER
ಸೇಲ್ಸ್ & ಸರ್ವೀಸ್
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಮೈಸೂರಿನಲ್ಲೇ ಪಾರ್ಟ್‌ಟೈಮ್ ಜಾಬ್
ಮೈಸೂರಿನ ಟ್ರಾನ್ಸ್‌ಪೋರ್ಟ್ ಆಫೀಸಿನಲ್ಲಿ ಬೆಳಿಗ್ಗೆ 11ರಿಂದ ಮಧ್ಯಾಹ್ನ 3 ಅಥವಾ ಮಧ್ಯಾಹ್ನ 3 ಗಂಟೆಯಿಂದ 7 ಗಂಟೆ ತನಕ ಅಥವಾ ಸಂಜೆ 6 ಗಂಟೆಯಿಂದ ರಾತ್ರಿ 10 ಗಂಟೆಯ ತನಕ ಈ ಮೂರು ಪ್ರತ್ಯೇಕ ಅವಧಿಗಳಲ್ಲಿ ಆಫೀಸ್ ಸಹಾಯಕ ಕೆಲಸಕ್ಕೆ ಯುವಕರು ಬೇಕಾಗಿದ್ದಾರೆ. ವಿದ್ಯಾರ್ಹತೆ ಎಸ್‌ಎಸ್‌ಎಲ್‌ಸಿ ಪಾಸ್ ಆಗಿರಬೇಕು. ಆರಂಭಿಕ ವೇತನ 6000. ಹೆಚ್ಚಿನ ಮಾಹಿತಿಗಾಗಿ ಸಂಪರ್ಕ ಸಂಖ್ಯೆ: 9740408488 / 08272221912

ಸಾಲ / LOANS
* House / Site Purchase
* Construction Loan
* House / Site Mortgage
Loans for MUDA, Corporation & Revenue Property.
Mob: 77605-98705

HOUSE FOR SALE
30x40 West facing, 3 Years Old, Furnished, Ground Floor 2BHK 1st Floor 1 Room @ Sourish Layout Behind Sahukar Hundi, 5km from Bogadi Ring Road
9620349543

"ಸಿದ್ಧ ಸಮಾಧಿ ಯೋಗ ಶಿಬಿರ"
ಧ್ಯಾನ, ಪ್ರಾಣಾಯಾಮ, ಆಹಾರ ಕ್ರಮ ಮತ್ತು ವ್ಯಕ್ತಿವಿಕಾಸ
ಉತ್ತಮ ಆರೋಗ್ಯ ಹಾಗೂ ಆನಂದದಾಯಕ ಜೀವನಕ್ಕೆ ಈ ಶಿಬಿರಕ್ಕೆ ಸೇರಿರಿ. ಪರಿಚಯ ಕಾರ್ಯಕ್ರಮ ದಿನಾಂಕ: 02–06–24 ಭಾನುವಾರ ಸಂಜೆ 6.00ಕ್ಕೆ. ಸ್ಥಳ: ಋಷಿ ಸಂಸ್ಕೃತಿ ವಿದ್ಯಾ ಕೇಂದ್ರ ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಮೈಸೂರು ಶಿಬಿರ ಪ್ರಾರಂಭ 03–06–24 ಸೋಮವಾರ ಸಂಜೆ 6.00 ಗಂಟೆಗೆ
ಮಾಹಿತಿಗಾಗಿ ರಮೇಶ್ ಚಂದ್ರ
9448458050, 8618762110

ಶುಂಠಿ ಕೃಷೀಕರೆ
ಉತ್ತಮ ದರ್ಜೆಯ ಬೇವಿನ ಹಿಂಡಿ ಹಾಗೂ ಬೇವಿನ ಹುಡಿ ನಿಮ್ಮ ಸಮಕ್ಷಮ ಮಾಡಿಕೊಡಲಾಗುತ್ತದೆ.
ಶ್ರೀ ಕಾಮಾಕ್ಷಿ ಬಯೋ–ನೀಮ್ #203, ಬನ್ನಿಮಂಟಪ ಬಡಾವಣೆ, ಮೈಸೂರು–570 015
Mob: 80888-87802

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಬೇಕಾಗಿದ್ದಾರೆ (Job Vacancy)
ಮೈಸೂರು ಮೇಟಗಳ್ಳಿ, ಜಿ.ಆರ್.ಎಸ್. ಫ್ಯಾಂಟಸಿ ಪಾರ್ಕ್ ಹತ್ತಿರ ಇರುವ ಕಾರ್ಖಾನೆಗೆ 18 ರಿಂದ 40 ವರ್ಷ ವಯಸ್ಸಿನ ಗಂಡಸರು ಬೇಕಾಗಿದ್ದಾರೆ. ವಿದ್ಯಾರ್ಹತೆ 7ನೇ ತರಗತಿಯಿಂದ ವೇತನ 13178 (ESI+PF) ಮೂರು ಶಿಫ್ಟ್‌ನಲ್ಲಿಯು ಕೆಲಸ ಮಾಡಬೇಕಾಗಿರುತ್ತದೆ. ಸಂಪರ್ಕಿಸಿ:
Komal Enterprises
Ramesh 9986859930
Prakash 8971460235

ಕಳೆದಿದೆ
ಶ್ರೀಮತಿ ಸೌಮ್ಯರವರ ಮನೆ ಸಂಖ್ಯೆ 791, ಎಂಐಜಿ2, ಹುಡ್ಕೋ 8ನೇ ಕ್ರಾಸ್, ಬೋಗಾದಿ, 6ನೇ ಹಂತ, ಶಾರದಾದೇವಿನಗರ, ಮೈಸೂರು, ಮನೆ ಅಳತೆ 6.00 x 11.00 ಮೀಟರ್ ಅಳತೆಯ 11 ಮಾರ್ಚ್ 1991 ರಂದು ಮಂಜೂರಾಗಿದ್ದ ಮನೆಗೆ ಸಂಬಂಧಿಸಿದ, ಮುಡಾಯಿಂದ ವಿತರಿಸಲಾಗಿದ್ದ ಮಂಜೂರಾತಿ ಪತ್ರ ಎಂಬ ಪ್ರಮುಖ ದಾಖಲೆಯನ್ನು ಕಳೆದುಕೊಂಡಿದ್ದು, ಯಾರಿಗಾದರೂ ಸಿಕ್ಕಿದಲ್ಲಿ ಸಂಪರ್ಕಿಸಿ:
9900498462

ಹೊಸ ಮನೆ ಮಾರಾಟಕ್ಕಿದೆ (SALE)
ಮೈಸೂರಿನ ಹೆಬ್ಬಾಳು 1ನೇ ಹಂತದ ಲಕ್ಷ್ಮೀಕಾಂತ ನಗರ 20x30, $3^1/_2$ floor, piller house, 4 year old (MUDA) (West face). Price: 72 Lakhs (Negotiable)
9980613758

ADMISSION OPEN
Govt. of Karnataka-Dept. of Tourism
FOOD CRAFT INSITUTE-MYSURU
EXHIBITION GROUND, ITTEGEGUDU
HOTEL MANAGEMENT
100% JOB PLACEMENTS
| GOVT COLLEGE |
80% PARCTICAL CLASSES
www.fcimysuru.com
6362018821

ಮನೆ ಮಾರಾಟಕ್ಕಿದೆ
20x33 ವಿಸ್ತೀರ್ಣದ ಹೊಸದಾಗಿ ನಿರ್ಮಿಸಲಾಗಿರುವ 2 ಅಂತಸ್ತಿನ ಮನೆ ಇಲವಾಲದ ಬಳಿ
8147891253
8050860229

ವೃದ್ಧಾಶ್ರಮ
ನಿಮ್ಮ ಪ್ರೀತಿಯ ವೃದ್ಧರನ್ನು, ಹಾಸಿಗೆ ಹಿಡಿದ ವರನ್ನು ಮತ್ತು ಪಾರ್ಶ್ವವಾಯು ಪೀಡಿತರನ್ನು ನಿಮ್ಮ ಮನೆಯಂತೆಯೇ ಸುಸಜ್ಜಿತವಾದ ವ್ಯವಸ್ಥೆಯಲ್ಲಿ ಮೆಡಿಕಲ್ ಸೌಲಭ್ಯದೊಂದಿಗೆ ನೋಡಿಕೊಳ್ಳಲಾಗುವುದು, ಹೋಂ ನರ್ಸಿಂಗ್ ಸೇವೆಯು ಲಭ್ಯವಿದೆ. ಸ್ಥಳ: ಮೈಸೂರು.
9916905188, 8951190340

ತಕ್ಷಣ ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹೆಲ್ಪರ್ ಮತ್ತು ಕ್ಯಾಷಿಯರ್ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು.
6364748485

ಮುಡಾ ಖಾತಾ ಸೈಟ್ ಸೇಲ್
ಈಸ್ಟ್ ಫೇಸಿಂಗ್ ಕಾರ್ನರ್ ಸೈಟ್ 8.7 x 12 ಮೀ. ದಡದಹಳ್ಳಿ ಜ್ಞಾನಭಾರತಿ ಲೇಔಟ್, ಏರ್‌ಪೋರ್ಟ್ ಹಿಂಭಾಗದ ಸ್ಟೇಟ್ ಹೈವೇ ರೋಡ್, ಡೈರೆಕ್ಟ್ ಓನರ್. ಬೆಲೆ: 35 ಲಕ್ಷ.
9342123373

ಸೈಟು ಮಾರಾಟಕ್ಕಿದೆ
30x40, 11 ಲಕ್ಷ ನೋಂದಣಿಗೆ ಸಿದ್ಧವಿರುವ DTCP ಅನುಮೋದಿತ ಬ್ಯಾಂಕ್ ಸಾಲದೊಂದಿಗೆ ಹೆಚ್.ಡಿ. ಕೋಟೆ ರಸ್ತೆ, ಜಯಪುರ ರಿಂಗ್ ರಸ್ತೆಗೆ 12 ಕಿ.ಮೀ.
9035565773

ಬ್ರಾಹ್ಮಣ ಲಿಂಗಾಯತ ವರ ಬೇಕಾಗಿದೆ
ಬ್ರಾಹ್ಮಣ ವಧು, ವಯಸ್ಸು 27, SSLC ಕಲಿತಿರುವ / ವಯಸ್ಸು 29, PUC / ವಯಸ್ಸು 33, SSLC / ವಯಸ್ಸು 40, PUC ಕಲಿತಿರುವ ವಧುವಿಗೆ ವರ ಬೇಕಾಗಿದೆ. (ಕೃಷಿಕರು, ಪುರೋಹಿತರು, ಅಡುಗೆ ಯವರು ಇನ್ನಿತರ ಉದ್ಯೋಗದಲ್ಲಿರುವ ಆದಾಯ ಇರುವ ಸದ್ಗುಣವಂತ ವರ ಸಂಪರ್ಕಿಸಬಹುದು) ವಧು ವರಾನ್ವೇಷಣೆ ಕೇಂದ್ರ, ಕಂದಾವರ, ಮಂಗಳೂರು.
9880685177

30x40 East Face Site Gaddige Main Road Near ganigara Hundi (Bogadi 3 Km)
9880273834

ಅನುಬಂಧ ಮ್ಯಾರೇಜಸ್
ವಧುವರರನ್ನು ಹುಡುಕಲು ಸಹಾಯ ಬೇಕೇ? ನಮಗೆ ಕರೆ ಮಾಡಿ
6361740552

ಮನೆ ಬಾಡಿಗೆಗೆ ಇದೆ
ವಿಜಯನಗರ 2ನೇ ಹಂತದಲ್ಲಿ 30x40, 1st Floor duplex, 3 BHK ಮನೆ ಸೆಮಿ ಫರ್ನಿಷ್ಡ್ ಮತ್ತು ಕಾರ್ ಪಾರ್ಕಿಂಗ್ ಇದೆ.
9206380489, 8762577289

WANTED
ITI & Diploma Electrical, male candidates for Mysore Company.
7799848287
9164079895

ಬೇಕಾಗಿದ್ದಾರೆ
ನ್ಯೂ ಶಾರದ ರೆಸಾರ್ಟ್ ಕೆ.ಆರ್ ಎಸ್ ಮೇನ್ ರೋಡ್ ಹತ್ತಿರ ಪಂಪ್ ಹೌಸ್ ಸರ್ಕಲ್
1). ಹೌಸ್ ಕೀಪಿಂಗ್ ಬಾಯ್ಸ್ ಅಥವಾ ಲೇಡಿಸ್
2). ವೇಟರ್ಸ್
3). ಅಕೌಂಟ್ ಸೆಕ್ಷನ್
ಅನುಭವ ಉಳ್ಳವರಿಗೆ ಮಾತ್ರ ಆದ್ಯತೆ, (ಉತ್ತಮ ಸಂಬಳವಿದೆ)
9880185785

MUDA SITES FOR SALE
Rs.1999/- per Sq.ft. Near Brahmins Layout & KHB House.
7337661112

SITE FOR SALE
20X30 Muda Approved Bannur Road
8050821108
8792207164

ಮೆಡಿಕಲ್ ಶಾಪ್ ಮಾರಾಟಕ್ಕಿದೆ
ಮೈಸೂರಿನ ಹೃದಯ ಭಾಗದಲ್ಲಿರುವ ಮೆಡಿಕಲ್ ಶಾಪ್ ಮಾರಾಟಕ್ಕಿದೆ, ದಿನಕ್ಕೆ ಏಳರಿಂದ ಹತ್ತು ಸಾವಿರ ವ್ಯಾಪಾರವಾಗುತ್ತದೆ.
9972358966

HOUSE FOR RENT
2BHK GROUND FLOOR WEST FACING
1 BHK FIRST FLOOR NORTH FACING
AGRAHARA
9071256559
8951493933

ಹೊಸ ಮನೆ ಮಾರಾಟಕ್ಕಿದೆ
30x40 ಡ್ಯೂಪ್ಲೆಕ್ಸ್ 3 Bed Room ಇಟಾಲಿಯನ್ ಆಲ್ ಟೀಕ್ ಗ್ರಾನೈಟ್ ವಾಸ್ತು ಪ್ರಕಾರವಾಗಿರುವ ಮನೆ ದಟ್ಟಗಳ್ಳಿ ಕುವೆಂಪುನಗರ & ಶ್ರೀರಾಂಪುರ
9945042875

ಬೇಕಾಗಿದ್ದಾರೆ
ಟಿ.ನರಸೀಪುರದ ತಾಲ್ಲೂಕಿನ ಪಟ್ಟಣ ಮತ್ತು ಹಳ್ಳಿಗಳಲ್ಲಿ ಇರುವ PUC ಓದಿರುವ ಕನ್ನಡ ಚೆನ್ನಾಗಿ ಮಾತನಾಡುವ ಮತ್ತು ಇಂಗ್ಲಿಷ್ ಓದಲು ಮತ್ತು ಬರೆಯಲು ಬರುವ ಹಾಗೂ ಕಂಪ್ಯೂಟರ್ ಬೇಸಿಕ್ ಗೊತ್ತಿರುವ 6 ಜನ ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ.
9964326426

ಮನೆ ಭೋಗ್ಯ/ಬಾಡಿಗೆಗೆ ದೊರೆಯುತ್ತದೆ
ಶಾಂತವೇರಿ ಗೋಪಾಲಗೌಡ ನಗರದಲ್ಲಿ ಹೊಸದಾಗಿ ಕಟ್ಟಿಸಿರುವ 2BHK ಮನೆ ಗ್ರೌಂಡ್ ಮತ್ತು ಫಸ್ಟ್‌ಫ್ಲೋರ್ ಮನೆ ಬಾಡಿಗೆ/ಭೋಗ್ಯಕ್ಕೆ ದೊರೆಯುತ್ತದೆ.
9591238456

ಮನೆ ಬಾಡಿಗೆಗೆ ಇದೆ
ರಾಜಶೇಖರ ಆಸ್ಪತ್ರೆ ಹಿಂಭಾಗ ಮನೆ ನಂ.172, ರಾಗಿಮಿಲ್ 2ನೇ ಅಡ್ಡ ರಸ್ತೆ, ಮೊದಲನೇ ಮಹಡಿ, 3 ಬೆಡ್ ರೂಂ, ಹಾಲ್, ಅಡುಗೆ ಮನೆ, ಊಟದ ಹಾಲ್, ದೇವರ ಮನೆ, ಸ್ನಾನದ ಮನೆ, ಸೋಲಾರ್, ಗೀಸರ್, ನೀರಿನ ಸೌಕರ್ಯ ಉತ್ತರ ಬಾಗಿಲು
7975023201
7815812948

ಸುವರ್ಣಾವಕಾಶ
ವಿಶೇಷವಾಗಿ ರಾಜ್ಯ ಸರ್ಕಾರಿ/ಕೇಂದ್ರ ಸರ್ಕಾರಿ ನಿವೃತ್ತ, ಸ್ವಯಂ, ನಿವೃತ್ತ ಅಧಿಕಾರಿಗಳಿಗೆ ಹಾಗೂ ಗೃಹಿಣಿಯರಿಗೆ ಪ್ರಖ್ಯಾತ ಬ್ಯಾಂಕ್ ಸಮೂಹದಿಂದ ರಾಜ್ಯ ಸರ್ಕಾರಿ/ ಕೇಂದ್ರ ಸರ್ಕಾರಿ ನಿವೃತ್ತ/ಸ್ವಯಂ ನಿವೃತ್ತ ನೌಕರರು ಅಧಿಕಾರಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪ್ರಯೋಜನಗಳು
ಫಿಕ್ಸಡ್ ತಿಂಗಳ ಸಂಬಳ
ESI/PF ತಿಂಗಳಿಗೆ ಫಿಕ್ಸಡ್ ಗ್ರಾಚ್ಯುಟಿ
Other Variable Earnings
9448554645, 9901736493
9483002158

Applications are invited for Reputed English Medium School at Chamarajanagar. For the following subjects
1) All Subjects
2) Hindi for primary, 3) PET
Suitable candidates can apply immediately.
P.F. & ESI facility available
9071739999
ttimoffice2023@gmail.com

ಬೇಕಾಗಿದ್ದಾರೆ
ನ್ಯೂ ಶಾರದ ಅನೆಕ್ಸ್ ವಿಕ್ರಾಂತ್ ರೇಡಿಯಲ್ ಪ್ಲಾಂಟ್ ಎದುರು ಹತ್ತಿರ ರಿಂಗ್ ರೋಡ್
1). ಕ್ಯಾಪ್ಟನ್
2). ವೇಟರ್,
3). ಕ್ಲೀನರ್ ಅನುಭವ ಉಳ್ಳವರಿಗೆ ಮಾತ್ರ ಆದ್ಯತೆ, (ಉತ್ತಮ ಸಂಬಳವಿದೆ)
9880185785

ಬೇಕಾಗಿದ್ದಾರೆ
ಮಾರ್ಕೆಟಿಂಗ್ ಸೇಲ್ಸ್ ಎಕ್ಸಿಕ್ಯೂಟೀವ್
Qualification : (Any Degree)
(ಹೊಸಬರಿಗೂ ಆದ್ಯತೆ)
ಸ್ಟಾರ್ ಬಜಾಜ್, ಒಂಟಿಕೊಪ್ಪಲ್
Authorised Main Dealer for Bajaj Auto Ltd. Opp. to Axis Bank Temple road, V.V.Mohalla Mysore-02
9743647484

Nypunya School of Excellence
Dattagalli, Mysore
We are Hiring !!!
1. Kindergarten Teacher
2. Primary Teacher, (English, Scocial Science, Science and Maths)
3. Swimming coach
No constraint in salry for Experienced Candidates with relevant qualification and experience can send their resume to hrnypschool@gmail.com
9110851597

ನಿರ್ಮಲ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

SK CONSTRUCTION
ಹೊಸ ಮನೆ ಕಟ್ಟಬೇಕೆ ಚಿಂತೇ ಬೇಡ ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ Engineer Plan, 3D Elevation ಸಹಿತ ನಾವೇ ಲೋನ್ ಮಾಡಿ ನಿಮ್ಮ ಕನಸಿನ ಮನೆ ಕಟ್ಟಿ ಕೊಡುತ್ತೇವೆ.
9620528490

ಮೈಸೂರು ಮಿತ್ರ 45 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮೂರನೇ ಪುಟದಿಂದ

ನಿರೀಕ್ಷಣಾ ಜಾಮೀನು ಅರ್ಜಿ ವಜಾ

ದೂರುದಾರ ಹಾಗೂ ಆರೋಪಿ ಸತೀಶ್ ಬಾಬಣ್ಣ ಮಾತಾಡಿರುವ ಕಾಲ್ ರೆಕಾರ್ಡ್ ಇದೆ. ಈ ಕಾಲ್ ರೆಕಾರ್ಡ್‌ನಲ್ಲಿ ಭವಾನಿ ಯಾವ ರೀತಿ ಭಾಗಿಯಾಗಿದ್ದಾರೆ ಎಂಬುದಕ್ಕೆ ಸಾಕ್ಷಿ ಇದೆ. ಮೊಬೈಲ್‌ನ ಆಟೋ ರೆಕಾರ್ಡರ್‌ನಿಂದ ಕಾಲ್ ರೆಕಾರ್ಡ್ ಆಗಿದೆ. ಆರೋಪಿಯೊಬ್ಬರ ಮೊಬೈಲ್‌ನಿಂದ ಸಂಪೂರ್ಣ ಕಾಲ್ ರೆಕಾರ್ಡ್ ರಿಕವರ್ ಮಾಡಲಾಗಿದೆ. 2 ಕಾಲ್ ರೆಕಾರ್ಡ್‌ಗಳಲ್ಲಿ ಭವಾನಿ ಅವರ ಆ್ಯಕ್ಟೀವ್ ಪಾರ್ಟಿಸಿಪೇಷನ್ ಇರೋದು ಪತ್ತೆಯಾಗಿದೆ. ಸತೀಶ್ ಬಾಬಣ್ಣ ಮೊಬೈಲ್‌ನಿಂದ ಕಾಲ್ ರೆಕಾರ್ಡ್ ಪಡೆಯಲಾಗಿದೆ. ಆ ಸಂಭಾಷಣೆಯಲ್ಲಿ 'ಮೇಡಮ್' ಎಂದು ಸಂಭೋದನೆ ಆಗಿದೆ. ಸಂತ್ರಸ್ತೆಗೆ 150–200 ಸೀರೆ ಕೊಡಿಸಿ ಅಂತಾರೆ. ಏನ್ ಮಾಡೋದು ಎಲ್ಲಾ ಬಾಯಿ ಪಾಠ ಆಗಿದೆ. ಅದೇನೋ ರಂಪಾಟ ಆಗಿದೆ ಎಂಬ ಬಗ್ಗೆ ಮಾತುಕತೆ. ಹೀಗೆ ಅನೇಕ ರೀತಿಯಲ್ಲಿ ಸಂಭಾಷಣೆ ನಡೆದಿದೆ ಎಂದು ಹೇಳಿದ್ದಾರೆ. ಫೋನ್ ಸಂಭಾಷಣೆಯಲ್ಲಿ ಭವಾನಿ ಭಾಗಿಯಾಗಿದ್ದಾರೆ. ಸಂತ್ರಸ್ತೆಯಿಂದ ವಿಡಿಯೋ ಮಾಡಿಸು ಅಂತ ಭವಾನಿ ಸತೀಶ್ ಬಾಬಣ್ಣಗೆ ಹೇಳಿದ್ದಾರೆ. ಮೇ.3ಕ್ಕೆ ಮಹಿಳೆಯಿಂದ ಹೇಳಿಕೆ ಪಡೆಯಲಾಗಿದೆ. 40 ಕಿ.ಮಿ ದೂರ ಇದ್ದ ರಾಜಗೋಪಾಲ್ ಅವರ ಜಾಗದಲ್ಲಿ ಸಂತ್ರಸ್ತೆಯನ್ನು ಇಡಲಾಗಿತ್ತು. ಇನ್ನೂ ಕೆಲವು ಸಂಭಾಷಣೆಗಳನ್ನು ವಾಟ್ಸಾಪ್ ಮೂಲಕ ನಡೆಸಲಾಗಿದೆ. ಸೆಕ್ಷನ್ 164 ಹೇಳಿಕೆಯಲ್ಲಿ ಸಂತ್ರಸ್ತೆ ಮತ್ತು ಆಕೆಯ ಸಹೋದರಿ ಭವಾನಿ ಬಗ್ಗೆ ಹೇಳಿದ್ದಾರೆ. ಸಂತ್ರಸ್ತೆಗೆ ಭವಾನಿ ಬೈದಿದ್ದಾರೆ, ಬೆದರಿಸಿದ್ದಾರೆ. ಸಂತ್ರಸ್ತೆ ಮಹಿಳೆ ಬಳಿಯಿದ್ದ ಮೊಬೈಲ್ ಅನ್ನು ಕಿತ್ತುಕೊಳ್ಳಲಾಗಿತ್ತು.

ಸಂತ್ರಸ್ತೆಗೆ ಭವಾನಿ ಜೈಲಿಗೆ ಹೋಗುವ ಬೆದರಿಕೆ ಹಾಕಿದ್ದಾರೆ. ವಿಡಿಯೋ ಮಾಡಲು ಒತ್ತಡ ಹಾಕಿದ್ದಾರೆ. ಅನೇಕರ ಜೊತೆ ಮಾತನಾಡಿರುವ ಸಂಭಾಷಣೆಗಳಿವೆ. ಸಂತ್ರಸ್ತೆ ಮಗಳ ಹೇಳಿಕೆ, ಡಾಕ್ಟರ್ ಹೇಳಿಕೆ ಎಲ್ಲಾ ಸಾಕ್ಷಿಗಳು ಇವೆ. ಭವಾನಿ ಅವರ ಪಿಎ, ಡ್ರೈವರ್ ಹಾಗೂ ರಾಜಗೋಪಾಲ್ ನಡುವೆ ಸಂಭಾಷಣೆ ನಡೆದಿವೆ. ರಾಜಕೀಯ ಪ್ರಭಾವ ಇರುವ ಮಹಿಳೆಯ ಕಸ್ಟೋಡಿಯಲ್ ಇಂಟ್ರಾಗೇಷನ್ ಅಗತ್ಯ ಇದೆ ಎಂದು ವಾದ ಮಾಡಿದ್ದರು.

ಇನ್ನೂ ಭವಾನಿ ರೇವಣ್ಣ ಪತ್ರ ಬರೆದ ವಿಚಾರ ಕೂಡ ಚರ್ಚೆಯಾಯಿತು. ಭವಾನಿ ರೇವಣ್ಣ ಎಡಿಜಿಪಿಗೆ ಪತ್ರ ಬರೆದಿದ್ದಾರೆ. ನಾವು ಭವಾನಿಗೆ ಈವರೆಗೂ ಯಾವುದೇ ನೋಟೀಸ್ ನೀಡಿಲ್ಲ. ಇದೊಂದು ಪೂರ್ವನಿರ್ಧಾರಿತ ಸಂಚಿನ ಪ್ರಕರಣ. ಆ ಭಾಗದಲ್ಲಿ ಬೇರೆಯವರಿಗೆ ಸಂದೇಶ ರವಾನೆಗಾಗಿ ಮಾಡಿದ ಕಿಡ್ನಾಪ್. ಪ್ರಭಾವದಿಂದ ಏನು ಬೇಕಾದರೂ ಮಾಡಬಹುದು ಅಂತ ಮಾಡಿದ ಕಿಡ್ನಾಪ್. ನಮ್ಮ ಪ್ರತಿವಾದಿ ವಕೀಲರು ಅರ್ಜಿದಾರೇ ತನಿಖೆಗೆ ಸಹಕರಿಸುತ್ತಾರೆ ಎಂದು ಹೇಳಿದರು. ಆದರೆ ಇಷ್ಟು ಎಲ್ಲಾ ಮಾಡಿ ಈಗ ಸಹಕರಿಸುತ್ತೇನೆ ಅಂದರೆ ಹೇಗೆ. ಸ್ವಾಮಿ ಒಮ್ಮೆ ನೀವು ಈ ಆಡಿಯೋ ಸಂಭಾಷಣೆಯನ್ನು ಕೇಳಿ ಎಂದು ಮನವಿ ಮಾಡಿದರು.

ಅಧಿಕಾರಿ ವರ್ಗದಲ್ಲಿ ಪರಿಹಾರ ಇಲ್ಲವೆ...!?

ಕಡೆಗೆ ಸಾಗುವ ನಾಲ್ಕು ಪಥದ ಈ ಎಂ.ಜಿ.ರಸ್ತೆಯಲ್ಲಿರುವ ಮಾರುಕಟ್ಟೆ ಬಳಿ ಕೊಳೆತ ತರಕಾರಿಗಳು, ಪ್ಲಾಸ್ಟಿಕ್ ಸೇರಿದಂತೆ ಕಸದ ರಾಶಿ ಸ್ವಾಗತಿಸಿದರೆ, ಇನ್ನೊಂದು ರೀತಿಯ ಉಪದ್ರವ; ಮೈಸೂರಿನ ಗ್ರಾಮಾಂತರ ಪ್ರದೇಶಗಳಿಂದ ತರಕಾರಿಗಳನ್ನು ಹೊತ್ತು ತರುವ ಆಟೋ, ಬೈಕ್, ಗೂಡ್ಸ್ ಮತ್ತಿತರೆ ವಾಹನಗಳನ್ನು ರಸ್ತೆಯಲ್ಲಿಯೇ ನಿಲ್ಲಿಸುವುದರಿಂದ ಸಾರ್ವಜನಿಕರ ವಾಹನ ಸಂಚಾರಕ್ಕೆ ತೀವ್ರ ಕಿರಿಕಿರಿ. ಅತ್ತ ಅರ್ಧ, ಇತ್ತ ಅರ್ಧ ಮೈಸೂರು ಸಂಪರ್ಕ ಹೊಂದಿರುವ ಈ ರಸ್ತೆಯಲ್ಲಿ ಇಂತಹ ಇಕ್ಕಟ್ಟಿನ ಪರಿಸ್ಥಿತಿಯಾದರೆ ಸಾರ್ವಜನಿಕರ ವಾಹನಗಳು ಎಲ್ಲಿ ಹೋಗುವುದು?

ವಾಹನ ದಟ್ಟಣೆ ನಡುವೆ ಆಹಾರವನ್ನರಸಿ ಮಾರುಕಟ್ಟೆಗೆ ಲಗ್ಗೆಯಿಡುವ ಬಿಡಾಡಿ ದನ–ಕರುಗಳು, ಬಿಸಾಡಿದ್ದ ತರಕಾರಿ, ಹಣ್ಣುಗಳು, ಸೊಪ್ಪುಗಳನ್ನು ತಿನ್ನುತ್ತಾ ರಸ್ತೆಯ ಮಧ್ಯೆಯೇ ನಿಲ್ಲುವುದು ಮತ್ತೊಂದು ಕಿರಿಕಿರಿ. ರಸ್ತೆಯ ಮಧ್ಯೆ ನಿರ್ಮಿಸಿರುವ ಡಿವೈಡರ್, ಗೂಡ್ಸ್ ವಾಹನಗಳ ಅಬ್ಬರಕ್ಕೆ ನಾಮಾವಶೇಷವಾಗಿದೆ. ರಸ್ತೆ ಮಧ್ಯದ ವಿದ್ಯುತ್ ಕಂಬಗಳು ಯಾವಾಗ ಯಾರ ಮೇಲೆ ಮುರಿದು ಬಿದ್ದು ಅನಾಹುತ ಸಂಭವಿಸುವುದೋ ದೇವರೇ ಬಲ್ಲ.

ಸಂಚಾರವೇ ಬಹುದೊಡ್ಡ ಸಾಹಸ: ಮಾಲ್ ಆಫ್ ಮೈಸೂರ್‌ನಿಂದ ಜೆಎಸ್‌ಎಸ್ ಆಸ್ಪತ್ರೆ ಸಮೀಪದ ಕೆಳಸೇತುವೆಯವರೆಗೆ ವಾಹನ ಸಂಚಾರವೆಂಬುದು ಬಹು ಸಾಹಸಮಯ. ಅಪ್ಪಿ–ತಪ್ಪಿ ಸಂಜೆ 6 ಗಂಟೆಯಿಂದ ಬೆಳಗ್ಗೆ 10 ಗಂಟೆಯವರೆಗೆ ಈ ರಸ್ತೆಯಲ್ಲಿ ಬರಬೇಕಾದರೆ ಹತ್ತು ಸಾರಿ ಯೋಚನೆ ಮಾಡಬೇಕು. ತುರ್ತು ಕೆಲಸ ನಿಮಿತ್ತ ಎಂದು ತಡವರಿಸಿ ವಾಹನದ ವೇಗ ಹೆಚ್ಚಿಸಿದರೆ, ಅಪಘಾತ ಗ್ಯಾರಂಟಿ. ಆಕಸ್ಮಾತ್ ಏನಾದರೂ ಆಂಬುಲೆನ್ಸ್‌ಗಳು ಬಂದರೆ ರೋಗಿಯ ಜೀವ ಸಾಕ್ಷಾತ್ ಪರಮಾತ್ಮನ ಕೈಯ್ಯಲ್ಲೇ ಎಂಬುದನ್ನು ಈ ರಸ್ತೆಯಲ್ಲಿನ ಜನ ಮತ್ತು ವಾಹನ ದಟ್ಟಣೆಯೇ ಹೇಳುತ್ತಿದೆ.

ಡೋಂಟ್ ಕೇರ್...!: ಕೆಲ ದಿನಗಳ ಹಿಂದೆಯಷ್ಟೇ ಮೈಸೂರು ಜಿಲ್ಲಾಧಿಕಾರಿ, ಪೊಲೀಸ್ ಆಯುಕ್ತರು ಸ್ಥಳಕ್ಕೆ ಭೇಟಿ ನೀಡಿ, ರಸ್ತೆ ಬದಿಯಲ್ಲಿ ಗೂಡ್ಸ್ ವಾಹನಗಳನ್ನು ನಿಲ್ಲಿಸುವಂತಿಲ್ಲ. ಡಿವೈಡರ್ ದಾಟುವಂತಿಲ್ಲ. ತರಕಾರಿ ತರುವ ವಾಹನಗಳು ಮಾರುಕಟ್ಟೆಯೊಳಗೆ ಹೋಗಿ ಅನ್‌ಲೋಡ್ ಮಾಡಬೇಕು ಎಂಬಿತ್ಯಾದಿ ಕೆಲ ರೂಲ್ಸ್‌ಗಳನ್ನು ಅಲ್ಲಿದ್ದವರಿಗೆ ಬೋಧಿಸಿ–ಬಂದಿದ್ದರು. ಕೆಲ ದಿನಗಳ ಕಾಲ ಪೊಲೀಸರ ಗಸ್ತು ವಾಹನ ಮಾರುಕಟ್ಟೆ ಬಳಿ ನಿಲ್ಲುತ್ತಿತ್ತು. ಗೂಡ್ಸ್ ವಾಹನವನ್ನು ರಸ್ತೆಯಲ್ಲಿ ನಿಲ್ಲಿಸಿದರೆ ಅದನ್ನು ಮಾರುಕಟ್ಟೆಯೊಳಗೆ ತೆಗೆದುಕೊಂಡು ಹೋಗುವಂತೆ ಪೊಲೀಸರು ತಾಕೀತು ಮಾಡುತ್ತಿದ್ದರು. ಹಾಗಾಗಿ ಕೆಲ ದಿನ ಪರಿಸ್ಥಿತಿ ಸ್ವಲ್ಪ ಸುಧಾರಿಸಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಆ ರೂಲ್ಸ್‌ಗಳನ್ನು ಗಾಳಿ ತೂರಿರುವ ವ್ಯಾಪಾರಸ್ಥರು ಅದಾವ ರಾಜಕಾರಣಿಯ ಅಭಯದಿಂದಲೋ ಮತ್ತೆ ಅಡ್ಡಾದಿಡ್ಡಿ ವಾಹನ ನಿಲುಗಡೆ, ಅನ್‌ಲೋಡ್, ವ್ಯಾಪಾರವನ್ನು ಶುರು ಮಾಡಿದ್ದಾರೆ. ಸ್ಥಳಿಯ ಜನಪ್ರತಿನಿಧಿಗಳು ಅಥವಾ ಅಧಿಕಾರಿಗಳು ಹೇಗೋ ನಡೆದುಕೊಂಡು ಹೋಗಲಿ ಎಂದು ಸುಮ್ಮನಿದ್ದಾರೆಯೇ? ಎಂಬ ಪ್ರಶ್ನೆಗಳು ಅಲ್ಲಲ್ಲಿ ಕೇಳಿ ಬರುತ್ತಿವೆ. ಏನೇ ಆದರೂ ದುಡಿದು ತಿನ್ನುವ ರೈತರು, ತಾವು ಬೆಳೆದ ಫಸಲನ್ನು ನೆಮ್ಮದಿಯಿಂದ ಯಾವುದೇ ಕಿರಿಕಿರಿ ಇಲ್ಲದೆ ವ್ಯಾಪಾರ ಮಾಡಲು ಸೂಕ್ತ ಸ್ಥಳಾವಕಾಶ ಮಾಡಿಕೊಡದ ಜಿಲ್ಲಾಡಳಿತದ ಕಾರ್ಯವೈಖರಿ ಬೇಸರ ಮೂಡಿಸುತ್ತದೆ. ಹೋಗಲಿ ಜಿಲ್ಲಾಡಳಿತ ಇಲ್ಲಿನ ಪರಿಸ್ಥಿತಿಯನ್ನು ಸುಧಾರಿಸಲು ಶಕ್ತವಾಗಿಲ್ಲದಿದ್ದರೆ ಸಾರ್ವಜನಿಕರು ತಮ್ಮ ವಾಹನವನ್ನು ಈ ರಸ್ತೆಯಲ್ಲಿ ತರಬೇಡಿ. ಬೇರೆ ಯಾವ ರಸ್ತೆಯಲ್ಲಾದರೂ ಸುರಕ್ಷಿತವಾಗಿ ಸಾಗಿ ಎಂದು ಹೇಳಲಿ. ಕನಿಷ್ಠ ಪಕ್ಷ ಆಂಬುಲೆನ್ಸ್ ಸಂಚಾರಕ್ಕೆ ಪರ್ಯಾಯ ವ್ಯವಸ್ಥೆಯನ್ನಾದರೂ ಮಾಡಲಿ ಎಂದು ಈ ರಸ್ತೆ ಬಳಕೆದಾರರು ಮನವಿ ಮಾಡಿದ್ದಾರೆ.

ವಸತಿ ಶಾಲೆಗಳಿಗೂ ಅನ್ವಯ

ಮಾಡಿಕೊಳ್ಳಲೇಬೇಕು ಎಂದು ಪೀಠ ಸ್ಪಷ್ಟಪಡಿಸಿದೆ. ಆರ್‌ಟಿಇ ಕಾಯಿದೆಯ ಸೆಕ್ಷನ್ 18(1) ಅನ್ನು ಉಲ್ಲೇಖಿಸಿರುವ ನ್ಯಾಯಪೀಠ, ಈ ಕಾಯಿದೆಯ ಗೆಜೆಟ್ 2012ರ ಏ.28ರಂದು ಆಗಿದೆ, ಆದಾದ ನಂತರ ಆರು ತಿಂಗಳಲ್ಲಿ ಶಾಲೆಯನ್ನು ನೋಂದಣಿ ಮಾಡಿ ಮಾನ್ಯತೆ ಪಡೆಯಬೇಕಿತ್ತು. ಆದರೆ ಪಡೆದಿಲ್ಲ, ಆ ಮೂಲಕ ನಿಯಮ ಉಲ್ಲಂಘನೆ ಮಾಡಲಾಗಿದೆ. ಹಾಗಾಗಿ ಇಲಾಖೆ ದಂಡ ವಿಧಿಸಿ ಕೈಗೊಂಡಿರುವ ಕ್ರಮ ಸರಿಯಾಗಿಯೇ ಇದೆ ಎಂದು ಪೀಠ ಹೇಳಿದೆ.

ಪ್ರಕರಣದ ಹಿನ್ನೆಲೆ: ಡಿ.ಬಾಲಕೃಷ್ಣಪ್ಪ ಮತ್ತು ವಿಲಿಯಂ ಯೇಸುದಾಸ್ ಎನ್ನುವವರು ಶಾಲೆ ಆರ್‌ಟಿಇ ಅಡಿ ಮಾನ್ಯತೆಯನ್ನು ಪಡೆದಿಲ್ಲ, ಹಾಗಾಗಿ ಅದರ ವಿರುದ್ಧ ಕಾನೂನು ರೀತ್ಯ ಕ್ರಮ ಜರುಗಿಸಬೇಕು ಎಂದು ಶಿಕ್ಷಣ ಇಲಾಖೆಯ ಅಧಿಕಾರಿಗಳನ್ನು ಕೋರಿದ್ದರು. ಅಧಿಕಾರಿಗಳು ಮೊದಲಿಗೆ 2016ರ ಡಿ.19ಕ್ಕೆ ಹಾಜರಾಗುವಂತೆ ಶಾಲೆಯ ಮುಖ್ಯಸ್ಥರಿಗೆ ನೋಟಿಸ್ ನೀಡಲಾಗಿತ್ತು. ಆದರೂ ಅವರು ಹಾಜರಾಗಲಿಲ್ಲ. ಆನಂತರ 2017ರ ಜ.12ಕ್ಕೆ ಶಿಕ್ಷಣ ಇಲಾಖೆ ಮತ್ತೆ ಶೋಕಾಸ್ ನೋಟಿಸ್ ಜಾರಿಗೊಳಿಸಿತ್ತು, ಅದಕ್ಕೆ ಉತ್ತರಿಸಿದ್ದ ಶಾಲೆ ತಮ್ಮದು ವಸತಿ ಶಾಲೆ, ಅದು ಆರ್‌ಟಿಇ ಕಾಯಿದೆ ವ್ಯಾಪ್ತಿಗೆ ಬರುವುದಿಲ್ಲ ಎಂದು ಆಕ್ಷೇಪಿಸಿದ್ದರು.

ಆನಂತರ ಬಿಇಒ, 2017ರಲ್ಲಿ ಮತ್ತೊಂದು ನೋಟಿಸ್ ಜಾರಿಗೊಳಿಸಿ, ಡಿಡಿಪಿಐ ಆದೇಶದಂತೆ ಆರ್‌ಟಿ ಇ ಕಾಯಿದೆಯಡಿ ವಿದ್ಯಾರ್ಥಿಗಳ ವಿವರಗಳನ್ನು ಅಪ್‌ಲೋಡ್ ಮಾಡಿಲ್ಲವೇಕೆ ಎಂದು ಪ್ರಶ್ನಿಸಿದ್ದರು. ಆನಂತರ ಜಿಲ್ಲಾ ಪಂಚಾಯ್ತಿ ಸಿಇಒ, ಡಿಡಿಪಿಐಗೆ ಆರ್‌ಟಿಇ ಕಾಯಿದೆ ಸೆಕ್ಷನ್ 18 ಪಾಲನೆ ಮಾಡದಿರುವ ಹಿನ್ನೆಲೆಯಲ್ಲಿ ತನಿಖೆ ನಡೆಸುವಂತೆ ಸೂಚಿಸಿದ್ದರು. ಆನಂತರವೂ ಷೋಕಾಸ್ ನೋಟಿಸ್ ನೀಡಿ, ನಿಯಮ ಉಲ್ಲಂಸಿರುವುದಕ್ಕೆ ನಿಮಗೆ ದಂಡ ವಿಧಿಸಬಾರದೇಕೆ ಎಂದು ಕೇಳಿದ್ದರು. ಶಾಲೆಯ ಅಧಿಕೃತ ಪ್ರತಿನಿಧಿಯೊಬ್ಬರು ಡಿಡಿಪಿಐ ಮುಂದೆ ಹಾಜರಾಗಿದ್ದರು. ಆನಂತರ ಡಿಡಿಪಿಐ 1,60,50,000 ಕೋಟಿ ರೂ. ದಂಡ ವಿಧಿಸಿದ್ದರು. ಅದನ್ನು ಪ್ರಶ್ನಿಸಿ ಶಾಲೆಯ ಆಡಳಿತ ಮಂಡಳಿ ಹೈಕೋರ್ಟ್ ಮೊರೆ ಹೋಗಿತ್ತು.

ಸಿಬಿಐ ತನಿಖೆಗೆ ವಹಿಸಿದ ಯೂನಿಯನ್ ಬ್ಯಾಂಕ್

ಬ್ಯಾಂಕ್‌ನವರು ಪ್ರಕರಣವನ್ನು ಸಿಬಿಐಗೆ ನೀಡಿರುವುದರಿಂದ ರಾಜ್ಯ ಸರ್ಕಾರದ ಪಾತ್ರದ ಬಗ್ಗೆ ಕಾನೂನು ತಜ್ಞರ ಸಲಹೆ ಪಡೆಯಲು ಸಭೆ ನಿರ್ಧರಿಸಿದೆ.

ರಾಜ್ಯ ಸರ್ಕಾರವೇ ಪ್ರಕರಣವನ್ನು ಸಿಐಡಿಗೆ ವಹಿಸಿ ತನಿಖೆ ನಡೆಸುತ್ತಿರುವ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಕಾಂಗ್ರೆಸ್ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವ ಪ್ರಯತ್ನ ನಡೆಸಿದೆ ಎಂಬ ಮಾತು ಸಭೆಯಲ್ಲಿ ಕೇಳಿಬಂತು. ಪ್ರಕರಣ ಬಹಿರಂಗಗೊಳ್ಳುತ್ತಿದ್ದಂತೆ ಸಂಬಂಧಪಟ್ಟ ಅಧಿಕಾರಿಗಳನ್ನು ಅಮಾನತು ಮಾಡಿದ್ದೇವೆ. ಅಲ್ಲದೆ, ಇಲಾಖೆ ಹಣ ತೆಲಂಗಾಣದ ಬ್ಯಾಂಕ್‌ಗಳಿಗೆ ವರ್ಗಾವಣೆ ಆಗಿ ಆ ಹಣವನ್ನು ಬಳಕೆ ಮಾಡಲಾಗಿದೆಯೇ ಎಂಬ ಮಾಹಿತಿಯನ್ನು ಅಲ್ಲಿನ ಮುಖ್ಯಮಂತ್ರಿಗಳಿಗೆ ಪತ್ರ ಬರೆದು ಕೋರಿರುವುದಾಗಿಯೂ ಮುಖ್ಯಮಂತ್ರಿ ಸಭೆಗೆ ತಿಳಿಸಿದರು. ಪರಿಶಿಷ್ಟ ಸಮುದಾಯಕ್ಕೆ ಸೇರಿದ ಸಚಿವ ರೊಬ್ಬರನ್ನು ಗುರಿಯಾಗಿಟ್ಟುಕೊಂಡು ರಾಜ್ಯ ಬಿಜೆಪಿ ರಾಜಕೀಯ ಮಾಡಲು ಹೊರಟಿದೆ. ಪ್ರಕರಣವನ್ನು ಸಿಬಿಐಗೆ ವಹಿಸಲು ಇವರ ಪಾತ್ರವೂ ಇರಬಹುದೆಂದು ಕಿಡಿಕಾರಿದ್ದಾರೆ. ಇಲಾಖಾ ಮುಖ್ಯಸ್ಥರು ಮತ್ತು ಕಾನೂನು ತಜ್ಞರಿಂದ ವರದಿ ಪಡೆದ ನಂತರ ನಾಗೇಂದ್ರ ಬಗ್ಗೆ ಶಿಸ್ತು ಕ್ರಮ ಕೈಗೊಳ್ಳುವ ಬಗ್ಗೆ ಸಭೆ ನಿರ್ಧರಿಸಿದೆ. ಆದರೆ, ಇದನ್ನು ನಾವೂ ರಾಜಕೀಯವಾಗೇ ಎದುರಿಸಬೇಕು ಎಂಬ ಮಾತು ಸಭೆಯಲ್ಲಿ ಕೇಳಿಬಂದಿದೆ.

ಮೈಸೂರು ಜಿಲ್ಲೆಗೆ ನೂತನ 50 ಕೆಎಸ್‌ಆರ್‌ಟಿಸಿ ಬಸ್ ಮಂಜೂರು

ಮೈಸೂರು, ಮೇ 31(ಎಂಟಿವೈ)– ರಾಜ್ಯ ಸರ್ಕಾರದ ಮಹತ್ವಕಾಂಕ್ಷೆ ಯೋಜನೆಯಾದ 'ಶಕ್ತಿ' ಯೋಜನೆಯಿಂದಾಗಿ ಸಾರಿಗೆ ಸಂಸ್ಥೆಗಳ ಬಸ್‌ನಲ್ಲಿ ಪ್ರಯಾಣಿಸುವ ಪ್ರಯಾಣಿಕರ ಸಂಖ್ಯೆ ಹೆಚ್ಚಾದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಜಿಲ್ಲೆಗೆ 50ಕ್ಕೂ ಹೆಚ್ಚು ಹೊಸ ಬಸ್‌ಗಳನ್ನು ಮಂಜೂರು ಮಾಡಿದೆ.



ಮೈಸೂರು ನಗರ ವಿಭಾಗಕ್ಕೆ ಬಂದಿರುವ ನೂತನ ಸಾರಿಗೆ ಬಸ್ಸುಗಳು.

ನರ್ಮ್ ಯೋಜನೆಯಲ್ಲಿ ಖರೀದಿಸಿದ 100ಕ್ಕೂ ಹೆಚ್ಚು ಬಸ್‌ಗಳಿಗೆ 15 ವರ್ಷ ಪೂರ್ಣಗೊಂಡ ಹಿನ್ನೆಲೆಯಲ್ಲಿ ಸಾರಿಗೆ ಇಲಾಖೆಯ ನಿಯಮಾನುಸಾರ ಅವಧಿ ಮುಗಿದ ಕೆಲ ಬಸ್‌ಗಳನ್ನು ಸ್ಕ್ರಾಪ್ ಮಾಡಲಾಗಿತ್ತು. ಈ ಹಿನ್ನೆಲೆಯಲ್ಲಿ ಕಳೆದ ಕೆಲವು ದಿನಗಳಿಂದ ಮೈಸೂರಲ್ಲಿ ಪ್ರಯಾಣಿಕರ ಸಂಖ್ಯೆಗೆ ಅನುಗುಣವಾಗಿ ಬಸ್‌ಗಳಿಲ್ಲ ಎಂಬ ಆರೋಪ ಕೇಳಿ ಬಂದಿತ್ತು. ಈ ಹಿನ್ನೆಲೆಯಲ್ಲಿ ಕಳೆದ 5 ದಿನದಿಂದ ಹಂತ ಹಂತವಾಗಿ ಹೊಸ ಬಸ್ಸುಗಳು ನಗರ ವಿಭಾಗಕ್ಕೆ ಸೇರುತ್ತಿದ್ದು, ಪ್ರಯಾಣಿಕರ ಸೇವೆ ಹೊಸ ಬಸ್‌ಗಳು ಅಣಿಯಾಗಿವೆ.

ಕಳೆದ 6 ತಿಂಗಳ ಹಿಂದೆ ಟಾಟಾ ಕಂಪನಿಗೆ ಸೇರಿದ 5 ಬಸ್‌ಗಳನ್ನು ಮೈಸೂರಲ್ಲಿ ಪ್ರಾಯೋಗಿಕವಾಗಿ ಸಂಚರಿಸಲಾಗುತ್ತಿತ್ತು. ಪ್ರಯಾಣಿಕರ ಸಂಖ್ಯೆ, ಚಲಿಸುವ ಮಾರ್ಗ, ಇಂಧನ ಬಳಕೆ ಸೇರಿದಂತೆ ಎಲ್ಲಾ ಆಯಾಮಗಳಲ್ಲೂ ಪರಿಶೀಲಿಸಿದ ಬಳಿಕ ಗ್ರೀನ್ ಸಿಗ್ನಲ್ ನೀಡಲಾಗಿದೆ. ಇದರಿಂದ ಹೊಸದಾಗಿ 50ಕ್ಕೂ ಹೆಚ್ಚು ಬಸ್‌ಗಳು ಮೈಸೂರಿನ ರಸ್ತೆಗಿಳಿಯಲು ಸಜ್ಜಾಗಿವೆ.

ಗ್ರಾಮಾಂತರ ವಿಭಾಗದಲ್ಲಿ ಈಗಾಗಲೇ ಅಶ್ವಮೇಧ ಬಸ್‌ಗಳು ಪ್ರಯಾಣಿಕರ ಮನ ಗೆದ್ದಿದ್ದು, ಇದೀಗ ನಗರ ವಿಭಾಗದಲ್ಲಿ ಬಿಳಿ–ಆಕಾಶ ನೀಲಿ ಬಣ್ಣದ ಬಸ್ಸುಗಳು ಗಮನ ಸೆಳೆಯುತ್ತಿವೆ. ಈಗಾಗಲೇ ಬಂದಿರುವ ಹೊಸ ಬಸ್ಸುಗಳಲ್ಲಿ 2+3 ಆಸನದ ವ್ಯವಸ್ಥೆಯಿದ್ದು, ಗ್ರಾಮಾಂತರ ಪ್ರದೇಶಗಳಿಗೆ ಸಂಚರಿಸಲು ಯೋಗ್ಯವಾಗಿದೆ. ನಗರದ ಪ್ರದೇಶದಲ್ಲಿ ಸಂಚರಿಸುವ ಬಸ್ಸುಗಳಲ್ಲಿ 2+2 ಆಸನದ ಅವಶ್ಯಕತೆ ಇದ್ದು, ಜೂನ್‌ನಲ್ಲಿ ಬರುವ ಹೊಸ ಬಸ್ಸುಗಳು 2+2 ಆಸನವಿರುವಂತೆ ವಿನ್ಯಾಸಗೊಳಿಸಲು ಪ್ರಸ್ತಾವನೆ ಸಲ್ಲಿಸಲಾಗಿದೆ.

ಹೊಸದಾಗಿ ಬಂದಿರುವ ಟಾಟಾ ಬಸ್ಸುಗಳ ಒಳ ವಿನ್ಯಾಸ ಪ್ರಯಾಣಿಕರ ಸ್ನೇಹಿಯಾಗಿರುವಂತೆ ಮಾರ್ಪಾಡು ಮಾಡಲಾಗಿದೆ. ಬಸ್‌ನ ಮೇಲ್ಛಾವಣಿ ಮೇಲೆ ಗಾಳಿ ಬರಲು ಎರಡು ವೆಂಟಿಲೇಟರ್ ವ್ಯವಸ್ಥೆ ಮಾಡಲಾಗಿದ್ದು, ಶಾಲಾ–ಕಾಲೇಜು ವಿದ್ಯಾರ್ಥಿಗಳು ಬ್ಯಾಗ್ ಇಡಲು ಕಂಪಾರ್ಟ್‌ಮೆಂಟ್ ಇದೆ. ಗಾಳಿ, ಬೆಳಕು ಉತ್ತಮವಾಗಿದ್ದು, ಆರಾಮದಾಯಕ ಆಸನದ ವ್ಯವಸ್ಥೆ ಇರುವುದರಿಂದ ಹೊಸ ಬಸ್ ಪ್ರಯಾಣಿಕರ ಸ್ನೇಹಿಯಾಗಿವೆ.

ಎಲೆಕ್ಟ್ರಿಕ್ ಬೋರ್ಡ್ ಇಲ್ಲ: ಮೈಸೂರಲ್ಲಿ ಸಂಚರಿಸುವ ಬಹುತೇಕ ನಗರ ಸಾರಿಗೆ ಬಸ್‌ಗಳಲ್ಲಿ ಅಳವಡಿಸಿರುವ ಬೋರ್ಡ್‌ಗಳು ಎಲೆಕ್ಟ್ರಿಕ್ ಬೋರ್ಡ್‌ಗಳಾಗಿವೆ. ಆದರೆ ಬಹುತೇಕ ಬಸ್‌ಗಳಲ್ಲಿ ಬೋರ್ಡ್‌ಗಳು ಕೆಟ್ಟಿವೆ. ಇದರಿಂದ ಈ ಹಿಂದೆ ಅನುಸರಿಸುತ್ತಿದ್ದಂತೆ ಕೈ ಬರಹವುಳ್ಳ ಬೋರ್ಡ್‌ಗಳನ್ನೇ ನಗರ ಸಾರಿಗೆ ಬಸ್‌ಗಳಲ್ಲಿ ಅಳವಡಿಸಿಕೊಳ್ಳಲಾಗಿದೆ. ಎಲೆಕ್ಟ್ರಿಕ್ ಬೋರ್ಡ್‌ಗಳ ಅಳವಡಿಕೆ ಹೊರೆಯಾಗುವುದರಿಂದ ಹಾಗೂ ಪದೇ ಪದೇ ಕೆಡುತ್ತಿರುವುದರಿಂದ ಕೈ ಬರಹದ ಬೋರ್ಡ್‌ಗಳೇ ಸೂಕ್ತ ಎಂಬ ಅಭಿಪ್ರಾಯ ಪ್ರಯಾಣಿಕರದ್ದಾಗಿದ್ದು, ಆ ನಿಟ್ಟಿನಲ್ಲಿ ಹೊಸ ಬಸ್‌ಗಳಿಗೆ ಬರಹದ ಬೋರ್ಡ್‌ಗೆ ಸ್ಥಳ ಮೀಸಲಿಡಲಾಗಿದೆ.

ನೃಪತುಂಗ ಕನ್ನಡ ಶಾಲೆಯಲ್ಲಿ ಮಕ್ಕಳಿಗೆ ಗುಲಾಬಿ, ಚಾಕ್ಲೇಟ್ ನೀಡಿ ಸ್ವಾಗತ



ಮೈಸೂರು, ಮೇ 31– ಮೈಸೂರಿನ ರಾಮಕೃಷ್ಣನಗರದಲ್ಲಿರುವ ನೃಪತುಂಗ ಕನ್ನಡ ಶಾಲೆಯಲ್ಲಿ ಇಂದು ಅತ್ಯಂತ ಸಡಗರ, ಸಂಭ್ರಮದಿಂದ ಮಕ್ಕಳನ್ನು ಶಾಲೆಗೆ ಸ್ವಾಗತಿಸಲಾಯಿತು.

ಸಂಸ್ಥೆಯ ಉಪಾಧ್ಯಕ್ಷ ಸ.ರ.ಸುದರ್ಶನ ಹಾಗೂ ಕಾರ್ಯದರ್ಶಿ ಸವಿತಾ ಪ ಮಲ್ಲೇಶ್ ಅವರು ಶಾಲೆಗೆ ಬರುವ ಪ್ರತಿ ಮಗುವಿಗೂ ಗುಲಾಬಿ ಹೂವು ಮತ್ತು ಚಾಕ್ಲೇಟ್ ಕೊಟ್ಟು ಸಂತಸದಿಂದ ಸ್ವಾಗತಿಸಿದರು.

ಶಿಕ್ಷಕರು ವಿವಿಧ ನುಡಿಗಟ್ಟು ಮತ್ತು ಘೋಷ ವಾಕ್ಯಗಳ ಚಾರ್ಟ್‌ಗಳನ್ನು ಹಿಡಿದು ನಿಂತು ಮಕ್ಕಳನ್ನು ಆಕರ್ಷಿಸಿದರು.

ವಿಶೇಷವಾಗಿ 'ಬಾ ಮರಳಿ ಶಾಲೆಗೆ', 'Back to School' ಘೋಷವಾಕ್ಯವನ್ನು ಬರೆದ ಸೆಲ್ಫಿ ಕಾರ್ನರ್ ಅನ್ನು ಸಿದ್ಧಪಡಿಸಲಾಗಿತ್ತು. ಮಕ್ಕಳು ಉತ್ಸಾಹದಿಂದ ಇಲ್ಲಿ ಸ್ನೇಹಿತರು, ಶಿಕ್ಷಕರೊಂದಿಗೆ ಫೋಟೋಗಳನ್ನು ಕ್ಲಿಕ್ಕಿಸಿಕೊಂಡರು. ಒಂದರಿಂದ ಏಳನೇ ತರಗತಿಯ ಮಕ್ಕಳಿಗೆ ಉಚಿತ ಪಠ್ಯ ಪುಸ್ತಕಗಳನ್ನು ಹಂಚಲಾಯಿತು.

ಪ್ರಾರ್ಥನೆಯ ಸಮಯದಲ್ಲಿ ಸಂವಿಧಾನ ಪ್ರಸ್ತಾವನೆಯನ್ನು ಮಕ್ಕಳಿಂದ ಹೇಳಿಸಲಾಯಿತು. ವಿಶ್ವ ತಂಬಾಕು ರಹಿತ ದಿನದ ಪ್ರತಿಜ್ಞಾ ವಿಧಿಯನ್ನು ಬೋಧಿಸಲಾಯಿತು. ಈ ದಿನಾಚರಣೆಯ ಪ್ರಯುಕ್ತ ಮಕ್ಕಳಿಗೆ ಚಿತ್ರಕಲೆ ಸ್ಪರ್ಧೆ ಮತ್ತು ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಸಂಸ್ಥೆಯ ಉಪಾಧ್ಯಕ್ಷರು, ಕಾರ್ಯದರ್ಶಿ, ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರಾದ ಶೀಲಾ, ಪ್ರೌಢಶಾಲೆಯ ಮುಖ್ಯ ಶಿಕ್ಷಕರಾದ ಸೌಮ್ಯಶ್ರೀ, ಶಿಕ್ಷಕ ಮತ್ತು ಶಿಕ್ಷಕೇತರ ವರ್ಗದವರು, ಮಕ್ಕಳು ಉಪಸ್ಥಿತರಿದ್ದರು.

ರೋಹಿಣಿ ಸಿಂಧೂರಿ ಅವರಿಂದ ಪಾರಂಪರಿಕ ಶೈಲಿಯ ಪೀಠೋಪಕರಣ ಹಿಂಪಡೆಯಲು ಆಗ್ರಹ

ಈ ಹಿಂದೆ ಡಿಸಿಯಾಗಿ ವರ್ಗಾವಣೆಗೊಂಡು ತೆರಳುವ ವೇಳೆ ಈ ಪೀಠೋಪಕರಣ ಕೊಂಡೊಯ್ದಿದ್ದರು

ಮೈಸೂರು, ಮೇ 31(ಜಿಎ)– ಈ ಹಿಂದೆ ಮೈಸೂರು ಜಿಲ್ಲಾಧಿಕಾರಿ ಆಗಿದ್ದ ರೋಹಿಣಿ ಸಿಂಧೂರಿ ಅವರು ವರ್ಗಾವಣೆಯಾಗಿ ತೆರಳುವ ಸಂದರ್ಭದಲ್ಲಿ ನಗರದ ಆಡಳಿತ ತರಬೇತಿ ಸಂಸ್ಥೆಯ ಅತಿಥಿ ಗೃಹದಲ್ಲಿ ಪಾರಂಪರಿಕ ಶೈಲಿಯ ಪೀಠೋಪಕರಣ ತಮ್ಮೊಡನೆ ಕೊಂಡೊಯ್ದಿದ್ದು, ಅದನ್ನು ಮತ್ತೆ ಹಿಂಪಡೆಯಬೇಕೆಂದು ಮಾಜಿ ಉಪಮೇಯರ್ ವಿ.ಶೈಲೇಂದ್ರ ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೋಹಿಣಿ ಸಿಂಧೂರಿ ಅವರು ಮಾಡಿರುವುದು ಕಳ್ಳತನಕ್ಕೆ ಸಮನಾಗಿದೆ. ಆದರೆ, ಪೀಠೋಪಕರಣಗಳನ್ನು ಹಿಂಪಡೆದು ಅವರ ವಿರುದ್ಧ ಕ್ರಮ ಕೈಗೊಳ್ಳುವ ಬದಲು ಕೇವಲ 77,296 ರೂ.,ಗಳನ್ನು ಅವರ ವೇತನದಲ್ಲಿ ಕಟಾವು ಮಾಡುವಂತೆ ನೋಟಿಸ್ ನೀಡಲು ಸಂಸ್ಥೆಗೆ ಅಧಿಕಾರ ನೀಡಿದವರು ಯಾರು ಎಂದು ಪ್ರಶ್ನಿಸಿದರು. ಆಡಳಿತ ತರಬೇತಿ ಸಂಸ್ಥೆಯ ಅತಿಥಿ ಗೃಹ ಕಟ್ಟಡ ಪಾರಂಪರಿಕವಾದುದಾಗಿದೆ. ಇಲ್ಲಿನ ಪೀಠೋಪಕರಣಗಳು, ಮಂಚ, ಟೀಪಾಯಿ ಸಹಾ ಅಂತಹವೇ ಆಗಿದ್ದು, ಬೀಟೆ ಮರದಿಂದ ತಯಾರಿಸಲಾಗಿದೆ. ಇವುಗಳ ಮೌಲ್ಯ ಕೋಟ್ಯಂತರ ರೂ.,ಗಳಾಗಿವೆ. ಆದರೆ ಈಗ ಕೇವಲ ಅಲ್ಪ ಮೊತ್ತದ ಹಣ ನೀಡುವಂತೆ ಸೂಚಿಸಲಾಗಿದೆ. ಇದು ಸರಿಯಲ್ಲ. ಹೀಗಾಗಿ ಅವುಗಳನ್ನು ಯಥಾವತ್ ವಾಪಸು ನೀಡುವಂತೆ ಸೂಚಿಸಬೇಕು. ಒಂದು ವೇಳೆ ಇದು ವಿಳಂಬವಾದಲ್ಲಿ ಸಂಬಂಧಿತ ಅಧಿಕಾರಿಗಳ ಕಚೇರಿ ಹಾಗೂ ರೋಹಿಣಿ ಸಿಂಧೂರಿ ಅವರ ನಿವಾಸದ ಎದುರು ಧರಣಿ ನಡೆಸಲಾಗುವುದೆಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ನಿಂಗರಾಜು, ಅಮಿತ್‌ರಾಜ್, ಜೀವನ್, ಮಂಜೇಶ್ ಉಪಸ್ಥಿತರಿದ್ದರು.

ಗುರಾಯಿಸಿದ್ದಕ್ಕೆ ನಾಲ್ವರಿಂದ ಇರಿದು ಯುವಕನ ಹತ್ಯೆ

ಮೈಸೂರು, ಮೇ 31(ಆರ್‌ಕೆ)–ಗುರಾಯಿಸಿದ್ದಕ್ಕೆ ನಾಲ್ವರ ಗುಂಪು ಯುವಕನನ್ನು ಚಾಕುವಿನಿಂದ ಇರಿದು ಹತ್ಯೆಗೈದು ಪರಾರಿಯಾಗಿರುವ ಘಟನೆ ಮೈಸೂರಿನ ಶಾಂತಿನಗರದಲ್ಲಿ ಗುರುವಾರ ರಾತ್ರಿ ಸಂಭವಿಸಿದೆ

ಶಾಂತಿನಗರ ನಿವಾಸಿ ಜಾವಿದ್‌ಖಾನ್ ಅವರ ಮಗ ಅರ್ಭಜ್‌ಖಾನ್ (18) ಹತ್ಯೆಯಾದ ಯುವಕ. ಗುರುವಾರ ರಾತ್ರಿ 9 ಗಂಟೆಯಲ್ಲಿ ಮನೆ ಸಮೀಪದ ಅಂಗಡಿ ಬಳಿ ನಾಲ್ವರಿದ್ದ ಗುಂಪಿನ ಕಡೆ ನೋಡಿ, ಗುರಾಯಿಸಿದ ಎಂಬ ಕಾರಣಕ್ಕೆ ಅರ್ಭಜ್ ಖಾನ್‌ನೊಂದಿಗೆ ಅವರು ಜಗಳ ಕಾದಿದ್ದಾರೆ. ಕೆಲ ನಿಮಿಷದಲ್ಲೇ ಸಮಾಧಾನಗೊಂಡು ಅಲ್ಲಿಂದ ನಿರ್ಗಮಿಸಿದ್ದಾರೆ. ಮತ್ತೆ ರಾತ್ರಿ 11 ಗಂಟೆಗೆ ಬಂದು ಅಲ್ಲೇ ಇದ್ದ ಅರ್ಬಜ್ ಖಾನ್‌ನನ್ನು ಚಾಕುವಿನಿಂದ ಇರಿದು ಕೊಲೆ ಮಾಡಿ ಪರಾರಿಯಾಗಿದ್ದಾರೆ. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಉದಯಗಿರಿ ಠಾಣೆ ಇನ್ಸ್‌ಪೆಕ್ಟರ್ ಸುಧಾಕರ್ ಹಾಗೂ ಸಿಬ್ಬಂದಿ ಮಹಜರು ನಡೆಸಿ, ಪ್ರಕರಣ ದಾಖಲಿಸಿಕೊಂಡು ಮೃತದೇಹವನ್ನು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರಕ್ಕೆ ಸ್ಥಳಾಂತರಿಸಿದರು.

ಇಂದು ಬೆಳಗ್ಗೆ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ದೇಹ ಒಪ್ಪಿಸಿದ ಪೊಲೀಸರು, ಹತ್ಯೆಗೈದು ತಲೆಮರೆಸಿಕೊಂಡಿರುವ ಆರೋಪಿಗಳ ಪತ್ತೆಗೆ ಶೋಧ ನಡೆಸುತ್ತಿದ್ದಾರೆ. ಘಟನೆ ನಡೆದ ಸ್ಥಳದ ಸುತ್ತಮುತ್ತ ಅಳವಡಿಸಿರುವ ಸಿಸಿ ಕ್ಯಾಮರಾ ಫುಟೇಜ್‌ಗಳನ್ನು ಪಡೆದು ಸುಳಿವು ಸಂಗ್ರಹಿಸಿದ್ದಾರಲ್ಲದೆ, ಹಂತಕರ ಬೆನ್ನತ್ತಿದ್ದಾರೆ.

ಅನಧಿಕೃತ ಗುಜರಿ ತೆರವಿಗೆ ಆಗ್ರಹಿಸಿ ನಿವಾಸಿಗಳ ಪ್ರತಿಭಟನೆ

ಮೈಸೂರು, ಮೇ 31(ಜಿಎ)– ಮೈಸೂರಿನ ಕೆಸರೆ ಕುರಿಮಂಡಿ ಬ್ಲಾಕ್‌ನಲ್ಲಿರುವ ಅನಧಿಕೃತ ಗುಜರಿಯನ್ನು ತೆರವುಗೊಳಿಸುವಂತೆ ಆಗ್ರಹಿಸಿ ಸ್ಥಳೀಯರು ಶುಕ್ರವಾರ ಪ್ರತಿಭಟನೆ ನಡೆಸಿದರು.



ಮೈಸೂರಿನ ಕೆಸರೆ ಕುರಿಮಂಡಿ ಬ್ಲಾಕ್‌ನಲ್ಲಿರುವ ಅನಧಿಕೃತ ಗುಜರಿಯನ್ನು ತೆರವುಗೊಳಿಸುವಂತೆ ಆಗ್ರಹಿಸಿ ಸ್ಥಳೀಯರು ಶುಕ್ರವಾರ ಪ್ರತಿಭಟನೆ ನಡೆಸಿದರು.

ಪ್ರತಿಭಟನಾಕಾರರು ಮಾತನಾಡಿ, ಕಳೆದ 18 ವರ್ಷಗಳಿಂದ ಈ ಸ್ಥಳದಲ್ಲಿ ಅನಧಿಕೃತವಾಗಿ ಗುಜರಿ ನಡೆಸುತ್ತಿದ್ದಾರೆ. ಈ ಸಂಬಂಧ ಸ್ಥಳೀಯ ಜನ ಪ್ರತಿನಿಧಿಗಳು ಸೇರಿದಂತೆ ಪಾಲಿಕೆ ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ. ಈ ಗುಜರಿಯನ್ನು ಬೆಳಗ್ಗೆ 8ಗಂಟೆಗೆ ತೆರೆದರೆ ತಡರಾತ್ರಿ 12 ಗಂಟೆವರೆಗೂ ವಹಿವಾಟು ನಡೆಸುತ್ತಿದೆ. ಸ್ಥಳೀಯರು ಗುಜರಿ ಮಾಲೀಕರನ್ನು ಪ್ರಶ್ನಿಸಿದರೆ, ಮಹಿಳೆಯರು ಎಂದು ನೋಡದೆ ಅವಾಚ್ಯ ಶಬ್ಧದಿಂದ ನಿಂದಿಸುತ್ತಾರೆ ಎಂದರು. ಗುಜರಿಯಿಂದ ಆರೋಗ್ಯದಲ್ಲಿ ಏರುಪೇರು ಉಂಟಾಗುತ್ತಿದೆ. ಇತ್ತೀಚೆಗೆ ಸ್ಥಳೀಯರು ವಿರೋಧ ವ್ಯಕ್ತಪಡಿಸಿ ಗುಜರಿಗೆ ಬೀಗ ಹಾಕಲು ಮುಂದಾದಾಗ ಗುಜರಿಯ ಮಾಲೀಕ ಮತ್ತು ಅವರ ಪತ್ನಿ ಸ್ಥಳೀಯರ ಮೇಲೆ ಹಲ್ಲೆ ನಡೆಸಿದ್ದಾರೆ. ಈ ವೇಳೆ ಒಬ್ಬರಿಗೆ ತೀವ್ರ ಪೆಟ್ಟಾಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಈ ಸಂಬಂಧ ಎನ್‌ಆರ್ ಠಾಣೆ ಯಲ್ಲಿ ಪ್ರಕರಣ ದಾಖಲಾಗಿದ್ದು, ಪಾಲಿಕೆ ಅಧಿಕಾರಿಗಳಾಗಲೀ ಅಥವಾ ಪೊಲೀಸರು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರಿನ ಹೆಸರಾಂತ ಉದ್ಯಮಿ–ಧಾನಿ ಡಾ.ಜಗನ್ನಾಥ್ ಶೆಣೈಗೆ 'ಧರ್ಮ ರತ್ನಾಕರ' ಪ್ರಶಸ್ತಿ ಪ್ರದಾನ

● ಸಮಾಜ ಸೇವೆ ಮಾಡುವವರ ಸಂಖ್ಯೆ ಹೆಚ್ಚಾಗಲಿ ● ಆದಿಚುಂಚನಗಿರಿ ಶಾಖಾ ಮಠದ ಶ್ರೀಗಳ ಆಶಯ

ಮೈಸೂರು, ಮೇ 31(ಎಂಕೆ)– ಮೈಸೂರಿನ ಖ್ಯಾತ ಉದ್ಯಮಿ, ಗಣೇಶ ಬೀಡಿ ವರ್ಕ್ಸ್ ಮ್ಯಾನೇಜಿಂಗ್ ಟ್ರಸ್ಟಿಗಳಾದ ಡಾ.ಎಂ.ಜಗನ್ನಾಥ್ ಶೆಣೈ ಅವರಿಗೆ ಶ್ರೀ ಕೃಷ್ಣ ಗಾನಸಭಾ ವತಿಯಿಂದ 'ಧರ್ಮ ರತ್ನಾಕರ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮೈಸೂರಿನ ಗೋಕುಲಂನಲ್ಲಿರುವ ಆಳ್ವಾರ್ ಕಲಾಭವನದಲ್ಲಿ ಶುಕ್ರವಾರ ಆಯೋಜಿಸಿದ್ದ ಗೌರವ ಸಮರ್ಪಣೆ ಮತ್ತು ಸಂಗೀತ ಕಾರ್ಯಕ್ರಮದಲ್ಲಿ ಎಂ.ಗೋವಿಂದ ರಾವ್ ಮತ್ತು ಶ್ರೀಮತಿ ಟಿ.ರಮಾಬಾಯಿಯವರ ಜ್ಞಾಪಕಾರ್ಥ ಪ್ರಶಸ್ತಿ ಪ್ರದಾನ ಮಾಡಲಾಯಿತು. ಪ್ರಶಸ್ತಿ ಪ್ರದಾನ ಮಾಡಿದ ಮೈಸೂರಿನ ಆದಿಚುಂಚನಗಿರಿ ಶಾಖಾ ಮಠದ ಮಠಾಧೀಶರಾದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಮಾತನಾಡಿ, ಜಗನ್ನಾಥ್ ಶೆಣೈ ಅವರು ಹಿಂದಿನಿಂದಲೂ ಸಾಮಾಜಿಕವಾಗಿ ತಮ್ಮನ್ನು ತಾವು ತೊಡಗಿಸಿಕೊಂಡು, ತಾವು ಬಾಳುವುದರ ಜೊತೆಗೆ ಸಮಾಜದ ಸ್ವಸ್ಥತೆಯನ್ನು ಜೊತೆ ಜೊತೆಯಲ್ಲಿ ತೆಗೆದುಕೊಂಡುವ ಹೋಗುವ ಅವರಲ್ಲಿನ ಧಾರ್ಮಿಕ ಭಾವನೆಗಾಗಿ ಧರ್ಮ ರತ್ನಾಕರ ಎಂದು ಬಿರುದು ನೀಡಲಾಗಿದೆ ಎಂದರು.

ನಮ್ಮ ಜೊತೆಗೆ ಜಗನ್ನಾಥ್ ಶೆಣೈ ಅವರಂತೆಯೇ ಸಮಾಜ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವವರು ಸಾಕಷ್ಟು ಜನರಿದ್ದಾರೆ. ಅವರೆಲ್ಲರಿಗೂ ಈ ಪ್ರಶಸ್ತಿ ಪ್ರದಾನ ಪ್ರೇರಣೆಯಾಗಿದೆ. ಸಮಾಜ ಸೇವಕರನ್ನು ಗುರ್ತಿಸಿ, ಅವರಿಗೂ ಗೌರವ ಸಮರ್ಪಣೆ ಮಾಡಿ ಪ್ರೋತ್ಸಾಹದಾಯಕ ನುಡಿಗಳನ್ನಾಡಿದರೆ, ಅವರೂ ಸಮಾಜಕ್ಕೆ ತಮ್ಮ ಅಮೂಲ್ಯ



ಮೈಸೂರಿನ ಖ್ಯಾತ ಉದ್ಯಮಿ ಡಾ.ಎಂ.ಜಗನ್ನಾಥ್ ಶೆಣೈ ಅವರಿಗೆ ಶ್ರೀ ಕೃಷ್ಣ ಗಾನಸಭಾ ವತಿಯಿಂದ 'ಧರ್ಮ ರತ್ನಾಕರ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಶ್ರೀ ಕೃಷ್ಣ ಗಾನಸಭಾ ಅಧ್ಯಕ್ಷ ಬಿ.ಎಸ್.ಶ್ರೀಧರ ರಾಜೇ ಅರಸ್ ಮತ್ತಿತರರಿದ್ದರು.

ಸೇವೆ ನೀಡಲಿದ್ದಾರೆ. ಜಗನ್ನಾಥ್ ಶೆಣೈ ಅವರಂತಹ ಧರ್ಮಕಾರ್ಯ ಮಾಡುವವರು ಸ್ವತಃ ಮುಂದೆ ಬಂದು ಸಮಾಜದಲ್ಲಿ ತೊಡಗಿಕೊಂಡರೆ ಸ್ವಸ್ಥ ಸಮಾಜ ನಿರ್ಮಾಣ ಸಾಧ್ಯವಾಗಲಿದೆ ಎಂದು ತಿಳಿಸಿದರು. 'ಧರ್ಮ ರತ್ನಾಕರ' ಪ್ರಶಸ್ತಿ ಸ್ವೀಕರಿಸಿದ ಬಳಿಕ ಮಾತನಾಡಿದ ಉದ್ಯಮಿ ಡಾ.ಎಂ.ಜಗನ್ನಾಥ್ ಶೆಣೈ, ನನಗೆ ಕಲೆ ಮೇಲೆ ತುಂಬಾ ಪ್ರೀತಿ ಮತ್ತು ವಿಶ್ವಾಸ. ಕಲೆ, ಸಾಹಿತ್ಯ, ಸಂಗೀತ ಬೆಳೆಯಬೇಕಾದರೆ ಯುವ ಕಲಾವಿದರಿಗೆ ಬೆಳೆಯಬೇಕು. ಹಾಗಾಗಿ ಈ ಕಾರ್ಯಕ್ರಮದಲ್ಲಿಯೂ ಯುವ ಕಲಾವಿದರಿಗೆ ಪ್ರಾಶಸ್ತ್ಯ ನೀಡಲಾಗಿದೆ. ಯುವ ಪೀಳಿಗೆಗೆ ಹಿಂದಿನ ಕಾಲದಲ್ಲಿ ನಮ್ಮ ಕಲೆ, ಸಂಸ್ಕೃತಿ ಹೇಗಿತ್ತು. ಮುಂದೆ ಏನಾಗಬೇಕು ಎಂಬ ಅರಿವನ್ನು ಮೂಡಿಸಬೇಕು ಎಂದರು.

ಧರ್ಮೋ ರಕ್ಷತಿ ರಕ್ಷಿತಃ..: ಧರ್ಮೋ ರಕ್ಷತಿ ರಕ್ಷಿತಃ ಎಂಬಂತೆ ನಾವು ಧರ್ಮದ ರಕ್ಷಣೆಯನ್ನು ಧರ್ಮ ಕಾರ್ಯಗಳ ಮೂಲಕ ಮಾಡಬೇಕು. ಯಾವುದೇ ಒಂದು ಒಳ್ಳೆಯ ಕಾರ್ಯವನ್ನು ಮಾಡಲು ಮನಸ್ಸು ಮುಖ್ಯ. ಒಳ್ಳೆಯ ಕೆಲಸಗಳ ಮೂಲಕ ದೇಶ ಕಲೆ, ಸಾಹಿತ್ಯ, ಸಂಸ್ಕೃತಿಯನ್ನು ಉಳಿಸಬೇಕಾದರೆ ತಂದೆ–ತಾಯಿ ಮತ್ತು ಗುರುಗಳ ಆಶೀರ್ವಾದಬೇಕು. ಗುರುಗಳು ಯಾವಾಗಲೂ ಬೆಂಬಲವಾಗಿರುತ್ತಾರೆ. ನೀಡಿರುವ ಅಲ್ಪ ಸೇವೆಗೆ ಈ ಪ್ರಶಸ್ತಿ ನೀಡಿದ್ದಾರೆ ಎನ್ನುವ ಮೂಲಕ ಹೃದಯ ವೈಶಾಲ್ಯತೆ ತೋರಿದರು. ಶ್ರೀ ಕೃಷ್ಣ ಗಾನ ಸಭಾ ಅಧ್ಯಕ್ಷ ಬಿ.ಎಸ್.ಶ್ರೀಧರ ರಾಜೇ ಅರಸ್, ಕಾರ್ಯದರ್ಶಿ ಮಹೇಶ್, ನಮ್ರತಾ ಜೋಯಿಸ್ ಮತ್ತಿತರರಿದ್ದರು.

ಅವಳಿ ಸಹೋದರಿಯರಿಂದ ಸುಗಮ ಸಂಗೀತ ಕಾರ್ಯಕ್ರಮ...

ಪ್ರಶಸ್ತಿ ಪ್ರದಾನದ ಬಳಿಕ ಅವಳಿ ಸಹೋದರಿಯರಾದ ನಿಸರ್ಗ ಮತ್ತು ವಿಸ್ಮಯ ಸುಗಮ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ಹತ್ತಾರು ಭಕ್ತಿ ಹಾಗೂ ಜಾನಪದ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುವ ಮೂಲಕ ನೆರೆದಿದ್ದವರ ಮನ ತಣಿಸಿದರು. ಕೀಬೋರ್ಡ್ ವಾದನದಲ್ಲಿ ಗಣೇಶ್ ಭಟ್, ತಬಲ ವಾದನದಲ್ಲಿ ಆತ್ಮಾರಾಮ ಹಾಗೂ ರಿದಂ ಪ್ಯಾಡ್‌ನಲ್ಲಿ ವಿನಯ ರಂಗದೋಳ್ ಉತ್ತಮ ಸಹಕಾರ ನೀಡಿದರು.

ಬೇಸಿಗೆ ರಜೆ ಮುಗಿಸಿ ಬಂದ ಚಿಣ್ಣರಿಗೆ ಅದ್ದೂರಿ ಸ್ವಾಗತ

- ಅಲಂಕೃತಗೊಂಡ ಎತ್ತಿನಗಾಡಿಯಲ್ಲಿ ಮಕ್ಕಳ ಮೆರವಣಿಗೆ
- ಹೋಳಿಗೆ ಸವಿದು ಸಂತಸಪಟ್ಟ ವಿದ್ಯಾರ್ಥಿಗಳು



ಹಿರೀಕ್ಯಾತನಹಳ್ಳಿ ವಿದ್ಯಾರ್ಥಿಗಳು ಎತ್ತಿನಗಾಡಿಯಲ್ಲಿ ಶಾಲೆಗೆ ಆಗಮಿಸಿದರು.

ಹಿರೀಕ್ಯಾತನಹಳ್ಳಿ, ಮೇ 31– ಎತ್ತಿನಗಾಡಿ ಏರಿ ಶಾಲೆಗೆ ಬಂದ ವಿದ್ಯಾರ್ಥಿಗಳು, ಅವರನ್ನು ಅದ್ದೂರಿಯಾಗಿ ಸ್ವಾಗತಿಸಿದ ಶಿಕ್ಷಕರು, ನಂತರ ಹೋಳಿಗೆ ಊಟ ಸವಿದು ಸಂತಸಪಟ್ಟ ವಿದ್ಯಾರ್ಥಿಗಳು. ಇವು ಹುಣಸೂರು ತಾಲೂಕಿನ ಹಿರೀಕ್ಯಾತನಹಳ್ಳಿ ಶಾಲೆಯಲ್ಲಿ ಪ್ರಸಕ್ತ ಸಾಲಿನ ತರಗತಿಗಳು ಪ್ರಾರಂಭವಾದ ಹಿನ್ನೆಲೆಯಲ್ಲಿ ಶುಕ್ರವಾರ ಕಂಡು ಬಂದ ದೃಶ್ಯಗಳು.

ಪ್ರಸಕ್ತ ಸಾಲಿನ ತರಗತಿಗಳು ಪ್ರಾರಂಭವಾದ ಹಿನ್ನೆಲೆಯಲ್ಲಿ ಇಲ್ಲಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಮಕ್ಕಳನ್ನು ಅದ್ದೂರಿಯಾಗಿ ಬರಮಾಡಿಕೊಳ್ಳುವ ಮೂಲಕ ವಿಶೇಷವಾಗಿ ಶೈಕ್ಷಣಿಕ ವರ್ಷಕ್ಕೆ ಸ್ವಾಗತ ಕೋರಲಾಯಿತು. ಬೇಸಿಗೆ ರಜೆ ಮುಗಿಸಿ ಶಾಲೆಯತ್ತ ಮುಖ ಮಾಡಿದ ಚಿಣ್ಣರನ್ನು ಬಣ್ಣ ಬಣ್ಣದ ಬಂಟಿಂಗ್ಸ್, ಹೂ, ಬಾಳೆ ಕಂದು, ಮಾವಿನ ಸೊಪ್ಪಿನಿಂದ ಅಲಂಕಾರಗೊಂಡ ಎತ್ತಿನಗಾಡಿಯಲ್ಲಿ ಮೆರವಣಿಗೆಯಲ್ಲಿ ಶಾಲೆಗೆ ಕರೆತರಲಾಯಿತು. ಬಳಿಕ ಶಾಲಾವರಣದಲ್ಲಿರುವ ಸರಸ್ವತಿ ವಿಗ್ರಹಕ್ಕೆ ಹಣ್ಣು ತುಪ್ಪ ಜೊತೆಗೆ ಪಂಚಾಮೃತ ನೈವೇದ್ಯ ಮಾಡಿ ವಿಶೇಷವಾಗಿ ಪೂಜೆ ಸಲ್ಲಿಸಿ ವಿದ್ಯಾರ್ಥಿಗಳಿಗೆ ಮಹಾಮಂಗಳಾರತಿ ನೀಡಲಾಯಿತು.

ಬಳಿಕ ಗ್ರಾಮದೇವತೆ ಶ್ರೀಮಲ್ಲಿಕಾರ್ಜುನಸ್ವಾಮಿ ದೇವಸ್ಥಾನಕ್ಕೆ ಕೆಲ ವಿದ್ಯಾರ್ಥಿಗಳು ಎತ್ತಿನಗಾಡಿಯಲ್ಲಿ ಹೊರಟರೆ, ಇನ್ನೂ ಕೆಲವು ವಿದ್ಯಾರ್ಥಿಗಳು ಕಳಸ ಹೊತ್ತು, ಬ್ಯಾಂಡ್‌ಸೆಟ್ ಬಾರಿಸುತ್ತಾ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯಲ್ಲಿ ತೆರಳಿ ದೇವರ ದರ್ಶನ ಮಾಡಿ ಶಾಲೆಗೆ ಆಗಮಿಸಿದರು. ಮಕ್ಕಳೊಂದಿಗೆ ಶಿಕ್ಷಕರು ಹೆಜ್ಜೆ ಹಾಕಿದರು. ಇದೇ ವೇಳೆ ಮಕ್ಕಳಿಗೆ ಹೋಳಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು.

ಮುಖ್ಯ ಶಿಕ್ಷಕಿ ಸರಳ ಮಾತನಾಡಿ, ಈ ದಿನ ಯುಗಾದಿ ಹೊಸ ವರ್ಷದ ಹಬ್ಬದಂತೆ ಗೋಚರವಾಗುತ್ತಿದೆ. ಕಳೆದ 45 ದಿನಗಳಿಂದ ಮಕ್ಕಳೊಂದಿಗೆ ಒಡನಾಟ ಇಲ್ಲದೆ ಬೇಸರವಾಗುತ್ತಿತ್ತು. ಆದರೆ ಇಂದು ಈ ದಿನ ಚಿಟ್ಟೆಗಳ ರೀತಿ ಶಾಲಾವರಣದಲ್ಲಿ ಮಕ್ಕಳು ಹಾರಾಡುತ್ತಿರುವುದು ಖುಷಿ ತಂದಿದೆ. ಶಿಕ್ಷಣ ಇಲಾಖೆ ಆದೇಶದಂತೆ ನಾವೆಲ್ಲಾ ಸಕಾಲಕ್ಕೆ ಆಗಮಿಸಿ ಮಕ್ಕಳನ್ನು ಸ್ವಾಗತಿಸಿ, ಗ್ರಾಮದಲ್ಲಿ ದಾಖಲಾತಿ ಆಂದೋಲನ ನಡೆಸಿ ಸರ್ಕಾರ ನೀಡುವ ಸೌವಲತ್ತುಗಳ ಬಗ್ಗೆ ಪೋಷಕರಿಗೆ ಮನವರಿಕೆ ಮಾಡಿಕೊಟ್ಟು ಸರ್ಕಾರಿ ಶಾಲೆಗೆ ದಾಖಲಿಸುವಂತೆ ಮನವೊಲಿಸುತ್ತಿದ್ದೇವೆ ಎಂದರು. ಇದೇ ವೇಳೆ ಗಾವಡಗೆರೆ ಹೋಬಳಿ ವ್ಯಾಪ್ತಿಯ ಮೈಲಾಂಬೂರು, ಹಿರೀಕ್ಯಾತನಹಳ್ಳಿ, ಹರವೆ, ಜಾಬಗೆರೆ, ಕಟ್ಟೆಮಳಲವಾಡಿ, ಮಂಚಬಾಯನಹಳ್ಳಿ, ಮರೂರು, ಶಿರೇನಹಳ್ಳಿ, ಅತ್ತಿಗುಪ್ಪೆ, ಬಿಳಿಗೆರೆ ಮುಂತಾದ ಗ್ರಾಮಗಳ ಶಾಲೆಗಳಲ್ಲೂ ವಿದ್ಯಾರ್ಥಿಗಳನ್ನು ಬರಮಾಡಿಕೊಳ್ಳಲಾಯಿತು.

ಈ ವೇಳೆ ಸಹ ಶಿಕ್ಷಕರಾದ ಮಹೇಶ್, ಚಿಕ್ಕಣ್ಣ, ಮಮತಾ, ಶಿಲ್ಪ, ಭಾರತಿ, ಅಯ್ಯಪ್ಪ, ಜೂಲಿಯಟ್ ಡೈನಾ ಟೆಲಿಸ್, ಹರವೆ ಪ್ರೌಢಶಾಲೆ ಮುಖ್ಯ ಶಿಕ್ಷಕ ಮಧು, ವಿವಿಧ ಶಾಲೆಗಳ ಹಿರಿಯ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕರು ಮಹೇಶ್, ವೇಣುಗೋಪಾಲ್, ಆನಂದ್, ಶಿವಣ್ಣ, ಅರವಿಂದ, ರಾಚಯ್ಯ, ಉಮೇಶ್ ಹಾಗೂ ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳು, ಪೋಷಕರು ಇದ್ದರು.

ಹರವೆ ಶಾಲೆಯಲ್ಲೂ ಮಕ್ಕಳಿಗೆ ಸ್ವಾಗತ

ಹರವೆ ಶಾಲೆಯಲ್ಲಿ ಮಕ್ಕಳಿಗೆ ಗುಲಾಬಿ ಹೂ ನೀಡುವ ಮೂಲಕ ಸ್ವಾಗತಿಸಲಾಯಿತು. ನಂತರ ಮಾತನಾಡಿದ ಸಿಆರ್‌ಪಿ ತೀರ್ಥ ಕುಮಾರ್, ಶೈಕ್ಷಣಿಕ ವರ್ಷದಲ್ಲಿ ಶಿಕ್ಷಣದ ಗುಣಮಟ್ಟ ಉತ್ತಮಪಡಿಸಲು ಹಾಗೂ ಸರ್ಕಾರಿ ಶಾಲೆಗಳ ಬಲವರ್ಧನೆಗೆ ಶಿಕ್ಷಣ ಇಲಾಖೆ ಸಾಕಷ್ಟು ಯೋಜನೆಗಳನ್ನು ಜಾರಿಗೊಳಿಸಿದೆ. ಇದನ್ನು ಪೋಷಕರು ಅರಿತು ಮಕ್ಕಳನ್ನು ಸರ್ಕಾರಿ ಶಾಲೆಗೆ ದಾಖಲಿಸುವಂತೆ ಮನವಿ ಮಾಡಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಗಂ ಗಂ ಗಣೇಶ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಗ್ಯಾಂಗ್ಸ್ ಆಫ್ ಗೋಧಾವರಿ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕ್ರೂ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಅರನ್‌ಮನೆ (ತ)	4 ಪ್ರದರ್ಶನಗಳು
ಗಾಯಿತ್ರಿ	
ಜಡ್ಜ್‌ಮೆಂಟ್ (ಕ)	4 ಪ್ರದರ್ಶನಗಳು
ರಾಜಕಮಲ್	
ಹಿಟ್‌ಲಿಸ್ಟ್ (ತ)	4 ಪ್ರದರ್ಶನಗಳು
ಸಂಗಂ	
ಗರುಡನ್ (ತ)	4 ಪ್ರದರ್ಶನಗಳು
ಲಿಡೋ	
ಅಂಜನೀಪುತ್ರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ನೈಟ್ ಕರ್ಫ್ಯೂ (ಕ)	4 ಪ್ರದರ್ಶನಗಳು
ಪ್ರಭಾ	
ಕೃಷ್ಣಾ ನೀ ಬೇಗನೆ ಬಾರೋ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಥಾಲವನ್ (ಮ): ಬೆ.11.15ಕ್ಕೆ, ಗಾರ್ಫೀಲ್ಡ್ ಮೂವಿ (3ಡಿ)(ಇಂ): ಮ.2ಕ್ಕೆ, ಹಿಟ್ ಲಿಸ್ಟ್ (ತ): ಸಂ.4.15ಕ್ಕೆ, ಗ್ಯಾಂಗ್ಸ್ ಆಫ್ ಗೋಧಾವರಿ (ತೆ): ರಾ.7ಕ್ಕೆ, ಗಂ ಗಂ ಗಣೇಶ (ತೆ): ರಾ.9.55ಕ್ಕೆ.
ಸ್ಕ್ರೀನ್ 2	ಗರುಡನ್ (ತ): ಬೆ.11ಕ್ಕೆ, ಮ.1.45ಕ್ಕೆ, ಭಜೆ ವಾಯು ವೇಗಂ (ತೆ): ಸಂ.4.35ಕ್ಕೆ, ಮಂದಾಕಿನಿ (ಮ): ರಾ.7.20ಕ್ಕೆ, ಅರನ್‌ಮನೈ 4 (ಹಿಂ): ರಾ.10ಕ್ಕೆ
ಸ್ಕ್ರೀನ್ 3	ಭೋಟಾ ಭೀಮ್ ಅಂಡ್ ದಿ ಕರ್ಸ್ (ಹಿಂ): ಬೆ.10.35ಕ್ಕೆ, ಸಂ.4.25ಕ್ಕೆ, ಟರ್ಬೋ (ಮ): ಮ.1.25ಕ್ಕೆ, ದಿ ಜಡ್ಜ್‌ಮೆಂಟ್ (ಕ): ರಾ.7.05ಕ್ಕೆ, ಒನ್ಸ್ ಅಪೋನ್ ಎ ಟೈಂ ಇನ್ ಕೊಚ್ಚಿ (ಮ): ರಾ.10ಕ್ಕೆ.
ಸ್ಕ್ರೀನ್ 4	ಮಿಸ್ಟರ್ ಅಂಡ್ ಮಿಸಸ್ ಮಹಿ (ಹಿಂ): ಬೆ.10.35ಕ್ಕೆ, ಮ.1.25ಕ್ಕೆ, ಸಂ.4.15ಕ್ಕೆ, ರಾ.7.05ಕ್ಕೆ, ರಾ.9.55ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಗಾರ್ಫೀಲ್ಡ್ ಮೂವಿ (3ಡಿ)(ಇಂ): ಬೆ.10.40ಕ್ಕೆ, ಮ.1ಕ್ಕೆ, ಸಂ.6.10ಕ್ಕೆ, ರಾ.8.30ಕ್ಕೆ, ಇಂಗ ನಾನ್ ಥಾನ್ ಕಿಂಗು (ತ): ಮ.3.20ಕ್ಕೆ.
ಸ್ಕ್ರೀನ್ 2	ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ರಾ.7.05ಕ್ಕೆ, ಶ್ರೀಕಾಂತ್ (ಹಿಂ): ಮ.1.05ಕ್ಕೆ, ರಾ.10.10ಕ್ಕೆ,
ಸ್ಕ್ರೀನ್ 3	ಇಂಗ ನಾನ್ ಥಾನ್ ಕಿಂಗು (ತ): ಬೆ.11.05ಕ್ಕೆ, ಇಫ್ 2024 (ಇಂ): ಮ.1.55ಕ್ಕೆ, ರಾ.7.35ಕ್ಕೆ, A (ಕ): ಸಂ.4.20ಕ್ಕೆ, ಗುರುವಾಯೂರ್ ಅಂಬಲನಾಡಿಯಿಲ್ (ಮ): ರಾ.10ಕ್ಕೆ.
ಸ್ಕ್ರೀನ್ 4	ರಾಮನ ಅವತಾರ (ಕ): ಮ.12.45ಕ್ಕೆ, ಕೃಷ್ಣ ನೀ ಬೇಗನೇ ಬಾರೋ (ಕ): ಮ.3.40ಕ್ಕೆ, ಇಂಗ ನಾನ್ ಥಾನ್ ಕಿಂಗು (ತ): ಸಂ.6.55ಕ್ಕೆ, ಅರಮನೈ 4 (ತ): ರಾ.9.45ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821-2973519

ಸ್ಕ್ರೀನ್ 1	ಎವಿಡೆನ್ಸ್ (ಕ): ಬೆ.11.15ಕ್ಕೆ, ಅರನ್‌ಮನೈ 4 (ತ): ಮ.1.15ಕ್ಕೆ, ಟರ್ಬೋ (ಮ): ಸಂ.4ಕ್ಕೆ, ಮೂರನೇ ಕೃಷ್ಣಪ್ಪ (ಕ): ಸಂ.6.40ಕ್ಕೆ, ದಿ ಜಡ್ಜ್‌ಮೆಂಟ್ (ಕ): ರಾ.9.30ಕ್ಕೆ.
ಸ್ಕ್ರೀನ್ 2	ಫ್ಯೂರಿಯೋಸ ಎ ಮ್ಯಾಡ್ ಮ್ಯಾಕ್ಸ್ ಸಾಗಾ (ಇಂ): ಬೆ.10.20ಕ್ಕೆ, ಸಂ.4.05ಕ್ಕೆ, ಟರ್ಬೋ (ಮ): ಮ.1.05ಕ್ಕೆ, ಸಂ.6.50ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ದಿ ಜಡ್ಜ್‌ಮೆಂಟ್ (ಕ): ಬೆ.10.40ಕ್ಕೆ, ಮ.3.55ಕ್ಕೆ, 3ದೇವಿ (ಕ): ಮ.1.30ಕ್ಕೆ, ಫ್ಯೂರಿಯೋಸ ಎ ಮ್ಯಾಡ್ ಮ್ಯಾಕ್ಸ್ ಸಾಗಾ (ಇಂ): ಸಂ.6.45ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ

ಗರುಡ ಮಾಲ್,
1ನೇ ಮಹಡಿ, ಮೊ.ನಂ: 9901373210

ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1.15ಕ್ಕೆ, ಮ.3.40ಕ್ಕೆ, ರಾ.7.15ಕ್ಕೆ, ರಾ.10ಕ್ಕೆ, ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10.05ಕ್ಕೆ, ಮ.12ಕ್ಕೆ, ಮ.3.10ಕ್ಕೆ, ಸಂ.6.20ಕ್ಕೆ, ರಾ.9.30ಕ್ಕೆ, ಸ್ಟಾರ್ (ತ): ಮ.1ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, 4N6 (ಕ): ಮ.1.05ಕ್ಕೆ, ಅಂಜನೀಪುತ್ರ (ಕ): ಸಂ.4.15ಕ್ಕೆ, ಕೃಷ್ಣಮ್ಮ (ತೆ): ಸಂ.4.20ಕ್ಕೆ, ರಾ.10.15ಕ್ಕೆ, ಪವರ್ (ಕ): ಸಂ.6.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮರಿತಿಬ್ಬೇಗೌಡರನ್ನು ಗೆಲ್ಲಿಸಲು ಶಾಸಕ ದರ್ಶನ್ ಮನವಿ



ಮರಿತಿಬ್ಬೇಗೌಡರ ಪರ ಶಾಸಕ ದರ್ಶನ್ ಮತಯಾಚಿಸಿದರು.

ಮಲ್ಲುಂಡಿ, ಮೇ 31– ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದು, ಶಿಕ್ಷಕರ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಸೂಕ್ತ ಪರಿಹಾರ ಒದಗಿಸಲು ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರಿಗೆ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಮೊದಲ ಪ್ರಾಶಸ್ತ್ಯದ ಮತಗಳನ್ನು ನೀಡಿ ಗೆಲ್ಲಿಸಬೇಕು ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ಮನವಿ ಮಾಡಿದರು.

ಸಮೀಪದ ಹುರ, ಮಡುವಿನ ಹಳ್ಳಿ, ಹೆಡಿಯಾಲ ಗ್ರಾಮಗಳ ಶಾಲೆಗಳಲ್ಲಿ ಮತಯಾಚಿಸಿ ಮಾತನಾಡಿದ ಅವರು, ನಾಲ್ಕು ಬಾರಿ ವಿಧಾನ ಪರಿಷತ್ ಸದಸ್ಯರಾಗಿರುವ ಅನುಭವಿ ರಾಜಕಾರಣಿ ಮರಿತಿಬ್ಬೇಗೌಡರು ಶಿಕ್ಷಕರ ಸಮಸ್ಯೆಗಳನ್ನು ಪರಿಷತ್‌ನಲ್ಲಿ ಪ್ರಬಲವಾಗಿ ಮಂಡಿಸಿ ಅವುಗಳಿಗೆ ಸೂಕ್ತ ಪರಿಹಾರ ಒದಗಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದರು.

ದಕ್ಷಿಣ ಶಿಕ್ಷಕರ ಕ್ಷೇತ್ರದ ಮೈತ್ರಿ ಅಭ್ಯರ್ಥಿ ವಿವೇಕಾನಂದ ಓರ್ವ ಉದ್ಯಮಿ. ಅವರಿಗೆ ಶಿಕ್ಷಕರ ಜೊತೆ ಒಡನಾಟವಿಲ್ಲ. ಶಿಕ್ಷಕರ ಬಗ್ಗೆ ಅರಿವಿಲ್ಲ. ಶಿಕ್ಷಕರ ಬಗ್ಗೆ ಅರಿವಿರುವ ಮರಿತಿಬ್ಬೇಗೌಡರು ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರಿಗೆ ಮೊದಲನೇ ಪ್ರಾಶಸ್ತ್ಯದ ಮತ ನೀಡಿ ಗೆಲ್ಲಿಸಬೇಕು ಎಂದು ಮನವಿ ಮಾಡಿದರು. ಈ ವೇಳೆ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಜಿ.ಮಹೇಶ್, ಶ್ರೀಕಂಠನಾಯಕ, ಜಿಪಂ ಮಾಜಿ ಸದಸ್ಯ ಕೆ.ಮಾರುತಿ, ಲತಾ, ಮುಖಂಡರಾದ ಶಿವಪ್ಪದೇವರು, ದೊರೆಸ್ವಾಮಿ ನಾಯಕ, ಶಿವಾನಾಗಪ್ಪ ಅಭಿನಂದನ್ ಪಾಟೀಲ್, ಗ್ರಾಪಂ ಸದಸ್ಯ ಗೋವಿಂದರಾಜು, ಅಸ್ರಫ್ ಅಲಿ, ಸುಬ್ರಹ್ಮಣ್ಯ, ನಾಗರಾಜೇಗೌಡ, ಶಿವನಾಗಪ್ಪ ಸೇರಿದಂತೆ ಇತರರಿದ್ದರು.

ಪುಸ್ತಕ, ಹೂಗುಚ್ಛ ನೀಡಿ ಸ್ವಾಗತ



ಶುಕ್ರವಾರದಿಂದ ಶೈಕ್ಷಣಿಕ ವರ್ಷದ ತರಗತಿಗಳು ಪ್ರಾರಂಭವಾದ ಹಿನ್ನೆಲೆಯಲ್ಲಿ ಮೈಸೂರು ತಾಲೂಕಿನ ಕಡಕೊಳ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಪುಸ್ತಕ, ಹೂಗುಚ್ಛ ನೀಡಿ ಸ್ವಾಗತಿಸಲಾಯಿತು. ಈ ವೇಳೆ ದಿ ಯೂನಿಯನ್ ರೈತ ಸಹಕಾರ ಬ್ಯಾಂಕ್ ಉಪಾಧ್ಯಕ್ಷ ಕಡಕೊಳ ಕುಮಾರಸ್ವಾಮಿ, ಶಾಲೆ ಮುಖ್ಯೋಪಾಧ್ಯಾಯ ದುಂಡಯ್ಯ, ದೈಹಿಕ ಶಿಕ್ಷಣ ಶಿಕ್ಷಕ ಕುಮಾರ್, ಶಿಕ್ಷಕಿ ಸುಮತಿ, ಹಿರಿಯ ಆರೋಗ್ಯಾಧಿಕಾರಿ ರಾಜೇಶ್, ಶ್ಯಾಮ್ ಮಹೇಶ್, ಕಾರ್ತಿಕ್ ಇತರರಿದ್ದರು.

ಕೆ.ವಿವೇಕಾನಂದ ಪರ ಮತಯಾಚನೆ



ಪಿರಿಯಾಪಟ್ಟಣದ ವಿದ್ಯಾ ವಿಕಾಸ್ ಸೇರಿದಂತೆ ವಿವಿಧೆಡೆ ಬಿಜೆಪಿ ಮುಖಂಡರು ವಿಧಾನ ಪರಿಷತ್‌ನ ದಕ್ಷಿಣ ಶಿಕ್ಷಕರ ಕ್ಷೇತ್ರದ ಜೆಡಿಎಸ್, ಬಿಜೆಪಿ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದ ಪರ ಮತಯಾಚಿಸಿದರು. ಈ ವೇಳೆ ತಾಲೂಕು ಬಿಜೆಪಿ ಅಧ್ಯಕ್ಷ ರಾಜೇಂದ್ರ, ಮಾಜಿ ಶಾಸಕ ಎಸ್.ಸಿ.ಬಸವರಾಜ್, ಮುಖಂಡರಾದ ಕಿರಣ್, ಜಯರಾಮೇಗೌಡ, ವಿಕ್ರಂರಾಜ್, ಸಂತೋಷ್ ಸೇರಿದಂತೆ ಇನ್ನಿತರರಿದ್ದರು.


ಬೈಕ್‌ಗೆ ಬೊಲೆರೋ ಗೂಡ್ಸ್ ವಾಹನ ಡಿಕ್ಕಿ: ಸವಾರ ಸಾವು



ಮಲ್ಲುಂಡಿ, ಮೇ 31– ಬೈಕ್‌ಗೆ ಬೊಲೆರೋ ಗೂಡ್ಸ್ ವಾಹನ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಸಮೀಪದ ಚನ್ನಪಟ್ಟಣ ಗ್ರಾಮದ ಬಳಿ ನಡೆದಿದೆ.

ಸಿದ್ದೇಗೌಡನಹುಂಡಿ ಗ್ರಾಮದ ಮಹದೇವಸ್ವಾಮಿ (32) ಸಾವನ್ನಪ್ಪಿದವರು. ಈತ ಬೈಕ್‌ನಲ್ಲಿ ಚನ್ನಪಟ್ಟಣ ಗ್ರಾಮದಿಂದ ಸ್ವಗ್ರಾಮಕ್ಕೆ ಬರುತ್ತಿದ್ದ ವೇಳೆ ಹುರ ಗ್ರಾಮದಿಂದ ಕೇರಳಕ್ಕೆ ತೆರಳುತ್ತಿದ್ದ ಬೊಲೆರೋ ಗೂಡ್ಸ್ ವಾಹನ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಮಹದೇವಸ್ವಾಮಿ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಹುಲ್ಲಹಳ್ಳಿ ಠಾಣೆ ಎಸ್‌ಐ ಚೇತನ್ ಕುಮಾರ್ ಪರಿಶೀಲಿಸಿ ಪ್ರಕರಣ ದಾಖಲಿಸಿಕೊಂಡು ಶವವನ್ನು ನಂಜನಗೂಡು ಸಾರ್ವಜನಿಕ ಆಸ್ಪತ್ರೆ ಶವಾಗಾರಕ್ಕೆ ರವಾನಿಸಿದರು.

ರಾಂಪುರದಲ್ಲಿ ಬೋನಿಗೆ ಬಿದ್ದ ಚಿರತೆ



ಬೋನಿಗೆ ಬಿದ್ದಿರುವ ಚಿರತೆ.

ನಂಜನಗೂಡು, ಮೇ 31– ತಾಲೂಕಿನ ರಾಂಪುರ ಗ್ರಾಮದ ನಿವಾಸಿ ಗಣೇಶ್ ನಾಯ್ಕ ಎಂಬುವರ ಜಮೀನಿನಲ್ಲಿ ಅರಣ್ಯ ಇಲಾಖೆ ಇರಿಸಿದ್ದ ಬೋನಿಗೆ ಗುರುವಾರ ರಾತ್ರಿ ಗಂಡು ಚಿರತೆ ಬಿದ್ದಿದೆ.

ಈ ಭಾಗದಲ್ಲಿ ಚಿರತೆ ಉಪಟಳ ನೀಡುತ್ತಿರುವ ಬಗ್ಗೆ ವ್ಯಾಪಕ ದೂರುಗಳು ಕೇಳಿ ಬಂದ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಇರಿಸಿದ್ದ ಬೋನಿನಲ್ಲಿ ಚಿರತೆ ಸೆರೆಯಾಗಿದೆ. ಇದೀಗ ಚಿರತೆಯನ್ನು ನಗರದ ವಲಯ ಅರಣ್ಯಾಧಿಕಾರಿಗಳ ಕಚೇರಿಯಲ್ಲಿ 3 ದಿನಗಳ ಕಾಲ ಆರೋಗ್ಯ ತಪಾಸಣೆ ನಡೆಸಲು ಇರಿಸಲಾಗಿದೆ. ಹಿರಿಯ ಅಧಿಕಾರಿಗಳ ಆದೇಶ ಪಡೆದು ಚಿರತೆಯನ್ನು ಅರಣ್ಯಕ್ಕೆ ಬಿಡಲಾಗುವುದು ಎಂದು ಆರ್‌ಎಫ್‌ಓ ನಿತೀನ್ ಕುಮಾರ್ ತಿಳಿಸಿದರು.

ಚುನಾವಣೆಯಲ್ಲಿ ಮರಿತಿಬ್ಬೇಗೌಡರಿಗೆ ದಾಖಲೆಯ ಜಯ

ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ವಿಶ್ವಾಸ



ಮರಿತಿಬ್ಬೇಗೌಡರ ಪರ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಮತಯಾಚಿಸಿದರು.

ಹುಣಸೂರು, ಮೇ 31– ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರು ಐದನೇ ಬಾರಿಗೆ ದಾಖಲೆಯ ಜಯ ಸಾಧಿಸಲಿದ್ದಾರೆ ಎಂದು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ವಿಶ್ವಾಸ ವ್ಯಕ್ತಪಡಿಸಿದರು.

ತಾಲೂಕಿನ ಕರಿಮುದ್ದನಹಳ್ಳಿ ಪದವಿ ಪೂರ್ವ ಕಾಲೇಜು ಮತ್ತು ಪ್ರೌಢಶಾಲೆ, ಧರ್ಮಪುರದ ಸರ್ಕಾರಿ ಪ್ರೌಢಶಾಲೆ, ಮೊರಾರ್ಜಿ ದೇಸಾಯಿ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ರತ್ನಪುರಿ ಸೇರಿದಂತೆ ಹುಣಸೂರು ನಗರದ ವಿವಿಧ ಶಾಲಾ ಕಾಲೇಜುಗಳಿಗೆ ಕಾಂಗ್ರೆಸ್ ಮುಖಂಡರೊಂದಿಗೆ ಭೇಟಿ ನೀಡಿ ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರ ಪರ ಮತಯಾಚಿಸಿ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರ ಶಿಕ್ಷಕರ ಏಳಿಗೆ ಮತ್ತು ಶೈಕ್ಷಣಿಕ ಕ್ಷೇತ್ರದ ಅಭಿವೃದ್ಧಿಗೆ ಆದ್ಯತೆ ನೀಡುತ್ತಿದ್ದು ಇದನ್ನು ಅರಿತು ಪ್ರಭುದ್ಧ ಶಿಕ್ಷಕ ಮತದಾರರು ಕಾಂಗ್ರೆಸ್ ಅಭ್ಯರ್ಥಿ ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಮಾತನಾಡಿ, ಹೊರಗುತ್ತಿಗೆ ನೌಕರಿಯಲ್ಲಿ ಮೀಸಲಾತಿ ಜಾರಿಗೆ ತರಲು ನಿರ್ಧರಿಸಿರುವ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರವು 7ನೇ ವೇತನ ಆಯೋಗ ರಚಿಸಿ ಈಗಾಗಲೇ ವರದಿ ಪಡೆದಿದ್ದು ಚುನಾವಣಾ ನೀತಿ ಸಂಹಿತೆ ಮುಗಿದ ನಂತರ ಅದನ್ನು ಅನುಷ್ಠಾನಗೊಳಿಸಲು ಬದ್ಧವಾಗಿದೆ. ಹೀಗಾಗಿ ಕಳೆದ 4 ಅವಧಿಯಲ್ಲಿ ಪರಿಷತ್ ಸದಸ್ಯರಾಗಿ ಪ್ರಾಮಾಣಿಕ ಕೆಲಸ ಮಾಡಿರುವ ಮರಿತಿಬ್ಬೇಗೌಡರು ಸದಾ ಶಿಕ್ಷರ ಒಳಿತಿಗಾಗಿ ಚಿಂತಿಸುತ್ತಿದ್ದು, ಅವರು ಚುನಾಯಿತರಾದರೆ ಭವಿಷ್ಯದಲ್ಲಿ ಶಿಕ್ಷರಿಗೆ ಉತ್ತಮ ಕಾರ್ಯ ಯೋಜನೆಗಳನ್ನು ತರಲು ಅನುಕೂಲವಾಗಲಿದೆ. ಇದನ್ನು ಅರಿತು ಶಿಕ್ಷಕ ಬಾಂಧವರು ಕಾಂಗ್ರೆಸ್ ಅಭ್ಯರ್ಥಿಗೆ ಮತ ಚಲಾಯಿಸಬೇಕೆಂದು ಮನವಿ ಮಾಡಿದರು.

ಲೋಕಸಭಾ ಚುನಾವಣೆ ಮತ ಎಣಿಕೆ ಜೂ.4ರಂದು ನಡೆಯಲಿದೆ. ಮತ ಎಣಿಕೆಗೆ ಹೆಚ್ಚು ಶಿಕ್ಷಕರನ್ನೇ ನೇಮಕ ಮಾಡುತ್ತಾರೆ. ಆದರೆ ಕೇಂದ್ರ ಚುನಾವಣಾ ಆಯೋಗ ಜೂ.3 ರಂದು ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆ ನಡೆಸುತ್ತಿರುವುದು ಅಚ್ಚರಿ ತಂದಿದೆ ಎಂದರು.

ಈ ವೇಳೆ ಕಾಂಗ್ರೆಸ್ ಅಧ್ಯಕ್ಷ ಟಿ.ವಿ.ನಾರಾಯಣ್, ರಮೇಶ್, ಕಾರ್ಯಾಧ್ಯಕ್ಷ ವಕೀಲ ಪುಟ್ಟರಾಜ್, ಮಾಜಿ ಅಧ್ಯಕ್ಷ ಬಸವರಾಜ್, ಮಾಜಿ ದರಖಾಸ್ತು ಸಮಿತಿ ಸದಸ್ಯ ಚಿಕ್ಕಸ್ವಾಮಿ, ಕುಮಾರ್, ರಾಘು, ಸತೀಶ್, ಶಶಿಕುಮಾರ್, ಮಾದೇವ್, ಪಿ.ಟಿ.ಮಹದೇವ್, ಚೇತನ್ ಸೇರಿದಂತೆ ನೂರಾರು ಕಾರ್ಯಕರ್ತರು ಸೇರಿದಂತೆ ಇನ್ನಿತರರಿದ್ದರು.

ಶಿಕ್ಷಕರ ಸಮಸ್ಯೆ ಇತ್ಯರ್ಥಕ್ಕೆ ಸಿದ್ದರಾಮಯ್ಯ ಸರ್ಕಾರ ಬದ್ಧ

ಮರಿತಿಬ್ಬೇಗೌಡರ ಪರ ಮತಯಾಚಿಸಿದ ಮಾಜಿ ಶಾಸಕ ಡಾ.ಯತೀಂದ್ರ



ಮರಿತಿಬ್ಬೇಗೌಡರ ಪರ ಮಾಜಿ ಶಾಸಕ ಡಾ.ಯತೀಂದ್ರ ಮತಯಾಚಿಸಿದರು.

ತಿ.ನರಸೀಪುರ, ಮೇ 31– ಶಿಕ್ಷಕರ ಸಮಸ್ಯೆಗಳಿಗೆ ಪರಿಹಾರ ದೊರಕಿಸಿಕೊಡುವ ನಿಟ್ಟಿನಲ್ಲಿ ಶ್ರಮಿಸುತ್ತಿರುವ ಮರಿತಿಬ್ಬೇಗೌಡರಿಗೆ ಶಿಕ್ಷಕ ಮತದಾರರು ಈ ಬಾರಿ ಪ್ರಥಮ ಪ್ರಾಶಸ್ತ್ಯದ ಮತ ನೀಡಿ ಆಯ್ಕೆ ಮಾಡಬೇಕೆಂದು ಮಾಜಿ ಶಾಸಕ ಡಾ.ಯತೀಂದ್ರ ಮನವಿ ಮಾಡಿದರು.

ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರ ಪರ ಪಟ್ಟಣದ ಸರ್ಕಾರಿ ಪ್ರೌಢಶಾಲೆಗೆ ಭೇಟಿ ನೀಡಿ ಮತಯಾಚಿಸಿ ಮಾತನಾಡಿದ ಅವರು, ಮರಿತಿಬ್ಬೇಗೌಡರಿಗೆ ಶಿಕ್ಷರ ಸಮಸ್ಯೆಗಳ ಸಂಪೂರ್ಣ ಅರಿವಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆ ನಿಕಟ ಸಂಪರ್ಕ ಹೊಂದಿರುವ ಅವರು ಶಿಕ್ಷರ ಸಮಸ್ಯೆಗಳನ್ನು ಬಗೆಹರಿಸಲಿದ್ದಾರೆ ಎಂದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದು ಹೊಸ ಪಿಂಚಣಿ ಪದ್ಧತಿ ರದ್ದು ಮಾಡಿ ಹಳೇ ಪಿಂಚಣಿ ವ್ಯವಸ್ಥೆ ಮರು ಜಾರಿ ಮಾಡಲಿದೆ. ಶಿಕ್ಷರು ಮತ್ತು ಪದವೀಧರರ ಸಮಸ್ಯೆ ಇತ್ಯರ್ಥಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ನವರ ಸರ್ಕಾರ ಬದ್ಧವಾಗಿದೆ ಎಂದರು.

ಕೆಪಿಸಿಸಿ ಕಾರ್ಯದರ್ಶಿ ವರುಣ ಮಹೇಶ್ ಮಾತನಾಡಿ, ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರಿಗೆ ಮತ ನೀಡುವ ಮೂಲಕ ಹೆಚ್ಚು ಮತಗಳ ಅಂತರದಿಂದ ಆಯ್ಕೆ ಮಾಡಬೇಕೆಂದು ಶಿಕ್ಷಕ ಮತದಾರರಲ್ಲಿ ಮನವಿ ಮಾಡಿದರು.

ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸಿ, ಶಿಕ್ಷಕರು ಮತ್ತು ಶಿಕ್ಷಣ ಕ್ಷೇತ್ರದ ಸಮಸ್ಯೆಗಳ ಬಗ್ಗೆ ಸಂಪೂರ್ಣ ಅರಿವಿರುವ ಮರಿತಿಬ್ಬೇಗೌಡರು ಸರ್ಕಾರದ ಗಮನ ಸೆಳೆದು ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನಿಸುವ ಸರಳ ವ್ಯಕ್ತಿ. ಇಂತಹ ವ್ಯಕ್ತಿಯನ್ನು ಆಯ್ಕೆ ಮಾಡಬೇಕೆಂದರು.

ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮುದ್ದೇಗೌಡ, ಜಿಪಂ ಮಾಜಿ ಸದಸ್ಯ ಕೆ.ಮಹದೇವ್, ಎಪಿಎಂಸಿ ಮಾಜಿ ಅಧ್ಯಕ್ಷ ಅನಿಲ್ ಕುಮಾರ್, ಪುರಸಭೆ ಮಾಜಿ ಅಧ್ಯಕ್ಷ ಟಿ.ಎಂ.ನಂಜುಂಡ ಸ್ವಾಮಿ, ಸದಸ್ಯ ತುಂಬಲ ಪ್ರಕಾಶ್, ಭೈರಾಪುರ ಗ್ರಾಪಂ ಮಾಜಿ ಸದಸ್ಯರಾದ ಹೇಮಂತ್ ಕುಮಾರ್, ಎಂ.ಮಿಥುನ್ ಮತ್ತಿತರರಿದ್ದರು.

ತಾಂಡವಪುರ ಎಂಐಟಿ ಕಾಲೇಜು ವಿದ್ಯಾರ್ಥಿಗಳ ಆವಿಷ್ಕಾರ



ಎಂಐಟಿ ಕಾಲೇಜಿನ ಮೆಕ್ಯಾನಿಕಲ್ ವಿಭಾಗದ ವಿದ್ಯಾರ್ಥಿಗಳು ಆವಿಷ್ಕರಿಸಿದ ನೂತನ ಯಂತ್ರಗಳ ಪ್ರಾತ್ಯಕ್ಷಿಕೆಯನ್ನು ಕಾಲೇಜಿನ ಪ್ರಾಂಶುಪಾಲ ವೈ.ಟಿ.ಕೃಷ್ಣೇಗೌಡ ನೀಡಿದರು.

ನಂಜನಗೂಡು, ಮೇ 31– ತಾಲೂಕಿನ ತಾಂಡವಪುರ ಎಂಐಟಿ ಕಾಲೇಜಿನ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿಗಳು ಏಡಿ ಹಾಗೂ ಕೋಳಿ ಮೊಟ್ಟೆ ಚಿಪ್ಪನ್ನು ಬಳಸಿ ತಯಾರಿಸಿದ ಕ್ರಾಪ್ಟಲ್ ಪೌಡರ್‌ನಿಂದ ಎಲೆಕ್ಟ್ರಿಕ್ ವಾಹನಗಳ ಬಾಡಿ ಪ್ರೇಮ್, ಕೈಪಂಪ್ ಬಳಸಿ ನೀರೆತ್ತುವ ಯಂತ್ರ, ಸಿಎನ್‌ಸಿ ಮಿಲ್ಲಿಂಗ್ ಯಂತ್ರ, ಡ್ರೈನೇಜ್ ಕ್ಲಿನಿಂಗ್ ಯಂತ್ರ, ಸೌರ ವಿದ್ಯುತ್ ಬಳಕೆ, ಉಳುಮೆ ಯಂತ್ರಗಳನ್ನು ಆವಿಷ್ಕರಿಸಿದ್ದಾರೆ ಎಂದು ಕಾಲೇಜಿನ ಪ್ರಾಂಶುಪಾಲ ವೈ.ಟಿ. ಕೃಷ್ಣೇಗೌಡ ತಿಳಿಸಿದರು.

ಕಾಲೇಜಿನ ಆವರಣದಲ್ಲಿ ವಿದ್ಯಾರ್ಥಿಗಳು ತಯಾರಿಸಿರುವ ಯಂತ್ರಗಳ ಪ್ರಾತ್ಯಕ್ಷಿಕೆ ಪ್ರದರ್ಶಿಸಿ, ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಏಡಿ ಹಾಗೂ ಕೋಳಿಮೊಟ್ಟೆ ಚಿಪ್ಪನ್ನು ಬಳಸಿ ತಯಾರಿಸಿದ ಕ್ರಾಪ್ಟಲ್ ಪೌಡರ್ ಹಗುರ ಹಾಗೂ ಧೃಡವಾಗಿದ್ದು, ಎಲೆಕ್ಟ್ರಿಕ್ ವಾಹನಗಳ ಬಾಡಿ ಪ್ರೇಮ್ ತಯಾರಿಕೆಗೆ ಬಳಸಬಹುದಾಗಿದೆ. ವಿದ್ಯುತ್ ಬಳಸದೆ ಕೈ ಪಂಪ್ ಬಳಸಿ ಕೃಷಿ ಹೊಂಡ, ಬಾವಿಯಿಂದ 3 ಇಂಚಿನವರೆಗೆ ನೀರನ್ನು ಪಂಪ್ ಮಾಡಬಹುದಾಗಿದೆ.

ಸಿಎನ್‌ಸಿ ಮಿಲ್ಲಿಂಗ್ ಯಂತ್ರ ಮರದ ವಿವಿಧ ಮಾದರಿಯ ಉಪಕರಣ ತಯಾರಿಕೆಗೆ ಸೂಕ್ತವಾಗಿದೆ. ಸೌರ ಶಕ್ತಿಯಿಂದ ಚಲಿಸುವ ಉಳುಮೆ ಯಂತ್ರ ರೈತರ ಉಳುಮೆ, ನಾಟಿ ಮುಂತಾದ ಕೃಷಿ ಕೆಲಸಗಳನ್ನು ಸುಲಭಗೊಳಿಸುತ್ತವೆ. ಉಳುಮೆ ಯಂತ್ರದಲ್ಲಿ ಸೌರಶಕ್ತಿ ಫಲಕ ಅಳವಡಿಸಲಾಗಿದ್ದು, ಸೌರಶಕ್ತಿಯಿಂದ ಬ್ಯಾಟರಿ ಚಾರ್ಜ್ ಆಗಿ ಸತತ 25 ಎಕರೆ ಉಳುಮೆ ಮಾಡಬಹುದಾಗಿದೆ. ಡ್ರೈನೇಜ್ ಕ್ಲಿನಿಂಗ್ ಯಂತ್ರ ಏರಿ ನೀರಿನ ಘನ ತ್ಯಾಜ್ಯ ಬೇರ್ಪಡಿಸಿ ತ್ಯಾಜ್ಯವನ್ನು ಬಕೆಟ್‌ಗಳಲ್ಲಿ ಸಂಗ್ರಹಿಸುತ್ತದೆ. ಪೌರ ಕಾರ್ಮಿಕರು ದೈಹಿಕ ಶ್ರಮ ಬಳಸಿ ಡ್ರೈನೇಜ್ ಶುಚಿಗೊಳಿಸುವಾಗ ಕೊಳಚೆ ನೀರಿನಿಂದ ಉಂಟಾಗುವ ಸೋಂಕು ರೋಗಗಳಿಂದ ಅವರನ್ನು ರಕ್ಷಿಸುತ್ತದೆ ಎಂದರು.

ಹೊಸ ಬಹುಪಯೋಗಿ ಯಂತ್ರಗಳನ್ನು ಆವಿಷ್ಕರಿಸಿದ ಕಾಲೇಜಿನ ಮೆಕ್ಯಾನಿಕ್ ವಿಭಾಗದ ವಿದ್ಯಾರ್ಥಿಗಳಾದ ಪ್ರಮೋದ್, ವೈ.ಕೆ.ದರ್ಶನ್, ಅಮೃತ್‌ಗೌಡ, ಎಂ.ನಂದೀಶ್, ರಾಘವೇಂದ್ರ, ಮಂಜುನಾಥ್, ಸುಪರ್ಣ, ಚಂದ್ರಶೇಖರ್, ಅಖಿಲ, ಪ್ರಜ್ವಲ್, ಕುಮಾರ್, ರವಿಶಂಕರ್, ಸುಜಯ್, ಎನ್.ಎಂ.ಪೊನ್ನಣ್ಣ, ಮೊಹಮ್ಮದ್ ಅಬುತಲ ಹಾಗೂ ಮಾರ್ಗದರ್ಶಕರಾದ ಪ್ರೊ ಟಿ.ಕೆ.ವೆಂಟಟೇಗೌಡ, ಪ್ರೊ.ಕೆ.ಎಸ್. ಕೃಪೇಶ್, ಪ್ರೊ.ಮಲ್ಲಿಕಾರ್ಜುನ್, ಪ್ರೊ.ಕೆ. ಅಜಯ್ ಕುಮಾರ್ ಅವರುಗಳನ್ನು ಸಂಸ್ಥೆ ಅಭಿನಂದಿಸುತ್ತದೆ ಎಂದರು.





ಸಾರ್ವಜನಿಕ ಪ್ರಕಟಣೆ

ಈ ಸಾರ್ವಜನಿಕ ಪ್ರಕಟಣೆಯ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇಂದರೆ, ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ನಮ್ಮ ಕಕ್ಷಿದಾರರಾದ ಬೆಂಗಳೂರು ನಗರ, ಬನಶಂಕರಿ 2 ನೇ ಹಂತ, 14 ನೇ ಮೇನ್, 19ನೇ ಕ್ರಾಸ್, ನಂ.723 ರಲ್ಲಿ ವಾಸವಾಗಿರುವ ಶ್ರೀ ಬಿ.ಕುಮಾರ್‌ರವರ ಧರ್ಮಪತ್ನಿಯಾದ ಸುಮಾರು 49 ವರ್ಷ ವಯಸ್ಸಿನ ಶ್ರೀಮತಿ ಆರ್.ಪಿ. ಮಂಜುಳ ರವರು ಮೈಸೂರು ನಗರ, ಶ್ರೀರಾಂಪುರ 2ನೇ ಹಂತ, ಭವ್ಯ ಭಾರತ ಬಡಾವಣೆ, ಸರ್ವೆ ನಂ.54/8, ಮನೆ ನಂ.4 ರಲ್ಲಿ ವಾಸವಾಗಿರುವ ಲೇಟ್ ಕೃಷ್ಣಾಜೀರಾವ್ ರವರ ಮಗನಾದ ಸುಮಾರು 60 ವರ್ಷ ವಯಸ್ಸಿನ ಶ್ರೀ ಮಂಜುನಾಥ ರಾವ್ ಬೋಬಡೆ ಮತ್ತು ಅವರ ಧರ್ಮಪತ್ನಿಯಾದ ಶ್ರೀಮತಿ ರೇಖಾ ಬಾಯಿ ಹಾಗೂ ಅವರ ಮಕ್ಕಳಾದ ಶ್ರೀ ಅನಿಲ್ ಓಂಕಾರ್ ಬೋಬಡೆ ಮತ್ತು ಶ್ರೀ ಆಕಾಶ್ ಓಂಕಾರ್ ಬೋಬಡೆರವರಿಂದ ಷೆಡ್ಯೂಲ್ ಸ್ವತ್ತುಗಳನ್ನು ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು, ಅದರಂತೆ ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಿ ನಕಲು ದಾಖಲೆಗಳನ್ನು ಸದರಿಯವರು ನಮ್ಮ ಕಕ್ಷಿದಾರರಿಗೆ ಒದಗಿಸಿದ್ದು, ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಿಸಿದಂತೆ ಯಾರಿಗಾದರೂ ಯಾವುದೇ ರೀತಿಯ ಸಂಬಂಧ, ಹಕ್ಕು, ಹಿತಾಸಕ್ತಿ ಇದ್ದಲ್ಲಿ ಸಂಬಂಧಪಟ್ಟವರು ಈ ಪತ್ರಿಕಾ ಪ್ರಕಟಣೆ ಹೊರಡಿಸಿದ 7 ದಿವಸದೊಳಗಾಗಿ ನಮ್ಮ ಕಕ್ಷಿದಾರರಿಗಾಗಲಿ ಅಥವಾ ನಮ್ಮಗಾಗಲೀ ಲಿಖಿತವಾಗಿ ಸಂಬಂಧಪಟ್ಟ ದಾಖಲೆಗಳೊಡನೆ ತಮ್ಮ ತಕರಾರನ್ನು ಸಲ್ಲಿಸತಕ್ಕದ್ದು, ಮೇಲ್ಕಂಡ ಸಮಯದೊಳಗೆ ಯಾವುದೇ ತಕರಾರು ಬರದೇ ಇದ್ದ ಪಕ್ಷದಲ್ಲಿ ನಮ್ಮ ಕಕ್ಷಿದಾರರು ಷೆಡ್ಯೂಲ್‌ನಲ್ಲಿ ತೋರಿಸಿರುವ ಸ್ವತ್ತುಗಳಿಗೆ ಸಂಬಂಧಿಸಿದಂತೆ ನೊಂದಣಿ ಕ್ರಯ ಪತ್ರವನ್ನು ಮಾಡಿಸಿಕೊಳ್ಳಲು ಇಚ್ಛಿಸಿರುತ್ತಾರೆ. ಷೆಡ್ಯೂಲ್ ಸ್ವತ್ತುಗಳ ಸಂಬಂಧ ಪತ್ರಿಕಾ ಪ್ರಕಟಣೆಯ ಅವಧಿಯ ತರುವಾಯ ಬರುವ ಯಾವುದೇ ತಂಟೆ-ತಕರಾರುಗಳಿಗೆ ನಮ್ಮ ಕಕ್ಷಿದಾರರು ಬದ್ಧರಾಗಿರುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸುತ್ತಾರೆ.

ಷೆಡ್ಯೂಲ್ ಸ್ವತ್ತುಗಳ ವಿವರ

1. ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಹುಲ್ಲಹಳ್ಳಿ ಹೋಬಳಿ, ತರಗನಹಳ್ಳಿ ಗ್ರಾಮದಲ್ಲಿನ ಸರ್ವೆ ನಂ.173/1 (ಒಂದು ನೂರ ಎಪ್ಪತ್ತಮೂರು ಸಬ್ ನಂಬರ್ ಒಂದು) ರಲ್ಲಿರುವ ಪೂರ್ತಾ ವಿಸ್ತೀರ್ಣ 3 ಎಕರೆ 31 ಗುಂಟೆ, ಪೂಟ್ ಖರಾಬು 0.06 ಗುಂಟೆ ಜಾತಾ ಉಳಿಕೆ 3 ಎಕರೆ 25 ಗುಂಟೆ (ಮೂರು ಎಕರೆ ಇಪ್ಪತ್ತೈದು ಗುಂಟೆ), ಆಕಾರ 6.16 ಪೈಸೆವುಳ್ಳ ಖುಷ್ಕಿ ಜಮೀನು,
2. ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಹುಲ್ಲಹಳ್ಳಿ ಹೋಬಳಿ, ತರಗನಹಳ್ಳಿ ಗ್ರಾಮದಲ್ಲಿನ ಸರ್ವೆ ನಂ.173/2 (ಒಂದು ನೂರ ಎಪ್ಪತ್ತಮೂರು ಸಬ್ ನಂಬರ್ ಎರಡು) ಹೊಸದಾಗಿ ಪೋಡಿಯಾಗಿರುವ ಸರ್ವೆ ನಂ.173/3 (ಒಂದು ನೂರ ಎಪ್ಪತ್ತಮೂರು ಸಬ್ ನಂಬರ್ ಮೂರು) ರಲ್ಲಿರುವ ಪೂರ್ತಾ ವಿಸ್ತೀರ್ಣ 2 ಎಕರೆ 30 ಗುಂಟೆ, ಪೂಟ್ ಖರಾಬು 0.03 ಗುಂಟೆ ಜಾತಾ ಉಳಿಕೆ 2 ಎಕರೆ 27 ಗುಂಟೆ (ಎರಡು ಎಕರೆ ಇಪ್ಪತ್ತೇಳು ಗುಂಟೆ), ಆಕಾರ 4.58 ಪೈಸೆವುಳ್ಳ ಖುಷ್ಕಿ ಜಮೀನು,
3. ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಹುಲ್ಲಹಳ್ಳಿ ಹೋಬಳಿ, ತರಗನಹಳ್ಳಿ ಗ್ರಾಮದಲ್ಲಿನ ಸರ್ವೆ ನಂ.174 (ಒಂದು ನೂರ ಎಪ್ಪತ್ತನಾಲ್ಕು) ರಲ್ಲಿರುವ ಪೂರ್ತಾ ವಿಸ್ತೀರ್ಣ 4 ಎಕರೆ 03 ಗುಂಟೆ, ಪೂಟ್ ಖರಾಬು 0.03 ಗುಂಟೆ ಜಾತಾ ಉಳಿಕೆ 4 ಎಕರೆ (ನಾಲ್ಕು ಎಕರೆ), ಆಕಾರ 6.32 ಪೈಸೆವುಳ್ಳ ಖುಷ್ಕಿ ಜಮೀನು, ಒಟ್ಟು ಮೇಲ್ಕಂಡ ಮೂರು ಸರ್ವೆ ನಂಬರ್‌ಗಳ ಒಟ್ಟು ವಿಸ್ತೀರ್ಣ 10 ಎಕರೆ 12 ಗುಂಟೆ (ಹತ್ತು ಎಕರೆ ಹನ್ನೆರಡು ಗುಂಟೆ) ಖುಷ್ಕಿ ಜಮೀನುಗಳು.

ಜಿ.ವಿ.ಶ್ರೀನಿವಾಸ, ವಕೀಲರು.
ಮೋ : 9902438100
ನಂ.2961/15, 1 ನೇ ಮಹಡಿ, 2 ನೇ ಮೇನ್,
5 ನೇ ಅಡ್ಡರಸ್ತೆ, ಸರಸ್ವತಿಪುರಂ, ಮೈಸೂರು
ಸ್ಥಳ : ಮೈಸೂರು, ದಿನಾಂಕ : 31.05.2024

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀಮತಿ ಟಿ.ಪಿ.ಪದ್ಮಾವತಿ

ಇವರು ದಿ. 22-5-2024 ಬುಧವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿ. 01-6-2024 ಶನಿವಾರ , ಪಂಡಿತ್ ನಾರಾಯಣಚಾರ್ಯ ಕಲ್ಯಾಣ ಮಂಟಪ, ಚಾಮರಾಜ ಜೋಡಿ ರಸ್ತೆ, ರಾಮಸ್ವಾಮಿ ಸರ್ಕಲ್ ಹತ್ತಿರ, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು: ಶ್ರೀ ಟಿ ಪಿ ಗುರುನಾಥಶೆಟ್ಟಿ ಮತ್ತು ಟಿ.ಪಿ.ಬಾಲರಾಜ್, ಸಹೋದರಿಯರು, ಅಳಿಯಂದಿರು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು

ಭೋಜನ: ಮಧ್ಯಾಹ್ನ 1 ಗಂಟೆಗೆ

